ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 43 ಅಕ್ಟೋಬರ್ 23, 2005 ಬೆಲೆ ರೂ. 3.00



ಘೋರ ಭೂಕಂಪ ಭಾರತ-ಪಾಕ್ ಜಂಟಿಯಾಗಿ ಎದುರಿಸಲಿ

ನಿವೇಶನ-ರೇಷನ್‌ಗಾಗಿ ತೀವ್ರ ಚಳುವಳಿ ಸಿಪಿಐ(ಎಂ) ನಿರ್ಧಾರ

ಮಂಡ್ಯ : ಗುಡಿಸಲು ವಾಸಿಗಳ ಬೃಹತ್ ಹೋರಾಟ




ಬಿಜೆಪಿ - ವೈಫಲ್ಯಗಳ ಯಾತ್ರೆ



- ಗಾಂಧೀಜಿ : ಜಾತ್ಯಾತೀತತೆ ಮತ್ತು ಕೋಮುವಾದ



- ಜನಮುಖಿ ದಸರಾಗೆ ಬರಗೂರು ಕರೆ



- 'ಹೊಸ ವಿಶ್ವ ಸಂಸ್ಥೆ'ಗೆ ಚವೇಝ್ ಆಗ್ರಹ

"ಕ್ರೂರಿಯಾದ ಮಾನವ- ಅವನು ತನ್ನನ್ನು ಮುಸ್ಲಿಂ ಎಂದು ಹೇಳಿಕೊಳ್ಳಲಿ ಅಥವಾ ಹಿಂದೂ ಎಂದು ಹೇಳಿಕೊಳ್ಳಲಿ - "ಕಣ್ಣೀರ ಕಾಲುವೆ"ಯಿಂದ ಸಂಹಾರಕ್ರಿಯೆಗಿಳಿದಿರುವುದನ್ನು ನಿಸ್ಸಹಾಯಕನಾಗಿ ನಿಂತು ನೋಡುವ ಬದಲು ನನ್ನನ್ನು ಈ ಒಯ್ದುಬಿಡು ಎಂದು ಸರ್ವವ್ಯಾಪಿ ಶಕ್ತಿಯನ್ನು ಕೇಳಿಕೊಳ್ಳುತ್ತೇನೆ" - ಇದು 58 ವರ್ಷಗಳ ಹಿಂದೆ ಗಾಂಧೀಜಿಯ ಉದ್ಗಾರ. ಅವರ ಜನ್ಮದಿನದ ಸಂದರ್ಭದಲ್ಲಿ ನಿಮ್ಮ ಸಂದೇಶವೇನು ಎಂಬ ಪತ್ರಕರ್ತನೊಬ್ಬನ ಪ್ರಶ್ನೆಗೆ ಉತ್ತರವಾಗಿ ಬಂದ ಉದ್ಗಾರ. ಆಗಷ್ಟೇ ಅವರ ನೇತೃತ್ವದ ಹೋರಾಟದ ಫಲವಾಗಿಯೇ ದೇಶ ಸ್ವತಂತ್ರಗೊಂಡಿತ್ತು. ಆದರೆ ಸ್ವಾತಂತ್ರ್ಯದೊಂದಿಗೇ ಬಂದ ದೇಶವಿಭಜನೆ, ಅದರೊಂದಿಗೇ ವ್ಯಾಪಿಸಿದ ಕೋಮುಹಿಂಸಾಚಾರ ಅವರನ್ನು ಖಿನ್ನವಾಗಿಸಿತ್ತು. "ಈ ರಂಗದಲ್ಲಿ ಗಾಂಧೀಜಿಯ ಪಾತ್ರ ಉಜ್ವಲವಾಗಿದ್ದರೂ ಅವರು ಭಾಗಶಃ ಯಶಸ್ಸು ಪಡೆದರಷ್ಟೇ. ಇದು ಅವರ ಪ್ರಧಾನ ರಾಜಕೀಯ ವಿಫಲತೆಯಾಗಿತ್ತು. ಜಾತ್ಯಾತೀತತೆಗೆ, ನಿರ್ದಿಷ್ಟವಾಗಿ ಹಿಂದೂ- ಮುಸ್ಲಿಂ ಐಕ್ಯತೆಗೆ ಸಂಪೂರ್ಣವಾಗಿ ಕಟಿಬದ್ಧವಾಗಿದ್ದರೂ ಅವರಿಗೆ ಕೋಮುವಾದಿ ದ್ವೇಷ ಹಾಗೂ ಕೋಮುವಾದೀ ವಿಭಜನೆ ಮಾಡುವವರನ್ನು ಯಶಸ್ವಿಯಾಗಿ ಎದುರಿಸಲಾಗಲಿಲ್ಲ" ಎನ್ನುತ್ತಾರೆ ಪ್ರಸಿದ್ಧ ಇತಿಹಾಸಜ್ಞ ಡಾ. ಬಿಪಿನ್‌ಚಂದ್ರ ಅವರ ದೀರ್ಘ ಪ್ರಬಂಧದ ಆಯ್ದ ಅಂಶಗಳನ್ನು ನಮ್ಮ ಓದುಗರಿಗಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಕೃಪೆ : 'ಸಹಮತ್'ರವರ ಪ್ರಕಟಣೆ "ಗಾಂಧಿ ರೀಕನ್ಸಿಡರ್ಡ್"(Gandhi Reconsidered).

ಗಾಂಧೀಜಿ

ಜಾತ್ಯತೀತತೆ ಮತ್ತು ಕೋಮುವಾದ

ಜಾತ್ಯಾತೀತತೆ ಮತ್ತು ಕೋಮುವಾದ ಸಮಸ್ಯೆ ಕುರಿತಂತೆ ಗಾಂಧಿಜಿಯವರ ನಿಲುವನ್ನು ಪರಿಶೀಲಿಸುವ ಮೊದಲು ಅವರ ಒಂದು ಮಹಾನ್ ಗುಣವನ್ನು ಗ್ರಹಿಸಿಕೊಳ್ಳುವುದು ಅಗತ್ಯ. ಅವರ ಅಭಿಮಾನಿಗಳೂ ಹಾಗೂ ಟೀಕಾಕಾರರೂ ಸಾಮಾನ್ಯವಾಗಿ ಇದನ್ನು ಅರಿಯದೆ ಅವರೊಬ್ಬ ಎಂದೂ ಬದಲಾಗದ ವ್ಯಕ್ತಿ ಎಂದು ಕಾಣುತ್ತದೆ. ಆದರೆ ವಾಸ್ತವ ಸಂಗತಿಯೆಂದರೆ ಅವರು ಸತತವಾಗಿ 'ಸತ್ಯದೊಡನೆ ಪ್ರಯೋಗ' ನಡೆಸುತ್ತಾ ಸಮಗ್ರ, ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಯ ಬಗ್ಗೆ ತನ್ನ ತಿಳುವಳಿಕೆಯನ್ನು ಬದಲಿಸುತ್ತಾ, ಬೆಳೆಸುತ್ತಾ ಬಂದವರು. ಅವರ ಯೋಚನೆ ಮತ್ತು ಚಟುವಟಿಕೆ ಈ ಎಲ್ಲಾ ವಿಷಯಗಳಲ್ಲಿ ಸದಾ ವಿಕಾಸಗೊಳ್ಳುತ್ತಾ ಬಂದವುಗಳು.

ಹಲವರು ಜಾತಿ ಪದ್ಧತಿ, ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ಬೋಜನ ಮತ್ತು ವಿವಾಹಗಳು, ಟ್ರಸ್ಟಿಶಿಪ್ ಸಿದ್ಧಾಂತ, ಭೂಮಾಲಕ-ರೈತ ಸಂಬಂಧಗಳು, ಬಂಡವಾಳಶಾಹಿ, ಸಮಾಜವಾದ, ಸಂಸದೀಯ ವ್ಯವಸ್ಥೆ, ಧರ್ಮ ಮತ್ತು ರಾಜಕೀಯದ ನಡುವಿನ ಸಂಬಂಧಗಳು, ಯಂತ್ರಗಳ ಬಳಕೆ ಇತ್ಯಾದಿಗಳ ಬಗ್ಗೆ ಅವರ ಆರಂಭಿಕ ಬರವಣಿಗೆಗಳಿಂದ ಉದ್ಧರಿಸುತ್ತಾರೆ. ಆದರೆ ನಿಜ ಸಂಗತಿಯೆಂದರೆ ಮಾನವೀಯ ಮೌಲ್ಯಗಳು, ಸತ್ಯ ಮತ್ತು ಅಹಿಂಸೆಗೆ ಅವರ ಬದ್ಧತೆ ಗಟ್ಟಿಯಾಗಿ ಉಳಿದರೂ, ಮತ್ತು ಇತರೆಲ್ಲಾ ವಿಷಯಗಳ ಬಗ್ಗೆ ಅವರ ಅಭಿಪ್ರಾಯಗಳು ಬದಲಾಗುತ್ತಲೇ ಇದ್ದವು, ಕೆಲವೊಮ್ಮೆ ತೀವ್ರವಾಗಿ, ಬಹುಪಾಲು ತೀವ್ರಗಾಮಿ ದಿಕ್ಕುಗಳಲ್ಲಿ. ಅವರನ್ನು ತುಚ್ಚೀಕರಿಸಲು ಅವರ ಯಾವುದೇ ಉದ್ಗಾರ ಸಾಕು ಎನ್ನುವ ಟೀಕಾಕಾರರು ಹಾಗೂ ಅವರ ಮಾತುಗಳೆಲ್ಲಾ ವೇದವಾಕ್ಯ ಎನ್ನುವ ಅನುಯಾಯಿಗಳು ಅವರ 1933ರ ಹೇಳಿಕೆಯಿಂದ ಏನಾದರೂ ಕಲಿಯಬೇಕು. "ಯಾರಿಗಾದರೂ ನನ್ನ ಎರಡು ಬರವಣಿಗೆಗಳಲ್ಲಿ ಅಸಂಗತತೆ ಕಂಡರೆ, ಅವರಿಗೆ ನನ್ನ ಬುದ್ಧಿಸ್ವಾಸ್ಥ್ಯದ ಬಗ್ಗೆ ಇನ್ನೂ ನಂಬಿಕೆಯಿದ್ದರೆ, ಒಂದೇ ವಿಷಯದ ಬಗ್ಗೆ ನನ್ನ ಅಭಿಪ್ರಾಯಗಳಲ್ಲಿ ನಂತರದ್ದನ್ನೇ ಆರಿಸಿಕೊಳ್ಳುವುದು ಒಳ್ಳೆಯದು" ಎಂದು ಅವರು ಹೇಳಿದ್ದರು.

★ ★ ★

ಕೋಮುವಾದದ ವಿರುದ್ಧ ಗಾಂಧೀಜಿಯ ರಾಜಿಯಿಲ್ಲದ ವಿರೋಧ ಹಾಗೂ ಹೋರಾಟ ಎಲ್ಲರಿಗೂ ತಿಳಿದಿದೆ. ಅಲ್ಲದೆ ಅವರು ಕೋಮುವಾದದ ಎಲ್ಲಾ ವಿಧಗಳನ್ನೂ ವಿರೋಧಿಸಿದರು - ಹಿಂದೂ ಮುಸ್ಲಿಮ್ ಅಥವಾ ಸಿಖ್ "ಧರ್ಮದ ಕಾರಣಕ್ಕೆ ಮನುಷ್ಯನನ್ನು ವಿಭಜಿಸುವುದು ಸಂಪೂರ್ಣ ತಪ್ಪು ಎಂದು ನಾನು ಭಾವಿಸುತ್ತೇನೆ" ಎಂದು ಅವರು ಜನವರಿ 1942ರಲ್ಲಿ ಹೇಳಿದ್ದರು. ವಿಭಿನ್ನ ಧರ್ಮಗಳನ್ನು ಅನುಸರಿಸುವುದರಿಂದ ಅವರ ರಾಜಕೀಯ, ಆರ್ಥಿಕ ಹಿತಾಸಕ್ತಿಗಳು ಭಿನ್ನವಾಗಿರುತ್ತವೆ ಎಂಬ ಮೂಲ ಕೋಮುವಾದಿ ಅಭಿಪ್ರಾಯವನ್ನು ಅವರು ತಿರಸ್ಕರಿಸಿದ್ದರು. "ಭಿನ್ನತೆಯಿದ್ದರೆ ಅದು ಧಾರ್ಮಿಕ ಬಳಕೆ ಮತ್ತು ಆಚರಣೆಯಲ್ಲಿ ಮಾತ್ರ, ಒಂದು ಜಾತ್ಯಾತೀತ ಪ್ರಭುತ್ವಕ್ಕೆ ಸಂಬಂಧಪಟ್ಟಿದ್ದಲ್ಲ" ಎಂದು ಅವರು ಹೇಳಿದ್ದರು.

"ಕೋಮುವಾದ ರಾಷ್ಟ್ರವಿರೋಧಿ"

1940ರಲ್ಲಿ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ತಿರಸ್ಕರಿಸುತ್ತ ಅವರು ಹೀಗಂದಿದ್ದರು - "ಒಬ್ಬ ಬಂಗಾಳೀ ಮುಸಲ್ಮಾನ ಒಂದು ಬಂಗಾಳಿ ಹಿಂದೂವಿನ ಬಾಷೆಯನ್ನೇ ಆಡುತ್ತಾನೆ. ಅದೇ ಬೋಜನ, ಅದೇ ಮನೋರಂಜನೆ, ಅದೇ ವೇಶ ಭೂಷಣ ದಕ್ಷಿಣದಲ್ಲೂ ಭಾರತದ ಜನಸಾಮಾನ್ಯರಾದ ಬಡವರಲ್ಲೂ ಇದನ್ನೇ ಕಾಣಬಹುದು".

ಗಾಂಧೀಜಿ ನಾಗರಿಕ ಹಕ್ಕುಗಳಿಗೆ, ವಾಕ್ ಸ್ವಾತಂತ್ರ್ಯ ಇತ್ಯಾದಿಗಳಿಗೆ ಸಂಪೂರ್ಣ ಬದ್ಧರಾಗಿದ್ದವರು. ಆದರೂ ಕೂಡಾ ಇದಕ್ಕೆ ಒಂದು ಅಪವಾದವಿತ್ತು. ಕೋಮುವಾದ ಮತ್ತು ಕೋಮುದ್ವೇಷವನ್ನು ಹರಡುವವರ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಮಿತಿಗಳನ್ನು ಹಾಕಬೇಕು ಎಂದು ಅವರು 1936ರಲ್ಲೇ ಪ್ರತಿಪಾದಿಸಿದ್ದರು. 1947ರಲ್ಲಿ ಕೂಡಾ ಒಂದು ಪತ್ರಿಕೆಯಲ್ಲಿ ಹಿಂದೂ ಕೋಮುವಾದಿ ಪ್ರಚಾರದ ಬಗ್ಗೆ ಹೇಳುತ್ತಾ ಸ್ವತಂತ್ರ ಭಾರತದಲ್ಲಿ ಇಂತಹ ಪತ್ರಿಕೆಗಳು ಅಸ್ತಿತ್ವದಲ್ಲಿರಬೇಕೆ ಎಂದು ಪ್ರಶ್ನಿಸಿದ್ದರು. ಪತ್ರಿಕಾ ಸ್ವಾತಂತ್ರ್ಯವೆಂದರೆ "ಸಾರ್ವಜನಿಕ ಮನದಲ್ಲಿ ವಿಷ ಸೇರಿಸುವುದೇ?" ಎಂದು ಅವರು ಕೇಳಿದ್ದರು.

ಕೋಮುವಾದ ರಾಷ್ಟ್ರ -ವಿರೋಧಿ ಮಾತ್ರವಲ್ಲ, ಹಿಂದೂ ಕೋಮುವಾದ ಹಿಂದೂ ವಿರೋಧಿ ಹಾಗೂ ಮುಸ್ಲಿಂ ಕೋಮುವಾದ ಇಸ್ಲಾಂ- ವಿರೋಧಿ ಎಂದು ಗಾಂಧೀಜಿ ಒತ್ತಿ ಹೇಳುತ್ತಿದ್ದರು.

"ಹಿಂದೂಗಳನ್ನು ನಾಶ ಮಾಡಿದರೆ ಮುಸ್ಲಿಮರು ಇಸ್ಲಾಮಿಗೆ ಸೇವೆ ಸಲ್ಲಿಸಿದಂತಾಗುವುದಿಲ್ಲ. ನಿಜವೆಂದರೆ ಅವರು ಇಸ್ಲಾಮನ್ನು ಆಮೂಲಕ ನಾಶ ಮಾಡುತ್ತಾರೆ. ಮತ್ತು ಇಸ್ಲಾಮನ್ನು ತಾವು ನಾಶ ಮಾಡಬಲ್ಲೆವು ಎಂದು ಹಿಂದುಗಳು ನಂಬಿದ್ದರೆ, ಅವರು ಹಿಂದೂ ಧರ್ಮವನ್ನು ನಾಶ ಮಾಡುತ್ತಾರೆ ಎಂದರ್ಥ" ಎಂದು ಅವರು ಮಾರ್ಚ್ 1947ರಲ್ಲಿ ಉದ್ಗರಿಸಿದರು.

1946, 1947ರಲ್ಲಿ ಗಾಂಧೀಜಿ ಆಗ ವ್ಯಾಪಿಸಿದ್ದ ಕೋಮು ಮನೋಧರ್ಮ, ಕೋಮುವಾದಿ ಒತ್ತಡ ಮತ್ತು ಬರ್ಬರ ಕೋಮುವಾದಿ ಕೊಲೆ-ಸುಲಿಗೆಗಳ ವಿರುದ್ಧ ಬಂಡೆಯಂತೆ ನಿಂತು ಕೋಮುವಾದದ ವಿರುದ್ಧ ಹಿಂದೂ-ಮುಸ್ಲಿಂ-ಸಿಖ್ ಐಕ್ಯತೆಗಾಗಿ ನಿರಂತರ ಹೋರಾಡಿದರು ಎಂದು ಎಲ್ಲರಿಗೂ ಗೊತ್ತಿದೆ. ನೋವಾಖಲಿ, ಬಿಹಾರ, ಕಲ್ಕತ್ತಾ ಮತ್ತು ದಿಲ್ಲಿಯಲ್ಲಿ ದ್ವೇಷಪೂರಿತ ವಾತಾವರಣದಲ್ಲಿ ಅವರ ಕೆಲಸ ಈಗ ದಂತಕಥೆಯಾಗಿದೆ.



★ ★ ★

ಸಮಗ್ರ, ಆಧುನಿಕ ಅರಿವು

ಗಾಂಧೀಜಿ ತುಂಬಾ ಆಳವಾದ ಧಾರ್ಮಿಕರಾಗಿದ್ದರೂ ಮೂಲತಃ ಮತ್ತು ಪೂರ್ಣವಾಗಿ ಅವರು ಜಾತ್ಯಾತೀತರು, ಭಾರತ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಪ್ರಭುತ್ವವಾಗಬೇಕು ಎಂಬುದು ಅವರ ಬಯಕೆಯಾಗಿತ್ತು. 1947ರಲ್ಲಿ ಅವರು ಹೀಗೆಂದು ಸ್ಪಷ್ಟವಾಗಿ ಹೇಳಿದ್ದರು; ಇದಕ್ಕೆ ಮೊದಲು ಆಗಸ್ಟ್ 9, 1942ರಂದು ಹೀಗಂದಿದ್ದರು- "ಸ್ವತಂತ್ರ ಭಾರತ ಹಿಂದೂ ರಾಜ್ಯವಾಗಿರುವುದಿಲ್ಲ, ಅದು ಭಾರತೀಯ ರಾಜ್ಯವಾಗಿರುತ್ತದೆ. ಯಾವುದೇ ಧಾರ್ಮಿಕ ಪಂಥ ಅಥವಾ ಕೋಮಿನ ಬಹುಮತದ ಮೇಲೆ ಆಧರಿಸಿ ಅಲ್ಲ, ಬದಲಾಗಿ ಧಾರ್ಮಿಕ ಭೇದಭಾವವಿಲ್ಲದೆ ಸಮಸ್ತ ಜನತೆಯ ಪ್ರತಿನಿಧಿಗಳನ್ನು ಆಧರಿಸಿರುತ್ತದೆ."

ಸ್ವತಂತ್ರ ಭಾರತದ ಕುರಿತ ತಮ್ಮ ಕಣ್ಣೋಟದ ಬಗ್ಗೆ ಅವರು 1940ರಲ್ಲಿ ಹೀಗೆ ಬರೆದಿದ್ದರು. "ಭಾರತ ಒಂದು ದೇಶ, ಪರಸ್ಪರ ಸಮರಸಗೊಳ್ಳುವ ಪ್ರವೃತ್ತಿಯ, ಪರಸ್ಪರ ಪೂರಕವಾದ ವಿಭಿನ್ನ ಸಂಸ್ಕೃತಿಗಳಿಂದ ಕೂಡಿದ ಒಂದು ರಾಷ್ಟ್ರ" ಆದಾಗಲೇ 1909ರಲ್ಲಿ "ಹಿಂದ್ ಸ್ವರಾಜ್"ನಲ್ಲಿ ಅವರು "ವಿಶ್ವದ ಯಾವ ಭಾಗದಲ್ಲೂ ಒಂದು ರಾಷ್ಟ್ರೀಯತೆ ಮತ್ತು ಒಂದು ಧರ್ಮ ಸಮಾನಾರ್ಥಕ ಪದಗಳಾಗಿಲ್ಲ; ಭಾರತದಲ್ಲೂ ಎಂದೂ ಹಾಗಿರಲಿಲ್ಲ" ಎಂದಿದ್ದರು.

ಅಲ್ಲದೆ ಗಾಂಧೀಜಿ ಜಾತ್ಯಾತೀತತೆಯ ಬಗ್ಗೆ ಒಂದು ಸಮಗ್ರ, ಆಧುನಿಕ ಅರಿವು ಹೊಂದಿದ್ದರು. ಭಾರತದಲ್ಲಿ ಇತರೆಡೆಯಂತೆ, ಜಾತ್ಯಾತೀತತೆಯನ್ನು ನಾಲ್ಕೂ ಅಂಶಗಳಲ್ಲಿ ನಿರ್ವಹಿಸಲಾಗಿದೆ.

ಮೊದಲನೆಯದು: ಧರ್ಮ ರಾಜಕೀಯದೊಳಗೆ ನುಸುಳಬಾರದು, ಧರ್ಮವನ್ನು ರಾಜಕೀಯ, ಆರ್ಥಿಕ, ಶಿಕ್ಷಣ ಮತ್ತು ಸಾಮಾಜಿಕ ಜೀವನ ಹಾಗೂ ಸಂಸ್ಕೃತಿಯ ಬಹುಪಾಲು ಕ್ಷೇತ್ರಗಳಿಂದ ಪ್ರತ್ಯೇಕಿಸಬೇಕು ಮತ್ತು ಧರ್ಮವನ್ನು ಒಬ್ಬ ವ್ಯಕ್ತಿಯ ಖಾಸಗಿ ಅಥವಾ ವೈಯಕ್ತಿಕ ವ್ಯವಹಾರ ಎಂದು ಪರಿಗಣಿಸಬೇಕು. ಇದನ್ನು ನಿರಾಕರಿಸುವ ಬೇರೆ ಯಾವುದೇ ಜಾತ್ಯಾತೀತತೆಯ ತಥಾಕಥಿತ ಭಾರತೀಯ ನಿರ್ವಚನೆಯ ಬಗ್ಗೆ ಮಾತಾಡುವುದೆಂದರೆ ಜಾತ್ಯಾತೀತತೆಯನ್ನು ನಿರಾಕರಿಸಿದಂತಾಗುತ್ತದೆ. ಅದೇ ವೇಳೆಗೆ ಜಾತ್ಯಾತೀತತೆಯೆಂದರೆ ಜೀವನದಿಂದಲೇ ಧರ್ಮವನ್ನು ತೆಗೆಯುವುದು ಅಥವಾ ಅದರ ಬಗ್ಗೆ ವೈರತ್ವವೆಂದೇನೂ ಅಲ್ಲ. ಒಂದು ಜಾತ್ಯಾತೀತ ಪ್ರಭುತ್ವ ಎಂದರೆ ಧರ್ಮವನ್ನು ನಿರುತ್ಸಾಹಗೊಳಿಸುವ ಒಂದು ಪ್ರಭುತ್ವವೆಂದೂ ಅಲ್ಲ.

ಎರಡನೆಯದು : ಒಂದು ಬಹುಧರ್ಮೀಯ ದೇಶದಲ್ಲಿ ಜಾತ್ಯಾತೀತತೆಯೆಂದರೆ ಪ್ರಭುತ್ವ ಎಲ್ಲಾ ಪಂಥಗಳ ಬಗ್ಗೆ ತಟಸ್ಥವಾಗಿರಬೇಕು. ಎಂದರ್ಥ. ಅಥವಾ ಹಲವು ಧಾರ್ಮಿಕ ವ್ಯಕ್ತಿಗಳು ಹೇಳುವಂತೆ, ಪ್ರಭುತ್ವ ಎಲ್ಲಾ ಪಂಥಗಳಿಗೆ, ನಾಸ್ತಿಕರಿಗೂ ಸಮಾನ ಗೌರವ ನೀಡಬೇಕು.

ಮೂರನೆಯದು : ಜಾತ್ಯಾತೀತತೆ ಎಂದರೆ ಪ್ರಭುತ್ವ ಎಲ್ಲಾ ನಾಗರೀಕರನ್ನು ಸಮಾನವಾಗಿ ಕಾಣಬೇಕು ಎಂದೂ ಅರ್ಥವಾಗುತ್ತದೆ. ಅದು ನಾಗರಿಕರಲ್ಲಿ ಧರ್ಮದ ಆಧಾರದಲ್ಲಿ ಭೇದಭಾವ ಮಾಡಬಾರದು.

ನಾಲ್ಕನೆಯದು : ಭಾರತಕ್ಕೆ ವಿಶಿಷ್ಟವಾದ ಜಾತ್ಯಾತೀತತೆಯ ಇನ್ನೊಂದು ಲಕ್ಷಣವಿದೆ. ಭಾರತದಲ್ಲಿ ಜಾತ್ಯಾತೀತತೆ ವಸಾಹತುಶಾಹಿಯೆಂದು ಹಾಗೂ ಎಲ್ಲಾ ಭಾರತೀಯ ಜನಗಳನ್ನು ಒಂದಾಗಿಸುವ ಹಾಗೂ ರಾಷ್ಟ್ರ ರಚನೆಯ ಪ್ರಕ್ರಿಯೆಯ ಭಾಗವಾಗಿ ಮೂಡಿಬಂದ ತತ್ವಸಿದ್ಧಾಂತ. ಅದೇ ವೇಳೆಗೆ, ಕೋಮುವಾದ ಅತ್ಯಂತ ವಿಭಜನಕಾರಿ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಯಾಗಿ ಬೆಳೆಯಿತು. ಅದರಿಂದಾಗಿ, ಜಾತ್ಯಾತೀತತೆ ಕೋಮುವಾದಕ್ಕೆ ಒಂದು ಸುಸ್ಪಷ್ಟ ವಿರೋಧವೆಂದೂ ಅರ್ಥವಾಯಿತು.

ಮುಂದುವರೆಯುವುದು



ಬಿಜೆಪಿ ವೈಫಲ್ಯಗಳ ಯಾತ್ರೆ

ಬಿಜೆಪಿಯೊಳಗಿನ ಗುದ್ದಾಟ ಮುಗಿದ ಅಧ್ಯಾಯವೇ? ಹಾಗೇನಿಲ್ಲ. ರಾಜ್ಯಮಟ್ಟದ ಕುಸ್ತಿಹಾಳಿಗ ಜಿಲ್ಲೆಗಳಲ್ಲಿಯೂ ಬಿರುಸು ಪಡೆಯುತ್ತಿದೆ. ಈ ಕಾದಾಟದಲ್ಲಿ ನಡುವೆ ಒಂದಿಷ್ಟು ಬಿಡುವು ಮಾಡಿಕೊಂಡು ಕೈಎತ್ತಿ ಇಳಿಸಿ, 'ಸಂಘರ್ಷ ಮುಗಿದಿದೆ, ನಾವೆಲ್ಲಾ ಒಂದಾಗಿದ್ದೇವೆ ನೋಡಿ... ನೀವೇ ನೋಡಿ ಒಂದೇ ಬಸ್ಸಿನಲ್ಲಿ ಕುಳಿತು ಪ್ರಯಾಣ ಮಾಡುವಷ್ಟು' ಎಂದು ಜನರನ್ನು ನಂಬಿಸಲು ಪ್ರಯಾಸ ಪಡುತ್ತಿದ್ದಾರೆ. ಇಂತಹ ವಿರಾಮ ವಿಹಾರಕ್ಕೆ ಅವರೇ ಕೊಟ್ಟುಕೊಂಡ ಹೆಸರು 'ಸಂಘರ್ಷ ಯಾತ್ರೆ!'.

ಕೇಂದ್ರ - ರಾಜ್ಯ ಸರ್ಕಾರಗಳ ವೈಫಲ್ಯ ಮತ್ತು ದುರಾಡಳಿತದ ವಿರುದ್ಧ ಈ ಯಾತ್ರೆ, ಈ ಸರ್ಕಾರಗಳದ್ದು ಅಪವಿತ್ರ ಮೈತ್ರಿಗಳ ಅಧಿಕಾರ ದಾಹದ ಕೂಟ, ಜೀವನಾವಶ್ಯಕ ವಸ್ತುಗಳು, ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆ, ವಿದ್ಯುತ್ ಕ್ಷಾಮ, ಸಾಲ-ಬಡ್ಡಿ, ನೆಲ-ಜಲ ರಕ್ಷಣೆ, ರೇಷನ್ ಕಾರ್ಡ್ ಎಂದು ಪಟ್ಟಿ ಮಾಡಿ ಕೆಲವಕ್ಕೆ ಆಗ್ರಹಿಸಿ, ಕೆಲವನ್ನು ವಿರೋಧಿಸಿ ಅಕ್ಟೋಬರ್ 14 ರಿಂದ 23 ರವರೆಗೆ ಈ ಯಾತ್ರೆ ಹೊರಟಿದ್ದಾರೆ! ಇಲ್ಲಿಯವರೆಗೂ ಹಲವಾರು ತಿಂಗಳು ಜನರ ಸಮಸ್ಯೆ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳದೇ, ಕಿತ್ತಾಟ - ಕ್ಲಬ್ಬಾಟಗಳಲ್ಲಿ ಕೈ ಬಾಯಿ ಮಿಲಾಯಿಸುತ್ತಾ ಕಾಲ ಕಳೆದ ಈ ನಾಯಕರು ಈಗ ಜನ ಎಲ್ಲಿ ತಿರುಗೇಟು ನೀಡುತ್ತಾರೋ ಎಂದು ದಡಬಡಾಯಿಸಿ ಎದ್ದುಕುಳಿತು ಹೊಸ ವೇಷ ಧರಿಸಿ ಹವಾನಿಯಂತ್ರಿತ ವೈಭವದ ವೋಲ್ವೋ ಬಸ್‌ನಲ್ಲಿ ಊರೂರು ಸುತ್ತುತ್ತಿದ್ದಾರೆ. ಈ ನಾಲ್ಕಾರು ತಿಂಗಳಲ್ಲಿ ಜನತೆಯ ಜ್ವಲಂತ ಪ್ರಶ್ನೆಗಳನ್ನು ಒಂದಾದರೂ ಎತ್ತಿದ್ದಾರೆಯೇ? ಪ್ರಶ್ನೆ ಎತ್ತುವುದಿರಲಿ, ಅತ್ತ ಕಣ್ಣು ಸಹ ಹಾಯಿಸಲಿಲ್ಲ. ವರ್ಷದುದ್ದಕ್ಕೂ ಭಾರಿ ಗಲಾಟೆ ಮಾಡಿದವರಂತೆ ಪೋಸ್ ನೀಡಿದರಾದರೂ ಹುಸಿ ಪ್ರಶ್ನೆಗಳ ಸುತ್ತಲೇ ಗಿರಕಿಹೊಡೆದರು. ಅಧಿಕೃತ ವಿರೋಧ ಪಕ್ಷವೆಂದು ಬೊಗಳೆ ಹೊಡೆಯುವ ಬಿಜೆಪಿ ಕರ್ನಾಟಕದ ವಿಧಾನಸಭೆಯಲ್ಲಿ - ಲೋಕಸಭೆಯಲ್ಲಿ ಏನು ಹೇಳಿದರು? ಉದಾರೀಕರಣದ ನೀತಿಗಳ ವಿರುದ್ಧ ಮಾತನಾಡಿದರೇ? ವಿದ್ಯುತ್ ಮಸೂದೆ ವಿರೋಧಿಸಿದರೇ? ಕೈಗಾರಿಕೆ-ಕಾರ್ಮಿಕರು, ಕೃಷಿ ಉಳಿವಿಗೆ ಒಂದು ಶಬ್ದವಾದರೂ ಹೊರಬಂತೆ? ಭೂಮಿ ಹಂಚಿಕೆ ಬಗ್ಗೆ ಈ ಮಹಾನಾಯಕರು ಅರ್ಧಗಂಟೆಗಾದರೂ ಶಾಸನ ಸಭೆಗಳಲ್ಲಿ ಮಾತನಾಡಿದರೇ? ಹಸಿವಿನ ದವಡೆಯಲ್ಲಿ ನಲುಗುತ್ತಿರುವ ಜನರಿಗೆ ರೇಷನ್ ನೀಡಲು ಮುಂದಾದರೇ? ಅಥವಾ ಒತ್ತಾಯಿಸಿದರೇ?

ಈಗ ಸಂಘರ್ಷ ಯಾತ್ರೆಗೆಂದು ಪಟ್ಟಿ ಮಾಡಿದ ಸಮಸ್ಯೆಗಳ ಸೃಷ್ಟಿಕರ್ತರು ಇವರೆ ಎಂಬುದನ್ನು ಹಾಗೂ ಸಮಸ್ಯೆಗಳ ಬೆಂಕಿಗೆ ಜನರನ್ನು ನೂಕಿದ ಅಪರಾಧದಲ್ಲಿ ಬಿಜೆಪಿ ಪಾಲು ಮರೆಯಲು ಸಾಧ್ಯವೇ? ಡೀಸೆಲ್ - ಪೆಟ್ರೋಲ್ ಬೆಲೆ ಏರಿಕೆ, ವಿದ್ಯುತ್ ಖಾಸಗೀಕರಣ - ದುಬಾರೀಕರಣದಲ್ಲಿ ಪಡಿತರ ವ್ಯವಸ್ಥೆ ನಾಶಗೊಳಿಸುವಲ್ಲಿ, ದೇಶೀಯ ಕೈಗಾರಿಕೆ-ಕೃಷಿ ನಾಶ ಮಾಡಿ ಸಾವು-ಸಂಕಟಗಳ ಬೆಳೆ ಬೆಳೆಯುವಲ್ಲಿ ಬಿಜೆಪಿಯ - ಕೇಂದ್ರ ಸರ್ಕಾರವೇ ಹೊಣೆಯಲ್ಲವೇ? ಅಮೆರಿಕಾಕ್ಕೆ ಡೊಗ್ಗು ಸಲಾಮು ಹೊಡೆದು ದೇಶದ ಸ್ವಾವಲಂಬನೆ - ಸಾರ್ವಭೌಮತ್ವಕ್ಕೆ ಸಂಚಕಾರ ತಂದವರು ಇವರಲ್ಲವೇ? ಕೇಂದ್ರದಲ್ಲಿ ಅಧಿಕಾರದ ಅವಧಿಯಲ್ಲಿ ಮತ್ತು ನಂತರ, ರಾಜ್ಯದಲ್ಲಿಯೂ ಇಂತಹ ಮೂಲಭೂತ ಪ್ರಶ್ನೆಗಳನ್ನು ಎತ್ತಲಿಲ್ಲ ಮಾತ್ರವಲ್ಲ, ಪರಿಹಾರಕ್ಕೆ ಮುಂದಾಗಲಿಲ್ಲ. ಕ್ರಿಮಿನಲ್ ಕೃತ್ಯದಲ್ಲಿ ಭಾಗಿಯಾದ ಕಂಚಿ ಕಾಮಕೋಟಿ ಸ್ವಾಮಿಯ ರಕ್ಷಣೆಗೆ, ಅಯೋಧ್ಯಾದಲ್ಲಿ ಧಾಳಿ ಮಾಡಿದ ಭಯೋತ್ಪಾದಕರ ಕೃತ್ಯ ನೆಪವಾಗಿಸಿ ಭಾರತ್ ಬಂದ್‌ಗೆ ಕರೆ ನೀಡಿದ(ನಂತರ ತಿರಸ್ಕಾರಕ್ಕೆ ಒಳಗಾದ) ಇವರಿಗೆ ಜನರ ಪ್ರಶ್ನೆಗಳು ಬಾಧಿಸಲಿಲ್ಲ. ಗಂಭೀರ ಎನಿಸಲಿಲ್ಲ. ಬದಲಾಗಿ ಸೆಪ್ಟೆಂಬರ್ 29 ರ ಮಹಾಮುಷ್ಕರಕ್ಕೆ ನೇತೃತ್ವ ನೀಡಿದವರ ವಿರುದ್ಧಕ್ರಮಕ್ಕೆ ಒತ್ತಾಯಿಸಿದ್ದು ನೋಡಿದರೆ ಇವರ ಕಾಳಜಿ ಏನು ಎಂದು ಅರ್ಥವಾಗುವದು. ಬಾಬಾ ಬುಡನ್‌ಗಿರಿಯ ಸೌಹಾರ್ದ-ಪರಂಪರೆಗೆ ಕೊಳ್ಳಿ ಇಟ್ಟು ರಾಜ್ಯದಲ್ಲೆಡೆ ಕೋಮುಗಲಭೆ ಎಬ್ಬಿಸಿದ ಈ ಪರಿವಾರಕ್ಕೆ ಅಂತಹ ಹುಸಿ ಪ್ರಶ್ನೆಗಳಲ್ಲೇ ಆಶ್ರಯ ಪಡೆದು, ನಿಜ ಪ್ರಶ್ನೆಗಳನ್ನು ಹಿಂದಕ್ಕೆ ತಳ್ಳಿದಂತಹ ಷಡ್ಯಂತ್ರ ಆಡಿದ್ದು ಎಲ್ಲರ ನೆನಪಿನಲ್ಲಿದೆ. ಕಾಂಗ್ರೆಸ್ ಸರ್ಕಾರದ ತಪ್ಪು ನೀತಿಗಳ ವಿರುದ್ಧ ವೇದಿಕೆಯಲ್ಲಿ ಸೂಕ್ತವಾಗಿ ಹೋರಾಡದೇ, ಬಹಿರಂಗ ಸಭೆಗಳಲ್ಲಿ ವಿರಾವೇಶದಿಂದ ಅದೆಷ್ಟೇ ಕಿರುಚಾಡಿದರೆ ಜನರಿಗೇನು ಪ್ರಯೋಜನ? ಕಾಂಗ್ರೆಸ್ ಅನುಸರಿಸುತ್ತಿರುವ ಮೂಲಭೂತ ಆರ್ಥಿಕ ನೀತಿಗಳು ಆಡಳಿತ ವೈಫಲ್ಯಗಳು ಎಷ್ಟು ಖಂಡನಾರ್ಹವೋ ಅದಕ್ಕಿಂತಲೂ ಅತ್ಯಧಿಕ ಪಾತಕದ ಹೊರೆ ಬಿಜೆಪಿಯ ಮೇಲಿದೆ. ಬಿಜೆಪಿ ಪಟ್ಟಿ ಮಾಡಿರುವ 'ಖಂಡಿಸಿ-ಒತ್ತಾಯಿಸಿ' ಬೇಡಿಕೆಗಳು ಸ್ವತಃ ಅದರ ವೈಫಲ್ಯಗಳ ಫಲಕಗಳು, ಅವರೇ ತಂದ ನೀತಿಗಳು, ಅವರದ್ದೇ ಕಾನೂನುಗಳ ಫಲಗಳು.



ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಈಗ ಜಿಲ್ಲಾ, ತಾಲ್ಲೂಕು ಪಂಚಾಯತ್ ಚುನಾವಣೆಗಳು ಘೋಷಿತವಾಗಿವೆ. ಮುಂದಿನ ವರುಷದಲ್ಲಿ ಮಧ್ಯಂತರ ಚುನಾವಣೆಗಳು ಬರುವ ಸಂಭವವೂ ಇದೆ. ಅಖಿಲ ಭಾರತ ಮಟ್ಟದಲ್ಲಿಯೂ ಹಾಗೂ ರಾಜ್ಯದಲ್ಲಿಯೂ ಬಿಜೆಪಿ ಒಳಜಗಳ - ಕಿತ್ತಾಟಗಳು, ವಿರೋಧ ಪಕ್ಷವಾಗಿ ಅದರ ಸಂಪೂರ್ಣ ವೈಫಲ್ಯಗಳು, ಈಗಲೂ ಪ್ರತಿ ಹಂತದಲ್ಲಿಯೂ ಬಿಜೆಪಿಗೆ ಸತತವಾಗಿ ಮತದಾರರು ನೀಡುತ್ತಿರುವ ಸೋಲಿನ ಏಟುಗಳಿಂದ ನೆಲಕಚ್ಚುವ ಭೀತಿ ಬಿಜೆಪಿ ನಾಯಕರನ್ನು ಆವರಿಸಿದೆ. ಹೀಗಾಗಿಯೇ, ಏನೆಲ್ಲಾ ಸೋಗು ಹಾಕಲು, ಅಡ್ವಾಣಿಯಂತಹವರಿಗೆ 'ಆಧುನಿಕತೆ'ಯ ಬಣ್ಣ ಬಳಿಯಲು ಆರ್‌ಎಸ್‌ಎಸ್-ಬಿಜೆಪಿ ತೊಡಗಿದೆ. ಹೀಗಾಗಿ ಕರ್ನಾಟಕದಲ್ಲಿಯೂ ತೀವ್ರ ಹಿಂಜರಿತ ಮತ್ತು ಬೆಂಬಲದ ನೆಲೆ ಕಳೆದುಕೊಳ್ಳುವ ಭಯದಲ್ಲಿ ವರ್ಚಸ್ಸು ವೃದ್ಧಿಸಿಕೊಳ್ಳಲು ಈ ಸರ್ಕಾರದ ವಿರುದ್ಧ ಜನರ ಮನೋಭಾವ ಬಳಸಲು ಬಸ್ ಏರಿ ಹೊರಟಿದ್ದಾರೆ, ಹೊಸ ವೇಷ ತೊಟ್ಟಿದ್ದಾರೆ.

ನಿಮ್ಮೂರಿಗೆ ಈ ಯಾತ್ರೆ ಬಂದಾಗ ಮಾತನಾಡಬೇಕಾದವರು ಅವರಲ್ಲ, ನೀವು - ಜನ.

ಪಂಚಾಯತ್ ಚುನಾವಣೆ

ಹಲವಾರು ತಿಂಗಳುಗಳಿಂದ ಡೋಲಾಯಮಾನದಲ್ಲಿದ್ದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳು ನಡೆಯುವುದು ಖಚಿತವಾಗಿದೆ. ಇದೇ ಡಿಸೆಂಬರ್ 19 ಮತ್ತು 23 ರಂದು ಎರಡು ಹಂತಗಳಲ್ಲಿ ರಾಜ್ಯದಲ್ಲಿ ಚುನಾವಣೆಗಳ ದಿನಾಂಕವನ್ನು ಕರ್ನಾಟಕ ಚುನಾವಣಾ ಆಯೋಗ ಪ್ರಕಟಿಸಿದೆ. ಈ 14 ರಿಂದಲೇ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದಾಗಿ ಹೇಳಿದೆ.

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳ ಐದು ವರುಷಗಳ ಅವಧಿಯು ಜೂನ್‌ಗೆ ಮುಗಿದಿತ್ತು. ಇದನ್ನು ಪರಿಗಣಿಸಿ ನೂತನ ಚುನಾಯಿತ ಪ್ರತಿನಿಧಿಗಳುಳ್ಳ ಸಂಸ್ಥೆಗಳನ್ನು ರಚಿಸಲು ಅನುವಾಗುವಂತೆ ಚುನಾವಣಾ ಆಯೋಗವು ಮೀಸಲಾತಿ, ಕ್ಷೇತ್ರಗಳನ್ನು ನಿಗದಿಗೊಳಿಸಿ ಪ್ರಕಟಿಸಿ ಚುನಾವಣಾ ಪ್ರಕ್ರಿಯೆಗೆ ಚಾಲನೆ ನೀಡಿತ್ತು. ಆದರೆ ಕ್ಷೇತ್ರ ಮರುವಿಂಡಣೆ, ಈ ಮೀಸಲಾತಿ ಅನುಸರಿಸಿದರೆ ತಾವು ವಂಚಿತರಾಗುವುದಾಗಿ ಕೆಲವು ಹೈಕೋರ್ಟ್‌ನ ಮೊರೆ ಹೋದರು. ಈ ಮೀಸಲಾತಿ ಪಟ್ಟಿಯು ರೊಟೇಷನ್ ಪದ್ಧತಿಗನುಗುಣವಾಗಿಲ್ಲವೆಂದು ತಡೆಯಾಜ್ಞೆ ನೀಡಿ ಪುನರ್‌ರೂಪಿಸಲು ಸೂಚಿಸಿತು. ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಚುನಾವಣಾ ಆಯೋಗ ಹೋಗಲಾಯಿತು. ಸುಪ್ರೀಂಕೋರ್ಟ್ ಮಧ್ಯಂತರ ಆದೇಶ ನೀಡಿ ಈಗಾಗಲೇ ನಿರ್ದಿಷ್ಟಪಡಿಸಿದ ನಿಯಮದ 1998 ರ ಆಧಾರದಲ್ಲಿ ಚುನಾವಣೆ ನಡೆಸಲು ಸೂಚಿಸಿದೆ. ಅಂತಿಮ ತೀರ್ಪು ಹೊರಬರಬೇಕಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಪ್ರಕ್ರಿಯೆ ಆರಂಭಗೊಂಡಿವೆ.

ಜನತೆ ಕೈಗೆ ಅಧಿಕಾರ ನೀಡುವ ದಿಶೆಯಲ್ಲಿ ಆಡಳಿತದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಪ್ರಕ್ರಿಯೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಬಹಳ ಮಹತ್ವವಿದೆ.

ಪ.ಬಂಗಾಳ, ಕೇರಳ, ತ್ರಿಪುರಾದಂತಹ ರಾಜ್ಯಗಳಲ್ಲಿ ಎಡಶಕ್ತಿಗಳು ಪ್ರಬಲವಾಗಿದ್ದು, ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ದುಡಿಯುವ - ಶೋಷಿತ ವರ್ಗಗಳ ಕೈಗೆ ದಕ್ಕಿಸುವಂತೆ ಹೋರಾಟ ನಡೆಸಿ ಯಶಸ್ಸು ಸಾಧಿಸಲಾಗುತ್ತಿದೆ.

ಅಲ್ಲಿ ಜನತೆಯ ಕೈಗೆ ಅಧಿಕಾರ ಎಂಬುದು ನಿಜವಾದ ಅರ್ಥದಲ್ಲಿದ್ದು ಅವರ ಭಾಗಿತ್ವವೇ ಪ್ರಮುಖವಾಗಿದೆ. ಕರ್ನಾಟಕ ಹಾಗೂ ಇತರೆ ರಾಜ್ಯಗಳಲ್ಲಿ ಇಂತಹ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಗ್ರಾಮಾಂತರದ ಭೂಮಾಲೀಕ - ಶ್ರೀಮಂತ ವರ್ಗಗಳು ಪಡೆಯುವಲ್ಲಿ ಮೇಲುಗೈ ಸಾಧಿಸುತ್ತವೆ. ದುಡಿಯುವ ವರ್ಗದ ಎಡಚಳುವಳಿ ಪ್ರಬಲವಾಗಿರುವಲ್ಲಿ ತೀವ್ರ ಹೋರಾಟ ನಡೆಸಲಾಗುತ್ತಿದೆಯಲ್ಲದೇ ಗೆಲವು ಸಾಧಿಸಿ ಆ ರಾಜಕೀಯ ಶಕ್ತಿಯನ್ನು ಜನತೆಗಾಗಿ ಬಳಸಲು, ಜನತೆಯ ಪ್ರಜಾಸತ್ತಾತ್ಮಕ ಚಳುವಳಿ ಮುನ್ನಡೆಸಲು ಪರಿಣಾಮಕಾರಿಯಾಗಿ ಬಳಸಲಾಗುವದು.

ಈ ಚುನಾವಣೆಯಲ್ಲಿಯೂ ಶೋಷಿತ, ದುಡಿವ ಜನಸಮೂಹಗಳು, ಪ್ರಜಾಸತ್ತಾತ್ಮಕ ಚಳುವಳಿ ಗೆಲುವು ಸಾಧಿಸಲು ಗಂಭೀರವಾದ ಹೋರಾಟ ನಡೆಸಬೇಕಿದೆ.

ಸಾಮರಸ್ಯ-ಪರಂಪರೆ ನಾಶಕ್ಕೆ ದತ್ತಮಾಲೆ ಹಿಡಿದು ಹೊರಟಿದೆ ಸಂಘ ಪರಿವಾರ

ಬಾಬಾಬುಡನ್ ಗಿರಿಯ ದರ್ಗಾ-ಪೀಠದಲ್ಲಿ ವಿವಾದ ಕೆದಕಿ ಮತ್ತೇ ಸೌಹಾರ್ದತೆಯ ಪರಂಪರೆಯ ನಾಶಕ್ಕೆ ಧಾಳಿ ನಡೆಸಲು ಆರ್‌ಎಸ್‌ಎಸ್ ಪಡೆ ಮುಂದಾಗಿದೆ. ನ್ಯಾಯಾಲಯದ ನಿರ್ದೇಶನ, ಸಂವಿಧಾನದ ಆಶಯ, ಕಾನೂನನ್ನು ಉಲ್ಲಂಘಿಸಿ, ಪರಂಪರೆಗೆ ಕಪ್ಪು ಮಸಿ ಬಳಿದು ದ್ವೇಷ-ತಲ್ಲಣ ಹುಟ್ಟುಹಾಕಲು ಈ ಪರಿವಾರ ದತ್ತಮಾಲೆ ಹಿಡಿದು ಹೊರಟಿದೆ. ಈ ವಿಧ್ವಂಸಕ ಕೃತ್ಯಕ್ಕೆ ನಿಗದಿ ಮಾಡಿರುವ ದಿನ ಅಕ್ಟೋಬರ್ 23.

ಅಕ್ಟೋಬರ್ 23 ರಂದು 'ದತ್ತಮಾಲೆ ಅಭಿಯಾನ' ನಡೆಸಿ ಗುಹೆಗೆ ತೆರಳುವ ಕಾರ್ಯಕ್ರಮವನ್ನು ವಿಶ್ವ ಹಿಂದೂ ಪರಿಷತ್, ಬಜರಂಗದಳ ಘೋಷಿಸಿವೆ. ಹೊಸ ಅವತಾರವಾದ ಶಿವಸೇನೆಯೂ ಇದರೊಂದಿಗೆ ಸೇರಿಕೊಂಡಿದೆ. ಅಂದು ಚಿಕ್ಕಮಗಳೂರಿನಲ್ಲಿ ವಿವಿಧ ತಾಲ್ಲೂಕು - ಜಿಲ್ಲೆಗಳಿಂದ 'ಮಾಲಾಧಾರಿಗಳು'ಗಳು ಮೆರವಣಿಗೆ ನಡೆಸಿ ಗುಹೆಯನ್ನು ತಲುಪುವುದು. ಇರುಮುಡಿ ಅರ್ಪಿಸಿ ಪೂಜಿಸುವುದು. ಬಹಿರಂಗ ಸಭೆಗಳನ್ನು ನಡೆಸಿ ಕಿಡಿಕಿಡಿ ಭಾಷಣ ಮಾಡುವುದು.

ಇದಕ್ಕೆ ಜಿಲ್ಲಾಡಳಿತ ಆಕ್ಷೇಪ ಎತ್ತಿದೆ. ಹಿಂದಿನ ವರುಷ ಸಾರ್ವಜನಿಕರ, ವಿವಿಧ ಪ್ರಗತಿಪರ ಸಂಘಟನೆಗಳು, ಎಡಪಕ್ಷಗಳ ಒತ್ತಾಯದಿಂದ ರಾಜಿ ಮನೋಭಾವದ ಬದಲು ನ್ಯಾಯಾಲಯದ ಆದೇಶ ಪಾಲಿಸಲು, ಸಂಘ ಪರಿವಾರದ ತಂಡಗಳಿಗೆ ಅಂತಹ ಅವಕಾಶವನ್ನು ನಿರಾಕರಿಸಲಾಗಿತ್ತು. ದತ್ತ ಜಯಂತಿಯನ್ನು ಸಂಘ ಪರಿವಾರದ ವ್ಯಾಖ್ಯಾನದಂತೆ ನಡೆಸದೇ ಇರಲು ನಿರ್ಧರಿಸಲಾಗಿತ್ತು. ಬಿಗಿ ಬಂದೋಬಸ್ತ್ ಏರ್ಪಡಿಸಿ ಕಠಿಣ ಕ್ರಮಕ್ಕೆ ಹಿಂಜರಿಯುವುದಿಲ್ಲವೆಂದು ಎಚ್ಚರಿಸಿ, ಕ್ರಮವನ್ನು ವಹಿಸಲಾಗಿತ್ತು. ದತ್ತಜಯಂತಿ ಸಂದರ್ಭದಲ್ಲಿ ಹಿಂದೆಂದೂ ಇರದಿದ್ದ ದತ್ತಯಜ್ಞ, ದತ್ತ ವಿಗ್ರಹ ಸ್ಥಾಪನೆ, ಧರ್ಮ-ಸಂಸತ್ ಎಂಬ ಸಭೆಗಳನ್ನು ನಡೆಸಲು ಅವಕಾಶ ನೀಡದಿರುವ ನಿರ್ಧರಿಸಲಾಗಿತ್ತು. ಬಿಡ್ಡಿಪಡೆ -ಬಿಜೆಪಿ ಎಷ್ಟೆಲ್ಲಾ ಹಾರಾಡಿದರೂ, ಗಲಭೆಗಳಿಗೆ ಪ್ರಚೋದಿಸಿದರೂ ಅದರ ಆಟ ನಿರ್ಬಂಧಕ್ಕೆ ಒಳಗಾಗಿ - ವಿಫಲವಾದುದು ಒಂದು ಮಹತ್ವದ ಬೆಳವಣಿಗೆ.

ಈ ದತ್ತಮಾಲೆ ಎಂಬುದು ಪರಂಪರೆಯಲ್ಲಿ ಇಲ್ಲದ ಇನ್ನೊಂದು ಆಚರಣೆ. ಜನರ ಮನಸ್ಸನ್ನು ವಿಷಮಯಗೊಳಿಸಿ, ಮುಗ್ಧ ಭಕ್ತಿಯನ್ನು ದುರ್ಬಳಕೆ ಮಾಡಿ ಅಯ್ಯಪ್ಪಸ್ವಾಮಿ ಪೂಜೆ ಸಂದರ್ಭದಲ್ಲಿ ಪಾಲಿಸುವ ಮಾಲೆಯನ್ನು ಅನುಕರಿಸಿ ವಂಚಿಸಲು ಯತ್ನಿಸಲಾಗುತ್ತಿರುವ ಹೊಸ ಆಚರಣೆ. 1975 ರ ಹಿಂದಿನ ಆಚರಣೆಗಳಿಗಷ್ಟೇ ಬದ್ಧವಾಗಿರುವಂತೆ ಉಚ್ಚ ನ್ಯಾಯಾಲಯ ನೀಡಿದ ನಿರ್ದೇಶನಕ್ಕೆ ವಿರುದ್ಧವಾದ ಆಚರಣೆ.

ಇದಕ್ಕೆ ಅವಕಾಶವಿಲ್ಲವೆಂದು, ನ್ಯಾಯಾಲಯದ ತೀರ್ಪನ್ನು ಕಾಯ್ದುಕೊಳ್ಳಲಾಗುವುದೆಂದು ಜಿಲ್ಲಾಧಿಕಾರಿ ಹರ್ಷಗುಪ್ತ ಸ್ಪಷ್ಟಪಡಿಸಿದ್ದಾರೆ. ಕಾನೂನು ಉಲ್ಲಂಘಿಸಿದರೆ ಕ್ರಮವಹಿಸುವುದಾಗಿ ಹೇಳಿದ್ದಾರೆ. ಸಂಘ ಪರಿವಾರದ ಈ ಆಟಾಟೋಪಗಳನ್ನು ಜನತೆ ದೃಢವಾಗಿ ಎದುರಿಸಬೇಕು. ಪ್ರತಿರೋಧಿಸಬೇಕು. ಬಹುಮುಖಿ ಸಂಸ್ಕೃತಿ, ಸೂಫಿ-ಸಂತರ ಸೌಹಾರ್ದ ಪರಂಪರೆಯ ಉಳಿವಿಗೆ ಹೋರಾಡಬೇಕು.

ಸರ್ಕಾರ ಅತ್ಯಂತ ದೃಢತೆಯಿಂದ, ಕಠಿಣವಾಗಿ ಕ್ರಮವಹಿಸಿ ಸಂಘ ಪರಿವಾರದ ಜನ ವಿರೋಧಿ, ಹುನ್ನಾರಗಳನ್ನು ವಿಫಲಗೊಳಿಸಬೇಕು.

ಪುರುಷ ಪ್ರಧಾನ ಮೌಲ್ಯ - ದೌರ್ಜನ್ಯಗಳ ವಿರುದ್ಧ ಸಂಘರ್ಷಕ್ಕೆ ಮಹಿಳಾ ಸಮಾವೇಶದ ಕರೆ

ಕೆ.ಎಸ್.ಶಾರದ



ಹೆಣ್ಣನ್ನು ಹುಟ್ಟಿನಿಂದಲೇ ಮದುವೆಗೆ ಸಿದ್ಧಪಡಿಸುವರಂತೆ ಬೆಳೆಸುತ್ತೇವೆ..... ಬದುಕಿನ ಸವಾಲುಗಳನ್ನು ಸ್ವೀಕರಿಸಿ ಎದ್ದು ನಿಲ್ಲುವಂತೆ ಅವರನ್ನು ಸಜ್ಜುಗೊಳಿಸುವುದಿಲ್ಲ.... ಪುರುಷ ಮತ್ತು ಸ್ತ್ರೀಯರಿಬ್ಬರೂ ಸೂಕ್ಷ್ಮಮತಿಗಳಾದಾಗ ಮಾತ್ರವೇ ಮಹಿಳೆಯರ ಮೇಲಿನ ದೌರ್ಜನ್ಯವನ್ನು ನಿವಾರಿಸಲು ಸಾಧ್ಯ.... ಪುರುಷರ ವಿರುದ್ಧ ಅಲ್ಲ ಪುರುಷ ಪ್ರಧಾನ ಮೌಲ್ಯ-ವ್ಯವಸ್ಥೆಗಳ ವಿರುದ್ಧ, ದೌರ್ಜನ್ಯಗಳ ವಿರುದ್ಧ ಚಳುವಳಿ ನಡೆಯಬೇಕು... ಹಲವು ಕಾನೂನುಗಳಿವೆ ಆದರೆ ಕೇವಲ ಕಾನೂನುಗಳಿಂದ ದೌರ್ಜನ್ಯ ನಿಲ್ಲುವುದು ಸಾಧ್ಯವಿಲ್ಲ...... ಅದು ಚಳುವಳಿಯಿಂದ ಸಾಧ್ಯವಾಗುತ್ತದೆ.... ಇವು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ದೌರ್ಜನ್ಯ ವಿರೋಧಿ ಸಮಾವೇಶದಲ್ಲಿ ಮೂಡಿಬಂದ ಅಭಿಪ್ರಾಯಗಳು.

ಹಲವಾರು ಕ್ಷೇತ್ರಗಳಲ್ಲಿ ಜಗತ್ತಿನ ಗಮನ ಸೆಳೆದಿರುವ ಸಿಲಿಕಾನ್ ಸಿಟಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೆಂಗಳೂರು ನಗರವಿಂದು ಅಪರಾಧೀಕರಣದ ಕೇಂದ್ರವಾಗಿ ಬೆಳೆಯುತ್ತಿದೆ. ಹಗಲು ಇರುಳು ಎಂಬ ತಾರತಮ್ಯವಿಲ್ಲದೆ ಅಪರಾಧವೆಂಬುದು ನಿರಾತಂಕವಾಗಿ ನಡೆದುಹೋಗುತ್ತಿದೆ. ಮನೆಯ ಒಳಗಡೆಯು ದೌರ್ಜನ್ಯ, ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಸಾಮೂಹಿಕ ಅತ್ಯಾಚಾರಗಳು, ಆ್ಯಸಿಡ್ ಎರಚುವ ಪ್ರಕರಣಗಳು ಅವ್ಯಾಹತವಾಗಿದೆ. ಪಾಳೇಗಾರಿ ಮೌಲ್ಯಗಳು ಹಾಗೂ ಅಪರಾಧೀಕರಣದ ವೈಭವೀಕರಣವು ನಮ್ಮ ಮಾಧ್ಯಮಗಳ ಜೀವಾಳವಾಗಿದೆ. ಮಹಿಳೆಯರ ಭದ್ರತೆ ಕುಸಿಯುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ ಸಾಮೂಹಿಕ ಕಳಕಳಿ ಇರುವ ಎಲ್ಲರೂ ಉತ್ತಮ ನಾಳೆಗಾಗಿ, ಸ್ವಾಸ್ಥ್ಯ ಸಮಾಜದ ರಚನೆಗಾಗಿ ಅವಿರತ ಪ್ರಯತ್ನ ನಡೆಸಬೇಕೆಂಬ ಕಳಕಳಿಯಿಂದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧದನಿ ಎತ್ತಿ ಮಹಿಳೆಯರ ಗಮನ ಸೆಳೆಯುತ್ತಾ ಅವರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಡೆಸುತ್ತಿದೆ.

ದೌರ್ಜನ್ಯ ಎಂಬುದು ಇತ್ತೀಚಿನ ದಿನಗಳಲ್ಲಿ ಸಹಜ ಎನ್ನುವಂತೆ ಹೆಚ್ಚುತ್ತಿದೆ. ಮಹಿಳೆಯನ್ನು ಭೋಗದ ವಸ್ತುವನ್ನಾಗಿ ಕಾಣುವ ಈ ಸಮಾಜದಲ್ಲಿ ಹೆಣ್ಣುಮಗು ಹುಟ್ಟುವ ಮೊದಲೇ ಚಿವುಟಿ ಹಾಕುವಂತಹ ಘೋರ ಸ್ಥಿತಿ ಉದ್ಭವವಾಗಿದೆ. ನಮ್ಮ ದೇಶದಲ್ಲೇ ಅತ್ಯಂತ ಶ್ರೀಮಂತ, ಹಚ್ಚ ಹಸುರಿನ ರಾಜ್ಯವಾದ ಪಂಜಾಬಿನಲ್ಲಿ ಸಾವಿರ ಪುರುಷರಿಗೆ ಕೇವಲ 793 ಮಹಿಳೆಯರಿರುವ ಪರಿಸ್ಥಿತಿ ಇದೆ. ಹರಿಯಾಣ ರಾಜ್ಯದಲ್ಲಿ ಮಹಿಳೆಯರನ್ನು ಪ.ಬಂಗಾಳ, ಕರ್ನಾಟಕದಂತಹ ರಾಜ್ಯಗಳಿಂದ ಕೊಂಡುಕೊಳ್ಳುತ್ತಿದ್ದಾರೆ. ಹೀಗೆ ಕೊಂಡುತಂದ ಮಹಿಳೆ ಅವಿಭಜಿತ ಕುಟುಂಬದಲ್ಲಿ (18 ವರ್ಷದವರೇ ಇರಲಿ, 60 ವರ್ಷದ ಪುರುಷರೇ ಇರಲಿ) ಮನೆಯ ಎಲ್ಲಾ ಗಂಡಸರಿಗೂ ಇವಳೊಬ್ಬಳೆ ಹೆಂಡತಿ. ಮಹಿಳೆಯ ಸಂತತಿ ಈ ಪ್ರಮಾಣದಲ್ಲಿ ಕುಸಿದಿದೆ. ಕರ್ನಾಟಕದಲ್ಲಿಂದು ಎರಡು ಲಕ್ಷದ ಐವತ್ತು ಸಾವಿರ ಮಹಿಳೆಯರು ವೇಶ್ಯಾವಾಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂಬ ವಿಷಯ Combat Trafficking Committee ಯಿಂದ ತಿಳಿದುಬಂದಿದೆ. ಹಗಲಲ್ಲೇ ಓರ್ವ ಮಹಿಳೆ ಇಂದು ಧೈರ್ಯದಿಂದ ಓಡಾಡುವ ಪರಿಸ್ಥಿತಿಯಿಲ್ಲ. ಹಾಡುಹಗಲಲ್ಲೇ ಮಾನಭಂಗ, ಅತ್ಯಾಚಾರಗಳು ನಡೆಯುತ್ತಿವೆ. ಇದಕ್ಕೆ 3 ತಿಂಗಳ ಹಿಂದೆ ಓರ್ವ ಕೂಲಿ ಮಹಿಳೆಯ ಮೇಲೆ 5 ಜನ ಆಕೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಕರೆದುಕೊಂಡು ಹೋಗಿ ಅವಳ ಇಬ್ಬರು ಮಕ್ಕಳನ್ನು ಕಟ್ಟಿಹಾಕಿ ಅವಳ ಮೇಲೆ ಅತ್ಯಾಚಾರ ನಡೆಸಿದ ವಿಚಾರ ತಿಳಿದೇ ಇದೆ. ಈ ದುಷ್ಕರ್ಮಿಗಳು "ಅಂದು ಭಾನುವಾರ ಆಗಿತ್ತು, ನಾವು ಕುಡಿದಿದ್ದೆವು. ನಮಗೆ ಯಾರೂ ಗಿರಾಕಿ ಸಿಕ್ಕಿರಲಿಲ್ಲ. ಇವಳು ಸಿಕ್ಕಿದ್ದು, ಅತ್ಯಾಚಾರ ಮಾಡಿದೆವು" ಎಂದು ರಾಜಾರೋಷವಾಗಿ ಹೇಳುತ್ತಾರೆ ಎಂದರೆ ಎಂತಹ ಪರಿಸ್ಥಿತಿಗೆ ದೇಶ ಹೋಗುತ್ತಾ ಇದೆ ಎಂಬುದನ್ನು ನಾವು ಗಮನಿಸಬೇಕು. ದೌರ್ಜನ್ಯವನ್ನು ತಡೆಯುವ ನಿಟ್ಟಿನಲ್ಲಿ ಮಾಧ್ಯಮಗಳು ಕೆಲಸ ಮಾಡಬೇಕಾಗಿತ್ತು. ಬದಲಿಗೆ ದೌರ್ಜನ್ಯವೆಸಗಲು ಸಹಕಾರಿ ಆಗುವ ರೀತಿಯಲ್ಲಿ ದೌರ್ಜನ್ಯವನ್ನು ವೈಭವೀಕರಿಸುತ್ತಿರುವುದು ಸಹ ಒಂದು ಮಟ್ಟದಲ್ಲಿ ದೌರ್ಜನ್ಯ ಹೆಚ್ಚಲು ಕಾರಣವಾಗಿದೆ. ಮಹಿಳೆ ಜಾಗೃತ ಳಾಗಬೇಕು, ಸಂಘಟಿತಳಾಗಬೇಕು. ಆಗ ಮಾತ್ರ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಹತ್ತಿಕ್ಕಲು ಸಾಧ್ಯ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ವಿಮಲ ಹೇಳಿದರು. ಅವರು, ಮಹಿಳೆಯರು ಮೇಲಿನ ದೌರ್ಜನ್ಯ ತಡೆ ಕುರಿತ ಬೆಂಗಳೂರು ನಗರ ಸಮಾವೇಶವನ್ನು ಮಿಷನ್ ರಸ್ತೆಯಲ್ಲಿರುವ ಎಸ್.ಸಿ.ಎಂ. ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ಜಿಲ್ಲಾ ನ್ಯಾಯಾಧೀಶರು, ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಗೌರವಾನ್ವಿತ ಎ.ವಿ.ಚಂದ್ರಶೇಖರ್ ಮಾತನಾಡಿ ದೇಶದ ಪ್ರಗತಿಯನ್ನು ಅಳೆಯುವುದು ಸಾಮಾಜಿಕ ಶಾಂತಿಯ ಮೇಲೆಯೇ ಹೊರತು ದೇಶದ ಶ್ರೀಮಂತಿಕೆಯ ಅಥವಾ ಅಭಿವೃದ್ಧಿ ಮೇಲಲ್ಲ. 1996ರಲ್ಲಿ 155ರಷ್ಟು ದೌರ್ಜನ್ಯದ ಕೇಸುಗಳಿದ್ದುದು 2004ರಷ್ಟರ ವೇಳೆಗೆ 3800 ರಕ್ಕೆ ಏರಿದೆ. ಇದರಲ್ಲಿ ಶೇ.30ರಷ್ಟು ವಿಚ್ಛೇದನ ಕೇಸುಗಳಾಗಿವೆ. ನಾಗರೀಕ ಸಮಾಜದ ಅತ್ಯಂತ ಉನ್ನತ ತಳಹದಿ ಎಂದರೆ ಕುಟುಂಬ. ಈ ಕುಟುಂಬಗಳೇ ಒಡೆದು ಹೋದರೆ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವಿಲ್ಲ. ಇದರ ವಿರುದ್ಧ ಮಹಿಳೆಯರು ಒಂದಾಗಿ ಹೋರಾಡಬೇಕು. ಜನವಾದಿ ಅಂತಹ ಸಂಘಟನೆ ಉತ್ತಮ ಕೆಲಸ ಮಾಡುತ್ತಿವೆ. ಇದರ ಜೊತೆ ಎಲ್ಲರೂ ಕೈ ಜೋಡಿಸಬೇಕು ಎಂದು ಹೇಳಿದರು.

ಖ್ಯಾತ ವಕೀಲರೂ, ರಾಜ್ಯ ಮಹಿಳಾ ಆಯೋಗದ ಸದಸ್ಯರು ಆಗಿರುವ ಹೇಮಲತಾ ಮಹಿಷಿಯವರು ವಿಷಯ ಮಂಡಿಸುತ್ತಾ ಮಹಿಳೆಯರ ಪರವಾದ ಅನೇಕ ಕಾನೂನುಗಳಿವೆ. ಆದರೆ ಆ ಕಾನೂನುಗಳಿಂದ ಏನನ್ನೂ ಸಾಧಿಸಲು ಆಗಿಲ್ಲ. ಕಾನೂನಿನಿಂದ ಎಲ್ಲವನ್ನು ಸಾಧಿಸಲು ಸಾಧ್ಯವಿಲ್ಲ. ಕಾನೂನಿನಿಂದ ಏನೂ ಅನುಷ್ಠಾನಗೊಳ್ಳುತ್ತಿಲ್ಲ. ನಮ್ಮ ಕಷ್ಟಗಳು ಪರಿಹಾರವಾಗುವುದಿಲ್ಲ. ಕಾನೂನು ಕೇವಲ ಒಂದು ಸಾಧನ ಅಷ್ಟೆ. ಕಾನೂನು ಅನುಷ್ಠಾನಗೊಳ್ಳಬೇಕಾದರೆ ಪ್ರಬಲವಾದ ಹೋರಾಟದಿಂದ ಮಾತ್ರ ಸಾಧ್ಯ. ಇಂದು ಮಹಿಳೆ ತನ್ನ ಅಭಿಪ್ರಾಯವನ್ನು ಸ್ವತಂತ್ರವಾಗಿ ವ್ಯಕ್ತಪಡಿಸಲು ಅವಕಾಶವೇ ಇಲ್ಲ. ಯಾವುದೇ ಧರ್ಮವಾಗಲಿ ಮಹಿಳೆಯ ಸಮಸ್ಯೆಯನ್ನು ಕೇವಲ ಅವು ಮಹಿಳೆಯ ಸಮಸ್ಯೆ, ಧರ್ಮದ್ದಲ್ಲ ಎಂದು ಕೈಚೆಲ್ಲಿ ತಾವು ಮಾಡುವುದೇನಿಲ್ಲ ಎಂದು ಜಾರಿಕೊಳ್ಳುತ್ತಾರೆ. ನಮ್ಮ ವಿರುದ್ಧ ಇರುವ ಶಕ್ತಿಗಳೆಂದರೆ ಜಾತಿ, ಧರ್ಮ. ಇದಕ್ಕಿಂತ ಹೆಚ್ಚಾಗಿ ರಾಜಕೀಯ ಶಕ್ತಿ ಪ್ರಧಾನ ಪಾತ್ರ ವಹಿಸುತ್ತದೆ. ಇದರ ವಿರುದ್ಧ ಸಮರ ಸಾರಬೇಕು. ಕೌಟುಂಬಿಕ ಹಿಂಸೆ ತಡೆ ಕಾನೂನು ಬರಬೇಕು. ಅದು ಒಳ್ಳೆಯದೆ. ಆದರೆ ಈ ಕಾನೂನು ಕುಟುಂಬಗಳನ್ನು ಒಡೆಯುವ ಆಕ್ಟ್ ಎನ್ನುವಂತೆ ಇದು ದುರುಪಯೋಗ ಆಗದಿರುವಂತೆ ಕ್ರಮ ವಹಿಸಬೇಕು. ಆಗ ಮಾತ್ರ ಕೌಟುಂಬಿಕ ಹಿಂಸೆ ತಡೆ ಕಾನೂನು ಯಶಸ್ವಿಯಾಗುತ್ತದೆ. ಫ್ಯಾಮಿಲಿ ಕೋರ್ಟ್‌ಗಳಿವೆ, ಆದರೆ ಅಲ್ಲಿ ಸರಿಯಾದ ವ್ಯವಸ್ಥೆಯಿಲ್ಲ. ಇದರ ಬಗ್ಗೆ ಜನವಾದಿ ಗಮನ ಹರಿಸಬೇಕು. ಫ್ಯಾಮಿಲಿ ಕೋರ್ಟ್‌ಗಳಿರುವ ಕಡೆಯಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳನ್ನು ಬೇರೆಯಾಗಿ ಪ್ರಾರಂಭಿಸಬೇಕು. ಕಾನೂನುಗಳು ಕೇವಲ ಕಾನೂನಾಗಿ ಉಳಿಯದೆ ಮಹಿಳೆಯರಿಗೆ ಸಹಾಯಕವಾಗುವಂತಾಗಬೇಕು ಎಂದು ಹೇಳಿದರು.

ಡೆಕನ್ ಹೆರಾಲ್ಡ್ ಪತ್ರಿಕೆಯ ಸಹ ಸಂಪಾದಕಿ ಜಾನಕಿ ಮುರಳಿ ಮಾತನಾಡಿ ಮಹಿಳೆಯರ ಮೇಲಿನ ದೌರ್ಜನ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಇದೆ. ಇದರ ವಿರುದ್ಧ ಮಹಿಳೆಯರಲ್ಲಿ ಜಾಗೃತಿ ಮೂಡಿಸಲು ಜನವಾದಿಯಂತಹ ಸಂಘಟನೆ ಪ್ರಚಾರ ಮಾಡಬೇಕು ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕರಾದ ಡಾ. ವಸು ವಿಷಯವನ್ನು 'ಸಂಪ್ರದಾಯ ಮತ್ತು ಮಹಿಳೆ' ಎಂಬ ನಿಟ್ಟಿನಲ್ಲಿ ಮಂಡಿಸುತ್ತಾ ನಮ್ಮ ಇಡೀ ಹೋರಾಟ ನಾವು ನಂಬಿರುವ ಪುರುಷ ಪ್ರಧಾನ ಮೌಲ್ಯದ ವಿರುದ್ಧ ಆಗಬೇಕೆ ಹೊರತು ಪುರುಷರ ವಿರುದ್ಧವಲ್ಲ. ಮಹಿಳೆಗೆ ದಾಂಪತ್ಯ ಬದುಕಿಗಾಗಲಿ, ಲೈಂಗಿಕ ಬದುಕಿಗಾಗಲಿ ಸ್ವಾತಂತ್ರ್ಯವಿಲ್ಲ. ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯ ದೌರ್ಜನ್ಯವಾಗುತ್ತಿದೆ. ಈ ಪದಗಳೇ ಮಹಿಳೆಯನ್ನು ಚಿಂತನೆಯಿಂದ ಕಟ್ಟಿಹಾಕುತ್ತದೆ. ಮಹಿಳೆಯರನ್ನು ಹುಟ್ಟಿನಿಂದ ಮದುವೆಗೆ ಸಿದ್ಧಪಡಿಸುವಂತೆ ಸಮಾಜದ ಮನೋಭಾವ ಇದೆ. ಬದುಕಿನ ಸವಾಲನ್ನು ಸ್ವೀಕರಿಸಿ ಎದ್ದು ನಿಲ್ಲುವಂತೆ ನಾವು ಕಲಿಸುವುದಿಲ್ಲ. ಮಗುವಿನ ಹುಟ್ಟಿನಿಂದ ಅದಕ್ಕೆ ನೀಡುವ ಮೊದಲ ತುತ್ತಿನಿಂದ ತಾಯಿ ಅಭದ್ರತೆಯ ಭಾವನೆಯನ್ನು ಬೆಳೆಸುತ್ತಾಳೆ. ಇದರಿಂದ ಮಹಿಳೆಯ ಮೊದಲ ಆಧಾರವೇ ಕುಸಿದು ಹೋಗುತ್ತದೆ. ಮಹಿಳೆಯ 'ರಕ್ಷಣೆ' ಎಂಬುದು ಅವಳ ಮನಸ್ಸಿನ ವಿಕಾಸವನ್ನು, ದೈಹಿಕ ವಿಕಾಸವನ್ನು ಕುಂಠಿತ ಮಾಡುತ್ತದೆ. ಇಂದು ತಂದೆ ತಾಯಂದಿರು ಮಹಿಳೆಗೆ ವಿದ್ಯಾಭ್ಯಾಸ ನೀಡುವುದೆಂದರೆ ನಾಳೆ ಆಗುವ ಅವಳ ಮದುವೆಯ ಆಯ್ಕೆ ಎಂದರ್ಥ. ದೌರ್ಜನ್ಯಕ್ಕೆ ಕೇವಲ ಮಹಿಳೆ ಅಲ್ಲ ಪುರುಷರೂ ಬಲಿಯಾಗುತ್ತಾರೆ. ದೌರ್ಜನ್ಯದ ಹಿಂದೆ ಒಂದು ದೊಡ್ಡ ವ್ಯವಸ್ಥೆ ಇದೆ. ಪುರುಷ ಹಾಗೂ ಮಹಿಳೆಯರಿಬ್ಬರೂ ಸೂಕ್ಷ್ಮಮತಿಗಳಾದಾಗ ಮಾತ್ರ ದೌರ್ಜನ್ಯವನ್ನು ಹೊಡೆದೋಡಿಸಲು ಸಾಧ್ಯ. ಕಾನೂನಿನಿಂದ ತಡೆ ಹಾಕಲು ಸಾಧ್ಯವಿಲ್ಲ. ಒಟ್ಟಾರೆ ಮಹಿಳಾ ವಿಕಾಸವಾದರೆ ಮಾತ್ರ ಒಟ್ಟಾರೆ ಸ್ವಾಸ್ಥ ಸಮಾಜದ ವಿಕಾಸ ಸಾಧ್ಯ ಎಂದರು.

ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಅ.ಭಾ.ಜ.ಮ. ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಗೌರಮ್ಮ ಮಹಿಳೆ ತನ್ನ ಮೇಲೆ ಅತ್ಯಾಚಾರವಾಗಿದೆ. ನ್ಯಾಯ ದೊರಕಿಸಿ ಕೊಡಿ ಎಂದು ಪೊಲೀಸ್ ಠಾಣೆಗೆ ಹೋದರೆ ನ್ಯಾಯ ದೊರಕಿಸಿ ಕೊಡಬೇಕಾದ ಪೋಲೀಸರೇ ನಿನ್ನ ನಡತೆ ಸರಿಯಾಗಿಲ್ಲ ಎಂದು ಬೆದರಿಸಿ ಕಳುಹಿಸುತ್ತಾರೆ. ಕಾನೂನನ್ನು ಕಾಪಾಡ ಬೇಕಾದ ವ್ಯಕ್ತಿಗಳೇ ಮಹಿಳೆಯರಿಗೆ ಎಲ್ಲಾ ರೀತಿಯ ತೊಂದರೆಕೊಡುತ್ತಾರೆ. ಸ್ತ್ರೀ ಭ್ರೂಣ ಹತ್ಯೆ ಮಾಡ್ತೀವಿ ಎಂದರೆ ನಾವೇ -ಮಹಿಳೆಯರೇ ಅವನ್ನು ವಿರೋಧಿಸುವ ಬದಲು ಅದರ ಪರ ನಿಲ್ತೀವಿ. ಮಹಿಳೆಯರ ಮೇಲಿನ ಎಲ್ಲಾ ರೀತಿಯ ದೌರ್ಜನ್ಯ ನಿಲ್ಲಬೇಕು ಎಂದಾದರೆ ನಾವೆಲ್ಲರೂ ಸೇರಿ ಒಂದು ದೀರ್ಘವಾದ ಹೋರಾಟ ಮಾಡಬೇಕಾಗಿದೆ. ಹೋರಾಟ ಒಂದೇ ದಾರಿ ಎಂದು ಅವರು ಹೇಳಿದರು.

ಈ ಸಮಾವೇಶದ ಮುಖ್ಯ ಅತಿಥಿಗಳಾಗಿದ್ದ ನಗರ ಪೋಲಿಸ್ ಇಲಾಖೆಯ ಆಯುಕ್ತರಾಗಿರುವ ಡಾ. ಅಜಯ್ ಕುಮಾರ್ ಸಿಂಗ್ ಬರಬೇಕಾಗಿತ್ತು. ಆದರೆ ಅವರ ಗೈರು ಹಾಜರಿಯಿಂದ ಸಮಾವೇಶಕ್ಕೆ ಬಂದಿದ್ದ ಅನೇಕ ನೊಂದ ಮಹಿಳೆಯರಿಗೆ ನಿರಾಶೆಯಾಯಿತು. ಆಯುಕ್ತರ ಗೈರುಹಾಜರಿಯಲ್ಲೂ ಕೆಲವು ಮಹಿಳೆಯರು ತಮ್ಮ ಅಳಲನ್ನು ತೋಡಿಕೊಂಡರು. ಪೋಲಿಸ್ ಆಯುಕ್ತರ ಗೈರುಹಾಜರಿಯೇ ಎತ್ತಿತೋರಿಸುತ್ತದೆ, ಅವರು ಎಷ್ಟರಮಟ್ಟಿಗೆ ನೊಂದ, ದೌರ್ಜನ್ಯಕ್ಕೊಳಗಾದ ಮಹಿಳೆಯರ ಪರ ಕಾಳಜಿ ವಹಿಸುತ್ತಾರೆ ಎಂದು ಸಮಾವೇಶದಲ್ಲಿ ಪಾಲ್ಗೊಂಡವರೆಲ್ಲರೂ ಅಭಿಪ್ರಾಯ ಪಟ್ಟರು.

ಸಮಾವೇಶದ ಸ್ವಾಗತವನ್ನು ಕೆ.ಎಸ್.ಲಕ್ಷ್ಮಿ ನಡೆಸಿಕೊಟ್ಟರು. ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಕೆ.ಎಸ್. ಶಾರದ ವಂದನಾರ್ಪಣೆ ಯೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.



ಕರ್ನಾಟಕದ ಜನರ ಸಮಸ್ಯೆಗಳು ಮತ್ತು ರಾಜಕೀಯ ಪಕ್ಷಗಳು

ರಾಜ್ಯ ಸಮ್ಮಿಶ್ರ ಸರ್ಕಾರದ ಭಾಗಿದಾರ ಪಕ್ಷಗಳು - ಅಧಿಕೃತ ವಿರೋಧ ಪಕ್ಷ ಬಿಜೆಪಿ ಜನರ ನೈಜ ಸಮಸ್ಯೆಗಳನ್ನು ದುರ್ಲಕ್ಷಿಸಿ ಬೇಜವಾಬ್ದಾರಿಯನ್ನು ಮೆರೆಯುತ್ತಿರುವ ಪರಿಸ್ಥಿತಿಯಲ್ಲಿ ಸಿಪಿಐ(ಎಂ) ಪಕ್ಷವು ಆಹಾರ, ಭೂಮಿ, ಉದ್ಯೋಗದ ಪ್ರಶ್ನೆಗಳ ಆಧಾರದಲ್ಲಿ ರಾಜ್ಯವ್ಯಾಪಿ ನಡೆಸಿದ ಪ್ರಚಾರಾಂದೋಲನದಿಂದಾಗಿ ರೇಷನ್ ವ್ಯವಸ್ಥೆ-ವಸತಿ ನಿವೇಶನ - ಇತ್ಯಾದಿ ಹಲವು ಜನರ ಬದುಕಿನ ಜ್ವಲಂತ ಪ್ರಶ್ನೆಗಳು ಮೇಲೆದ್ದು ಬಂದಿವೆ. ಈ ಸಂಬಂಧ ಹಲವು ಜಿಲ್ಲೆಗಳಲ್ಲಿ ಚಳುವಳಿಗಳೂ ನಡೆಯುತ್ತಿವೆ. ಸಿಪಿಐ(ಎಂ) ಪಕ್ಷವು ರೇಷನ್ ಮತ್ತು ನಿವೇಶನ ಇತ್ಯಾದಿಗಳಿಗಾಗಿ ನಡೆಯುತ್ತಿರುವ ಚಳುವಳಿಯನ್ನು ತೀವ್ರಗೊಳಿಸಬೇಕು, ಚಳುವಳಿಯನ್ನು ಸಮಸ್ಯೆಯ ಪರಿಹಾರದ ಕಡೆಗೆ ಒಯ್ಯಬೇಕೆಂದು ನಿರ್ಧರಿಸಿದೆ.

ರೇಷನ್ ಮತ್ತು ನಿವೇಶನಕ್ಕಾಗಿ ಚಳುವಳಿ ತೀವ್ರಗೊಳಿಸಲು ಸಿಪಿಐ(ಎಂ) ನಿರ್ಧಾರ

ಜಿ.ಎನ್.ನಾಗರಾಜ್

ಮೂರು-ನಾಲ್ಕು ವರ್ಷಗಳ ಕಾಲ ಕರ್ನಾಟಕದ ಗ್ರಾಮೀಣ ಜನತೆ ಅನುಭವಿಸಿದ ಆಳವಾದ ಬಿಕ್ಕಟ್ಟು ಮತ್ತು ಸಂಕಟಗಳನ್ನು ರೈತರ ಆತ್ಮಹತ್ಯೆಗಳು ಮತ್ತು ಹಸಿವಿನ ಸಾವುಗಳು ಎತ್ತಿ ತೋರಿಸಿದವು. ಆ ಸಂದರ್ಭದಲ್ಲಿ ಕರ್ನಾಟಕವನ್ನು ಕಾಡಿದ ಬರಗಾಲ ಈ ಬಿಕ್ಕಟ್ಟನ್ನು ಎತ್ತಿತೋರಿಸಲು ಕಾರಣವಾಯಿತು, ಅಷ್ಟೇ ಹೊರತು ಈ ಸಂಕಟಗಳಿಗೆ ಎಸ್.ಎಂ.ಕೃಷ್ಣ ಮೊದಲಾದ ಇರುಳುಗುರುಡರು ಭಾವಿಸಿದಂತೆ ಬರಗಾಲವೇ ಅವರ ಸಂಕಟಕ್ಕೆ ಕಾರಣವಲ್ಲ. ಕೃಷಿಯ ಬಿಕ್ಕಟ್ಟಿಗೆ ಇರುವ ನಿಜವಾದ ಕಾರಣಗಳನ್ನು - ಯಾರಿಗಾದರೂ ಎದ್ದು ಕಾಣುವಂತಿದ್ದ ಕಾರಣಗಳನ್ನು ಕಾಣಬಯಸದೆ ಕುರುಡರಂತೆ ನಟಿಸಿದ್ದರ ಫಲವಾಗಿಯೇ ಕೃಷ್ಣ ಸರ್ಕಾರ ಮಣ್ಣು ಮುಕ್ಕಿತು. ನಂತರ ಅಧಿಕಾರಕ್ಕೆ ಬಂದಿರುವ ಸಮ್ಮಿಶ್ರ ಸರ್ಕಾರ ಕೃಷಿ ಬಿಕ್ಕಟ್ಟಿನ ಎರಡು ನಿಜವಾದ ಕಾರಣಗಳ ಬಗ್ಗೆ ಪ್ರಮುಖ ಕ್ರಮಗಳನ್ನು ಕೈಗೊಂಡಿತು. ಆದರೆ ಈ ವರ್ಷ ಮಳೆ ಹೆಚ್ಚಾಗಿ ಸುರಿದು ಅದರಿಂದಾಗಿ ಕೃಷಿಯ ಬಿಕ್ಕಟ್ಟು ಮತ್ತದರ ಸಂಕಟಗಳು ಮರೆಗೆ ಸರಿದಂತಾಗಿದೆ. ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಅಷ್ಟಕ್ಕೇ ತೃಪ್ತರಾಗಿ ಕೃಷಿಯ ಬಿಕ್ಕಟ್ಟು ಎಂಬುದು ಇಲ್ಲವೇಇಲ್ಲವೇನೋ ಎಂಬಂತೆ ವರ್ತಿಸುತ್ತಿದ್ದಾರೆ. ಹಿಂದಿನ ಸರ್ಕಾರದ ಅದೇ ಕುರುಡುತನ ಇವರನ್ನು ಆವರಿಸಿದೆ.

ಕರ್ನಾಟಕದ ಕೈಗಾರಿಕೆಗಳು ಅನೇಕ ರೀತಿಯ ಸಂಕಷ್ಟಗಳನ್ನು ಎದುರಿಸುತ್ತಿವೆ. ವಿದೇಶಿ ಆಮದುಗಳಿಂದ, ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ, ಡಾಲರು ದರಗಳ ಏರುಪೇರುಗಳಿಂದ ಸ್ಪರ್ಧೆಯನ್ನೆದುರಿಸುತ್ತಿವೆ. ತಮ್ಮ ಎಲ್ಲಾ ಕಷ್ಟಗಳನ್ನು ಕಾರ್ಮಿಕರ ತಲೆಯ ಮೇಲೆ ಹಾಕಿ ಅವರನ್ನು ಕೆಲಸದಿಂದ ಕಿತ್ತುಹಾಕುವ, ಅವರ ಸಂಬಳಗಳನ್ನು ಅದುಮಿಡುವ ಬಂಡವಾಳಶಾಹಿಗಳ ಕಾಯಕಕ್ಕೆ ಸರ್ಕಾರ ತನ್ನ ಎಲ್ಲಾ ಸಹಕಾರವನ್ನು ನೀಡುತ್ತಾ ಬರುತ್ತಿದೆ. ಹೆಚ್ಚು ಹೆಚ್ಚು ವಿದೇಶಿ ಬಂಡವಾಳ ಬರಬೇಕು ಅದಕ್ಕಾಗಿ ಕರ್ನಾಟಕದ ಕಾರ್ಮಿಕರ ಕೂಲಿ ಅತ್ಯಂತ ಅಗ್ಗಕ್ಕೆ ಸಿಗಬೇಕು ಎಂಬುದಷ್ಟೇ ಅವರ ಪಲ್ಲವಿಯಾಗಿದೆ.

ಸ್ವತಃ ಕರ್ನಾಟಕ ಸರ್ಕಾರವೇ ಇಂದು ಬಂಡವಾಳಶಾಹಿಗಳ ಅಮಾನವೀಯ ಮಾರ್ಗದರ್ಶಿಯಾಗಿದೆ. ಕರ್ನಾಟಕ ಸರ್ಕಾರದ ಹಲವಾರು ಇಲಾಖೆಗಳನ್ನು ಬೇರೆ ಇಲಾಖೆಗಳೊಂದಿಗೆ ಸೇರ್ಪಡೆ ಮಾಡಿ ಸರ್ಕಾರಿ ಹುದ್ದೆಗಳನ್ನು ನಾಶ ಮಾಡುವ, ಅವರ ಜಾಗದಲ್ಲಿ ತಾತ್ಕಾಲಿಕ, ಅಲ್ಪಕಾಲಿಕ, ಹಾಗೂ ಗೌರವಧನದ ಹೆಸರಿನ ಅರೆಹೊಟ್ಟೆಯ ಕೆಲಸಗಾರರನ್ನು ಸೃಷ್ಟಿಸುತ್ತಾ ಸಾಗಿದೆ. ಸರ್ಕಾರದ ಕಾಮಗಾರಿಗಳಲ್ಲಿ ಕೂಲಿಕಾರರ ಅವಶ್ಯಕತೆಯೇ ಇಲ್ಲದಂತೆ ಬೃಹತ್ ಯಂತ್ರೋಪಕರಣಗಳನ್ನು ಬಳಸುತ್ತಿದೆ.

ಕರ್ನಾಟಕ ನಗರ ಪ್ರದೇಶಗಳನ್ನು ಸ್ವಚ್ಛ ಮಾಡುವ ಹೆಸರಿನಲ್ಲಿ ಬಡವರ ಮನೆಗಳನ್ನು ಅವರ ಜೀವನದ ದಾರಿಗಳನ್ನು ನಾಶ ಮಾಡುತ್ತಾ ಸಾಗಿದೆ. ಬಡವರ ವಸತಿ ಹಾಗೂ ನಿವೇಶನಗಳು ಶ್ರೀಮಂತರ ಆಕ್ರಮಣಕ್ಕೆ ಒಳಗಾಗಿವೆ. ಅವರ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ.

ಇಂತಹ ಸಂದರ್ಭದಲ್ಲಿ ಕರ್ನಾಟಕದ ವಿವಿಧ ರಾಜಕೀಯ ಪಕ್ಷಗಳು ಏನು ಮಾಡುತ್ತಿವೆ? ಸಮ್ಮಿಶ್ರ ಸರ್ಕಾರ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಸರ್ಕಾರ ನಡೆಸುತ್ತಿರುವ ಎರಡೂ ಪಕ್ಷಗಳೂ ಪರಸ್ಪರ ಕಾದಾಡುತ್ತಿವೆ. ಜೊತೆಗೆ ಪ್ರತಿಯೊಂದು ಪಕ್ಷದಲ್ಲಿಯೂ ಅಧಿಕಾರದಾಹ, ವ್ಯಕ್ತಿ ಪ್ರತಿಷ್ಠೆ ಹಾಗೂ ಗುಂಪುಗಾರಿಕೆಗಳು ಮೆರೆದಾಡುತ್ತಿವೆ. ಜನತಾದಳದೊಳಗಿನ ಹಾಗೂ ನಮ್ಮ ರಾಜ್ಯದ ಪ್ರಧಾನ ವಿರೋಧ ಪಕ್ಷ ಅತ್ಯಂತ ಹೆಚ್ಚು ಸಂಸದರನ್ನು ಹೊಂದಿದ ಬಿಜೆಪಿಯೊಳಗಿನ ಗುಂಪುಗಳ ಕಚ್ಚಾಟಗಳು ಇಡೀ ರಾಜ್ಯದ 5 ಕೋಟಿ ಜನರ ಸಮಸ್ಯೆಯೇನೋ ಎಂಬಂತೆ ಬಿಂಬಿತವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಜನರ ಸಮಸ್ಯೆಯ ಬಗ್ಗೆ ಕೇಳುವವರಾರು? ಕೇಳುವವರಾರು ಎಂಬುದಲ್ಲ ಪ್ರಶ್ನೆ. ಜನರಿಗೆ ತಮ್ಮ ಪ್ರಶ್ನೆಗಳು ಗಮನಕ್ಕೆ ಬಾರದಂತೆ ಅದನ್ನು ಮುಚ್ಚಿಡಲೆಂದೇ ಸಮಸ್ಯೆಗಳಲ್ಲದವನ್ನು ಸಮಸ್ಯೆಗಳನ್ನಾಗಿ ಮಾಡಿಕೊಂಡು ಅಥವಾ ತಮ್ಮ ಕಚ್ಚಾಟಗಳನ್ನೇ ರಾಜ್ಯದ ಸಮಸ್ಯೆಯೆಂದು ಬಿಂಬಿಸುತ್ತಿರುವುದು.

ಜನರ ಮತಗಳನ್ನು ಪಡೆದು ಜನರ ಸಮಸ್ಯೆಗಳನ್ನು ಬಗೆಹರಿಸುವ ಹೊಣೆ ಹೊತ್ತ ಮೂರು ಪಕ್ಷಗಳ ಕತೆ ಇದಾಗಿರುವಾಗ, ಇವರ ಕಚ್ಚಾಟವನ್ನು ನೋಡಿ ನೋಡಿ ಜನ ಬೇಸತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಜನರ ನೈಜ ಸಮಸ್ಯೆಗಳನ್ನೆತ್ತಿ ಹಿಡಿಯುವುದಕ್ಕೆ ಮುಂದಾದ ಸಿಪಿಐ(ಎಂ) ಪಕ್ಷಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. 58 ವರ್ಷಗಳ ಸ್ವಾತಂತ್ರ್ಯದ ತರುವಾಯವೂ ತಮ್ಮ ಸಮಸ್ಯೆಗಳು ಬಗೆಹರಿಯದಿರುವುದು, 15 ವರ್ಷಗಳ ಜಾಗತೀಕರಣ ಒಂದರ ಮೇಲೆ ಮತ್ತೊಂದು ಎಂಬಂತೆ ಹೇರುತ್ತಿರುವ ಸಮಸ್ಯೆಗಳ ಫಲವಾಗಿ ಜನ ಬಸವಳಿದಿದ್ದಾರೆ. ತಮಗೆ ಸಿಕ್ಕ ಅವಕಾಶಗಳನ್ನೆಲ್ಲಾ ಬಳಸಿಕೊಂಡು, ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಸೆ. 29 ರ ಸಾರ್ವತ್ರಿಕ ಮುಷ್ಕರ ಹಾಗೂ 'ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ' ಕರೆಗೆ ಸಿಕ್ಕ ಅಪೂರ್ವ ಜನಬೆಂಬಲ ಇಂತಹ ಒಂದು ಅಭಿವ್ಯಕ್ತಿ. ಇದನ್ನು ಆಳುವವರ್ಗದ ಪಕ್ಷಗಳು ನಿರ್ಲಕ್ಷಿಸಿದರೆ ಅವರಿಗೇ ಆಪತ್ತು.

ಅದೇ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಘಟಕಗಳು ರಾಜ್ಯಾದ್ಯಂತ ನಡೆಸಿದ ವ್ಯಾಪಕ ಪ್ರಚಾರ ಜನರಿಗೆ ತಮ್ಮ ಸಮಸ್ಯೆಗಳನ್ನು ಎತ್ತಲು ಧೈರ್ಯ ಮತ್ತು ಅವಕಾಶವನ್ನು ನೀಡಿದೆ. ಇಡೀ ರಾಜ್ಯದಾದ್ಯಂತ ಎಲ್ಲೆಡೆಯೂ ಆಹಾರ ಮತ್ತು ನಿವೇಶನಗಳ ಸಮಸ್ಯೆಗಳು ಪ್ರಖರವಾಗಿ ಎದ್ದುಬಂದಿವೆ. 3 ರೂ.ಗೆ ಕೆ.ಜಿ. ಅಕ್ಕಿಯನ್ನು ನೀಡುವುದಾಗಿ ಸರ್ಕಾರ ಘೋಷಿಸಿದರೂ ಬಡಜನರ, ಕೂಲಿಕಾರರ ಕಣ್ಣಮುಂದೆಯೇ ಉಳ್ಳವರ ಪಾಲಾಗುತ್ತಿದೆ. ರೇಷನ್ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ಬಡ ಜನರ ಅನ್ನದ ಲೂಟಿಯೇ ನಡೆಯುತ್ತಿದೆ. ಬಡಜನತೆ ತಮಗೆ ದಕ್ಕಬೇಕಾದ ಪಾಲನ್ನು ತಾವೇ ಪಡೆಯಲು ಮುಂದಾಗಿದ್ದಾರೆ. ಹಳದಿ ಕಾರ್ಡುಗಳನ್ನು ಪಡೆಯಲು, ರೇಷನ್ ಡಿಪೋಗಳಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಸಿದ್ಧರಾಗಿರುವ ಈ ಜನರನ್ನು ನಿರಾಸೆಗೊಳಿಸದಂತೆ ಅವರ ಬಯಕೆ ಈಡೇರಲು ಬೇಕಾದ ಹೋರಾಟಗಳನ್ನು ರೂಪಿಸಲು ಪಕ್ಷದ ಘಟಕಗಳು, ಸದಸ್ಯರು ಸನ್ನದ್ಧರಾಗಬೇಕು.



ಅದೇ ರೀತಿ ನಿವೇಶನಗಳ ಮತ್ತು ವಸತಿ ಸಮಸ್ಯೆಯೂ ಬಹಳ ವ್ಯಾಪಕವಾಗಿದೆ. ಒಂದು ಕಡೆ ಹಳ್ಳಿಗಳಲ್ಲಿರುವ ಸಾರ್ವಜನಿಕ ಉಪಯೋಗದ ಭೂಮಿ-ಗೋಮಾಳ, ಗುಂಡು ತೋಪು, ಸರ್ಕಾರಿ ಭೂಮಿಗಳು, ಭೂಮಾಲಕರ, ಶ್ರೀಮಂತರ ಆಕ್ರಮಣಕ್ಕೆ ಒಳಗಾಗಿವೆ. ಊರ ಸುತ್ತುಮುತ್ತಲಿನ ಭೂಮಿಗಳು ಶ್ರೀಮಂತರಿಗೆ ಸೇರಿರುವುದರಿಂದ ಅದನ್ನು ಅವರು ಬಿಟ್ಟುಕೊಡುವುದಿಲ್ಲ ಅಥವಾ ತಾವೇ ಅದನ್ನು ನಿವೇಶನಗಳನ್ನಾಗಿ ಮಾಡಿ ದುಬಾರಿ ಬೆಲೆಗೆ ಮಾರುತ್ತಾರೆ. ಹೀಗಾಗಿ ಬಡವರಿಗೆ ವಸತಿ ನಿವೇಶನಗಳೇ ಇಲ್ಲದಂತಾಗಿದೆ. ನಗರಗಳಲ್ಲಿ ಹಳದಿಕಾರ್ಡ್ ಹಾಗೂ ನಿವೇಶನಗಳ ಪರಿಸ್ಥಿತಿ ಶೋಚನೀಯವಾಗಿದೆ.

ಹಲವಾರು ದಶಕಗಳಿಂದ ಗ್ರಾಮೀಣ ಬಡವರು ವಲಸೆ ಬಂದು ನಗರಗಳ ಹೊರವಲಯದಲ್ಲಿ ನೆಲಸುತ್ತಾ ಬಂದರು. ಈಗ ನಗರಗಳು ಬೆಳೆದು ಈ ಪ್ರದೇಶಗಳು ನಗರಗಳ ಕೇಂದ್ರ ಭಾಗಗಳಾಗಿಬಿಟ್ಟಿವೆ. ಆ ಪ್ರದೇಶಗಳಲ್ಲಿ ಭೂಮಿಯ ಬೆಲೆ ಗಗನಕ್ಕೇರಿದೆ. ಇದು ಅನೇಕರ ಬಾಯಲ್ಲಿ ಜೊಲ್ಲು ಸುರಿಸುವಂತೆ ಮಾಡಿದೆ. ಚಿನ್ನದ ಬೆಲೆ ಇರುವ ಭೂಮಿಯನ್ನು ಈ 'ಕೊಳಕು' 'ದರಿದ್ರ ಜನ' ವಾಸಿಸಲು ಬಿಡುವುದುಂಟೆ? ಸರಿ ಜೊಲ್ಲು ಸುರಿಸುವ ಜನ ತಾವು ಜನರ ಪ್ರತಿನಿಧಿಗಳಾಗಿ ಆಕ್ರಮಿಸಿದ ನಗರಸಭೆ ಸದಸ್ಯತ್ವ, ಅಧ್ಯಕ್ಷರ ಸ್ಥಾನ, ವಿಧಾನಸಭಾ, ಲೋಕಸಭಾ ಸದಸ್ಯರ ಸ್ಥಾನಗಳನ್ನು ಬಳಸಿಕೊಂಡು ನಗರಗಳ ಸ್ವಚ್ಛತೆಯ ಸೌಂದರ್ಯದ ಹೆಸರಿನಲ್ಲಿ, ಶಿಕ್ಷಣ ಸಂಸ್ಥೆಗಳನ್ನು, ಉದ್ಯಾನವನಗಳನ್ನು ಸ್ಥಾಪಿಸುವ ಹೆಸರಿನಲ್ಲಿ ಇವರು ವಾಸವಾಗಿರುವ ಭೂಮಿಯಿಂದ ಎತ್ತಂಗಡಿ ಮಾಡಿಸುವ ಹಲವು ಹುನ್ನಾರಗಳನ್ನು ಮಾಡುತ್ತಿದ್ದಾರೆ. ಬಡಜನತೆ ಹೊಸ ನಿವೇಶನಗಳನ್ನು ಪಡೆಯುವುದಿರಲಿ, ತಾವಿದ್ದ ಜಾಗಗಳನ್ನು ಕಳೆದುಕೊಳ್ಳುವ ಪರಿಸ್ಥಿತಿಯಿಂದ ಕಂಗೆಟ್ಟಿದ್ದಾರೆ. ಪಕ್ಷದ ಪ್ರಚಾರಾಂದೋಲನ ಇವರಿಗೆ ಪ್ರತಿಭಟಿಸುವ ಧೈರ್ಯವನ್ನು ನೀಡಿದೆ.

ಇಂತಹ ಸಂದರ್ಭದಲ್ಲಿ ಪಕ್ಷದ ಘಟಕಗಳು ಯಶಸ್ವಿಯಾದ ಪ್ರಚಾರ ಮಾಡುವುದಕ್ಕಷ್ಟೇ ತೃಪ್ತರಾಗಿ ಕೂಡುವಂತಿಲ್ಲ. ತಾವೇ ನೀಡಿದ ಧೈರ್ಯ, ಸ್ಫೂರ್ತಿಗಳಿಂದ ಹೋರಾಟಕ್ಕೆ ಸಜ್ಜಾಗಿರುವ ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಲು, ಪಡೆಯಲು ಕಾತರರಾಗಿರುವ ಜನರನ್ನು ಹೋರಾಟದ ಕಣಕ್ಕಿಳಿಸಿ ಅವರಿಗೆ ಪರಿಹಾರ ಸಿಗುವಂತಹ ಪ್ರಯತ್ನವನ್ನು ಮಾಡಬೇಕಾಗಿದೆ. ಇಂತಹ ಹೋರಾಟ ಭೂಚೋರ ಪಟ್ಟಭದ್ರ ಹಿತಗಳ ಕಣ್ಣು ಕೆಂಪಗಾಗುವಂತೆ ಮಾಡುತ್ತದೆ. ಅವರು ಹೋರಾಟಗಳನ್ನು ಹತ್ತಿಕ್ಕಲು, ಒಡೆಯಲು ಪ್ರಯತ್ನಿಸುತ್ತಾರೆ. ಭೂಮಾಲಕ ಹಿತಾಸಕ್ತಿಗಳ ಇಂತಹ ಎಲ್ಲಾ ಕುಂತ್ರಗಳನ್ನು ಮೀರಿ, ದೃಢ ಹಾಗೂ ನಿರಂತರ ಪ್ರಯತ್ನದಿಂದ ಸಂಕಟಕ್ಕೊಳಗಾಗಿರುವ ಈ ಜನರ ಕೂಗಿಗೆ ದನಿ ಕೊಡಬೇಕಾಗಿದೆ.


ಇದಕ್ಕಾಗಿ ಸಿಪಿಐ(ಎಂ) ರಾಜ್ಯಸಮಿತಿ ರಾಜ್ಯಾದ್ಯಂತ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಹತ್ತಾರು ದಿನಗಳ ಧರಣಿ ಹಾಗೂ ಪಿಕೆಟಿಂಗ್ ನಡೆಸಲು ಕರೆ ನೀಡಿದೆ. ಕೇವಲ ಪ್ರಚಾರಕ್ಕೆ ತೃಪ್ತರಾಗದೆ ಜನರ ಬೇಡಿಕೆಗಳನ್ನು ಈಡೇರಿಸುವ ಸಿಪಿಐ(ಎಂ) ಛಲದ ಪ್ರತೀಕ ಇದು. ರಾಜ್ಯದಲ್ಲಿ ಸಿಪಿಐ(ಎಂ) ಸದಸ್ಯರು ಆಳುವ ವರ್ಗಗಳಿಂದ ದಮನಕ್ಕೊಳಗಾದ ಜನರ ಹಕ್ಕುಗಳನ್ನು ರಕ್ಷಿಸುವ ಈ ಹೋರಾಟಕ್ಕೆ ಕಂಕಣಬದ್ಧರಾಗಿ ಧುಮುಕಬೇಕು. ○

ಸೆಪ್ಟೆಂಬರ್ 29 ರ ಮುಷ್ಕರಕ್ಕೆ ಹುಚ್ಚುಚ್ಚಾದ ಪ್ರತಿಕ್ರಿಯೆ

ಯಾರ ಹಿತಾಸಕ್ತಿಯ ರಕ್ಷಣೆಗೆ ?

ದೇಶದ ಮಿಲಿಯಾಂತರ ಕಾರ್ಮಿಕರು - ದುಡಿಯುವ ವರ್ಗ ನಡೆಸಿದ ಸೆಪ್ಟೆಂಬರ್ 29, 2005 ರ ಸಾರ್ವತ್ರಿಕ ಮುಷ್ಕರದ ಯಶಸ್ಸಿನಿಂದ ಕಂಗೆಟ್ಟಿರುವ ದೇಶದ ದೊಡ್ಡ ಬಂಡವಾಳಿಗರು ಅವರ ಪರವಾದ ಮಾಧ್ಯಮಗಳು ದುಡಿಯುವ ವರ್ಗ ಎತ್ತಿರುವ ದೇಶದ ಹಿತಾಸಕ್ತಿಯ ಪ್ರಶ್ನೆಗಳನ್ನು ಮರೆಮಾಚಿ ಈ ಮುಷ್ಕರ ಎಡ ಪಕ್ಷಗಳ ಹೊಣೆಗೇಡಿತನದ ಫಲ ಎಂದು ಬಿಂಬಿಸಲು ಪ್ರಯತ್ನಿಸುತ್ತಿವೆ. ಇಂತಹ ವ್ಯವಸ್ಥಿತ ಆರೋಪಗಳು ಅಪಪ್ರಚಾರಗಳ ಕುರಿತು ಪಕ್ಷ ರಾಜಕೀಯದ ಮಿತಿಗಳನ್ನು ಮೀರಿ ನಡೆದ ದುಡಿಯುವ ವರ್ಗದ ಕಾರ್ಯಾಚರಣೆಯ ಕುರಿತು ಬರೆದಿದ್ದಾರೆ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ

ಪ್ರಕಾಶ್ ಕಾರಟ್.



ಸೆಪ್ಟೆಂಬರ್ 29ರ ಸಾರ್ವತ್ರಿಕ ಮುಷ್ಕರಕ್ಕೆ ಕಂಡುಬಂದ ಪ್ರತಿಕ್ರಿಯೆಗಳ ಒಂದು ಮುಖ್ಯ ಲಕ್ಷಣವೆಂದರೆ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲೆ ಬಲವಾದ, ಕಟು ದೂಷಣೆಗಳಿಂದ ತುಂಬಿದ ಧಾಳಿ. ದೊಡ್ಡ ಕಂಪನಿಗಳ ಮಾಲಕತ್ವದ ಮಾಧ್ಯಮಗಳು ಕಾರ್ಮಿಕರ ಮುಷ್ಕರವನ್ನು ಹೀಗಳೆಯುತ್ತವೆ, ಕಾರ್ಮಿಕ ಸಂಘಗಳು ಹೇಗೆ ಬೇಜವಾಬ್ದಾರಿಯಾಗಿವೆ, ಹೇಗೆ ಅವರಿಂದ ಆರ್ಥಿಕಕ್ಕೆ ನಷ್ಟವಾಗುತ್ತದೆಂದು ಎಂದಿನಂತೆ ಸಂಪಾದಕೀಯಗಳನ್ನು ಬರೆಯುತ್ತವೆ ಎಂಬುದಂತೂ ನಿರೀಕ್ಷಿತ ಸಂಗತಿಯೇ. ಆದರೆ ಈ ಬಾರಿಯ ಹೊಸ ಸಂಗತಿಯೆಂದರೆ ಎಡಪಕ್ಷಗಳ ಮೇಲೆ ಧಾಳಿ ಹಾಗೂ ಇಂತಹ ಮುಷ್ಕರಗಳನ್ನು ನಿಲ್ಲಿಸಬೇಕೆಂಬ ಕರ್ಕಶ ಕೂಗು.

ಎಡಪಕ್ಷಗಳು ದೇಶವನ್ನು ಒತ್ತೆಯಾಳಾಗಿ ಮಾಡಿವೆಯಂತೆ! ಇದಕ್ಕಿಂತಲೂ ಕೆಟ್ಟ ಆರೋಪವೆಂದರೆ ಅವು ತಾವೇ ಬೆಂಬಲಿಸುವ ಸರಕಾರವನ್ನು ಬ್ಲಾಕ್‌ಮೇಲ್ ಮಾಡಲು ಪ್ರಯತ್ನಿಸಿ ರಾಜಕೀಯ ಅನೈತಿಕತೆ ತೋರುತ್ತಿವೆಯೆಂಬುದು. ಸಿಪಿಐ(ಎಂ) ಮತ್ತು ಎಡಪಕ್ಷಗಳ ಆದೇಶದ ಮೇಲೆ ಕೇಂದ್ರ ಕಾರ್ಮಿಕ ಸಂಘಗಳು ಮುಷ್ಕರ ನಡೆಸಿವೆ ಎಂದು ಹೆಚ್ಚಿನ ಸಂಪಾದಕೀಯಗಳು ಭಾವಿಸಿವೆ. ಸ್ವಲ್ಪ ಬಲಪಂಥೀಯವಾದ ಪತ್ರಿಕೆಗಳು ಪ್ರಧಾನಮಂತ್ರಿ ಮತ್ತು ಸರಕಾರ ದುರ್ಬಲವಾಗಿವೆ, ಮುಷ್ಕರವನ್ನು ದೃಢವಾಗಿ ಎದುರಿಸುವಲ್ಲಿ ವಿಫಲವಾಗಿವೆ ಎಂದು ಆಪಾದಿಸಿವೆ.

ಮುಷ್ಕರಗಳು ರಾಷ್ಟ್ರ -ವಿರೋಧಿ, ಜನವಿರೋಧಿ ಎಂಬ ಭಾವನೆ ಸೆಪ್ಟೆಂಬರ್ 29ರ ಮುಷ್ಕರದ ವಿರುದ್ಧ ಈ ಎಲ್ಲಾ ಅರಚಾಟಗಳಲ್ಲಿ ಕಾಣುವ ಸಾಮಾನ್ಯ ಸಂಗತಿ. ಸಿಪಿಐ(ಎಂ) ದೇಶದ ಮೇಲೆ ಮುಷ್ಕರವನ್ನು ಎಸೆದು "ರಾಜಕೀಯ ಅಶ್ಲೀಲತೆ" ತೋರಿದೆ ಎಂದು ಆಪಾದಿಸಲಾಗಿದೆ. ಇನ್ನೊಬ್ಬ ಟಿಪ್ಪಣಿಕಾರ ಇದು "ಅಸ್ತವ್ಯಸ್ತಗೊಳಿಸಿದ ಒಂದು ಮೂರ್ಖ ಕೆಲಸ" ಎಂದಿದ್ದಾರೆ. ಹಿಂದೂಸ್ತಾನ್ ಟೈಮ್ಸ್‌ನ ಸಂಪಾದಕೀಯ "ಎಡಪಕ್ಷಗಳು ಕಾರ್ಮಿಕರು ಮತ್ತು ಮ್ಯಾನೇಜರುಗಳು ಒಂದು ನಾಗರೀಕ ಸಹಜೀವನದ ವಾತಾವರಣದಲ್ಲಿ ಕೆಲಸ ಮಾಡಲು ಸಾಧ್ಯ ಎಂಬುದರ ಪರಿಜ್ಞಾನವಿಲ್ಲದೇ ಇದ್ದಾರೆ" ಎಂದಿದೆ. ಇದು ಕಳೆದ ವರ್ಷ 362 ಕಾರ್ಮಿಕರನ್ನು ಏಕಾಏಕಿ ವಜಾ ಮಾಡಿದ, ತನ್ನ ಪತ್ರಕರ್ತರು ರಾಜೀನಾಮೆ ಕೊಡುವಂತೆ, ಅಲ್ಪಕಾಲಿಕ ಕಾಂಟ್ರಾಕ್ಟ್‌ಗಳಿಗೆ ಸಹಿ ಹಾಕುವಂತೆ ಮಾಡುತ್ತಿರುವ ಒಂದು ಮ್ಯಾನೇಜ್‌ಮೆಂಟ್‌ನಿಂದ ಬರುತ್ತಿರುವ ಮಾತು!

ಒಬ್ಬ ಹಿರಿಯ ಪತ್ರಕರ್ತ ಇಂದರ್ ಮಲ್ಹೋತ್ರಾ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಬರೆಯುತ್ತಾ ಮುಷ್ಕರವನ್ನು ದೊಡ್ಡದಾಗಿ ಖಂಡಿಸುತ್ತಲೇ "ಖಾಸಗೀಕರಣ ಒಂದು ಪರಿಣಾಮಕಾರಿ ಆರ್ಥಿಕ ನೀತಿಯ ಒಂದು ಅಗತ್ಯ ಅಂಶ" ಎಂದು ಸಾರುತ್ತಾರೆ. ಅದೇ ಪತ್ರಿಕೆಯ ಸಂಪಾದಕೀಯ ಮುಷ್ಕರ 'ಎಡಪಕ್ಷಗಳ ಒಂದು ಹೊಲಸು ಬಲಪ್ರದರ್ಶನ' ಎನ್ನುತ್ತಾ "ಆರ್ಥಿಕ ಸುಧಾರಣೆಗಳ ಒಂದು ಅಗತ್ಯ ಭಾಗವಾದ ಖಾಸಗೀಕರಣ ಅಜೆಂಡಾದಿಂದ ಹೋಗಿಬಿಟ್ಟಿದೆ" ಎಂದು ಮರುಗಿದೆ. ಕೋಟಿಗಟ್ಟಲೆ ಕಾರ್ಮಿಕರು, ನೌಕರರು ಖಾಸಗೀಕರಣ ನೀತಿಯ ವಿರುದ್ಧ ಪ್ರತಿಭಟಿಸಿದರು ಎಂಬ ಸಂಗತಿಯಿಂದಲೇ ಇವರಲ್ಲಿ ಬಹಳ ಮಂದಿಗೆ ಮುಷ್ಕರದ ಬಗ್ಗೆ ಸಿಟ್ಟು ಬಂದಿದೆ. 4 ಕೋಟಿ ಜನ ಮುಷ್ಕರ ನಡೆಸಿದರೇಕೆ ಎಂಬ ಪ್ರಶ್ನೆಯನ್ನು ಯಾವುದೇ ದೊಡ್ಡ ಬಂಡವಾಳಿಗರ ಮಾಧ್ಯಮ ಕೇಳಲಿಲ್ಲ. ಎಡಪಕ್ಷಗಳು ಒಂದು ಸಾರ್ವತ್ರಿಕ ಮುಷ್ಕರ ನಡೆಸಬೇಕೆಂದು ಎಂದು ನಿರ್ಧರಿಸಿದರು, ಈ ನಾಲ್ಕು ಕೋಟಿಜನ ಮಾಡಿದರು!

ಕಾರ್ಮಿಕರು ಮುಷ್ಕರ ನಡೆಸಿದ್ದೇಕೆ?

ಮೊತ್ತಮೊದಲ ಬಾರಿಗೆ ವಿಮಾನ ನಿಲ್ದಾಣ ಪ್ರಾಧಿಕಾರದ ನೌಕರರು ದೇಶಾದ್ಯಂತ ಮುಷ್ಕರ ನಡೆಸಿದರು - ಮುಂಬೈ ಮತ್ತು ದಿಲ್ಲಿ ವಿಮಾನ ನಿಲ್ದಾಣಗಳನ್ನು ಖಾಸಗೀಕರಿಸಬೇಕು ಎಂಬ ಸರಕಾರದ ನಿರ್ಣಯವನ್ನು ಪ್ರತಿಭಟಿಸಿ ಅವರು ಮುಷ್ಕರ ನಡೆಸಿದರು. ಅವರು ಮುಷ್ಕರ ನಡೆಸಿದ್ದು ಇಂದರ್ ಮಲ್ಹೋತ್ರಾ ಭಾವಿಸುವ ಕಾರಣಕ್ಕೆ ಅಲ್ಲ, ತಾವು ಕೊಟ್ಟ ಆಧುನೀಕರಣದ ಯೋಜನೆಯನ್ನು ಸರಕಾರ ಪರಿಶೀಲಿಸಲು ನಿರಾಕರಿಸಿದೆ ಎಂಬ ಕಾರಣಕ್ಕೆ.

ಮಿಲಿಯಾಂತರ ರಾಜ್ಯ ಸರಕಾರಿ ನೌಕರರು,



ಎಡಪಕ್ಷಗಳು ಅವರ ಸಂಘಗಳ ಮೇಲೆ ಯಾವುದೇ ಪ್ರಭಾವ ಹೊಂದಿರದ ರಾಜ್ಯಗಳಲ್ಲೂ ಏಕೆ ಮುಷ್ಕರ ನಡೆಸಿದರೆಂದು ಈ ಸಂಪಾದಕೀಯಗಳು ಕೇಳುತ್ತಿಲ್ಲ. ಸುಪ್ರೀಂಕೋರ್ಟ್ ಅವರ ಮುಷ್ಕರದ ಹಕ್ಕನ್ನು ವಂಚಿಸಲು ಪ್ರಯತ್ನಿಸಿದ್ದರಿಂದಾಗಿ, ಅದನ್ನು ಅವರು ಬಿಡಲು ಸಿದ್ಧರಿಲ್ಲವಾದ್ದರಿಂದಾಗಿ ಅವರು ಮುಷ್ಕರ ನಡೆಸಿದರು.

ಕರ್ನಾಟಕ, ಆಂಧ್ರಪ್ರದೇಶದಂತಹ ರಾಜ್ಯಗಳಲ್ಲಿ ಕೆಲವು ವ್ಯಾಪಾರಸ್ಥರ ಸಂಘಗಳೂ ಮುಷ್ಕರವನ್ನು ಸೇರಿಕೊಂಡವು ಎಂಬುದನ್ನು ಮಾಧ್ಯಮಗಳಲ್ಲಿ ಯಾರೂ ಗಮನಿಸಲಿಲ್ಲ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡುವ ಸರಕಾರದ ಪ್ರಸ್ತಾಪದಿಂದ ಅವರು ಆತಂಕಿತರಾಗಿದ್ದಾರೆ.

ಆ ದಿನ ದೊಡ್ಡ ಸಂಖ್ಯೆಯಲ್ಲಿ ರೈತರು, ಕೃಷಿಕೂಲಿಕಾರರು ತಮ್ಮದೇ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಿದರು. ಏಕೆಂದರೆ ತಮ್ಮ ಬದುಕನ್ನು ಮುಂಬರುವ ಡಬ್ಲ್ಯುಟಿಒ ಮಾತುಕತೆಗಳಲ್ಲಿ ರೈತರ ಹಕ್ಕುಗಳನ್ನು ಮತ್ತಷ್ಟು ಮೊಟಕು ಮಾಡುತ್ತಾರೆ ಎಂಬ ಭೀತಿ ಅವರಿಗಿದೆ.

ಅಸಂಘಟಿತ ವಲಯದ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಸೇರಿಕೊಂಡರು. ಏಕೆಂದರೆ ಅವರು ಕೆಲಸ ಮಾಡುವ ಹೀನ ಪರಿಸ್ಥಿತಿಗಳಲ್ಲಿ ಒಂದು ಉತ್ತಮ ಸೌಲಭ್ಯ ಕೇಳಲು ತಮ್ಮ ಒಂದು ದಿನದ ಸಂಬಳವನ್ನು ಬಿಡಲು ಅವರು ಸ್ವಲ್ಪ ಉತ್ತಮ ಸಂಬಳ ಪಡೆಯುವವರಿಗಿಂತ ಹೆಚ್ಚು ಉತ್ಸುಕರಾಗಿದ್ದಾರೆ.

ವಾಸ್ತವ ಸಂಗತಿಯೆಂದರೆ, ಸೆಪ್ಟೆಂಬರ್ 29ರ ಮುಷ್ಕರ ಒಂದು ದೊಡ್ಡ ಜನವಿಭಾಗವನ್ನು ಸೆಳೆಯಿತು. ಇವರು ಮುಷ್ಕರಕ್ಕೆ ಕರೆ ನೀಡಿದ ಸಂಘಟಿತ ಕಾರ್ಮಿಕ ಸಂಘಗಳಿಗೆ ಸೇರಿದವರೂ ಅಲ್ಲ, ಎಡಪಕ್ಷಗಳ ಅನುಯಾಯಿಗಳೂ ಅಲ್ಲ.

ಉದಾರೀಕರಣಕ್ಕೆ ಸತತ ಪ್ರತಿರೋಧ

ಹೀಗೆ ಮುಷ್ಕರ ಇತ್ತೀಚಿನ ವರ್ಷಗಳಲ್ಲಿ ಎಡಪಕ್ಷಗಳ ಒಂದು ಅತಿದೊಡ್ಡ ರಾಜಕೀಯ ಗೋಸುಂಬೆತನದ ಕಸರತ್ತು ಎಂದು ಹರಿಹಾಯುವವರು ಈ ವಿಷಯದ ಸಮಸ್ತ ಅಂಶವನ್ನೇ ಗುರುತಿಸದೇ ಹೋಗುತ್ತಾರೆ. ಯುಪಿಎ ಸರಕಾರ ತನ್ನ ಮೊದಲ ಸಾರ್ವತ್ರಿಕ ಮುಷ್ಕರವನ್ನು ಎದುರಿಸಿರುವುದು 16 ತಿಂಗಳ ಅಧಿಕಾರದ ನಂತರ. ಈ ಸರಕಾರ ಹಿಂದಿನ ಬಿಜೆಪಿ ನೇತೃತ್ವದ ಸರಕಾರದ ದುಷ್ಟ, ಕಾರ್ಮಿಕ ವಿರೋಧಿ ನಿಲುವುಗಳನ್ನು ಬಿಟ್ಟುಬಿಡುವ ನೀತಿಗಳನ್ನು ಜಾರಿಗೆ ತರುತ್ತದೆಯೇ ಎಂದು ಕಾರ್ಮಿಕ ಸಂಘಗಳು ಮತ್ತು ಕಾರ್ಮಿಕ ಆಂದೋಲನ ಒಂದು ವರ್ಷ ಕಾದಿದ್ದವು. ಅಲ್ಲೊಂದು ಇಲ್ಲೊಂದು ಕ್ರಮ ಕೈಗೊಂಡರೂ, ಒಟ್ಟಾರೆಯಾಗಿ ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳು ಮುಂದುವರೆಯುತ್ತಲೇ ಇವೆ. **ಕಂಪನಿಗಳ ಲಾಭಗಳು ತ್ವರಿತವಾಗಿ ಏರುತ್ತಿರುವಾಗ ಕಾರ್ಮಿಕವರ್ಗದ ಹಕ್ಕುಗಳನ್ನು ಸೌಲಭ್ಯಗಳನ್ನು ಕುಗ್ಗಿಸಲಾಗುತ್ತಿದೆ.**

ಒಟ್ಟಾರೆಯಾಗಿ ಕಳೆದ ಒಂದೂವರೆ ದಶಕದಲ್ಲಿ ಉದಾರೀಕರಣ- ಖಾಸಗೀಕರಣದ ಪ್ರಯತ್ನಕ್ಕೆ ಕಾರ್ಮಿಕ ವರ್ಗದಿಂದ ಒಂದೇ ಸಮನೆ ಪ್ರತಿರೋಧ ವ್ಯಕ್ತಗೊಳ್ಳುತ್ತಾ ಬಂದಿದೆ. 1992ರಿಂದ 2005ರ ನಡುವಿನ 13 ವರ್ಷಗಳಲ್ಲಿ ದೇಶದಲ್ಲಿ ಹತ್ತು ಸಾರ್ವತ್ರಿಕ ಮುಷ್ಕರಗಳು ನಡೆದಿವೆ. ಅಲ್ಲದೆ ಪ್ರಮುಖ ಉದ್ದಿಮೆಗಳಲ್ಲಿ, ವಲಯಗಳಲ್ಲಿಯೂ ಮುಷ್ಕರಗಳು ನಡೆದಿವೆ. ಈ ಎಡೆಬಿಡದ ಪ್ರತಿರೋಧದಿಂದಾಗಿಯೇ, ಬೇಕಾಬಿಟ್ಟಿ ಖಾಸಗೀಕರಣದ, ನವ ಉದಾರವಾದಿ ಸುಧಾರಣೆಗಳ ಹೇರಿಕೆಯ ಪ್ರಯತ್ನಗಳನ್ನು ಸ್ವಲ್ಪ ಮಟ್ಟಿಗೆ ತಡೆಯಲಾಗಿದೆ. ಆದರೆ ಉದಾರೀಕರಣ ಭಾರತದ ದೊಡ್ಡ ಬಂಡವಾಳಿಗರು ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಕಾರ್ಮಿಕ ಸಂಘಗಳ ಹಕ್ಕುಗಳನ್ನು ಮೊಟಕು ಮಾಡಲು, ಕಾರ್ಮಿಕ ವರ್ಗವನ್ನು 'ಶಿಸ್ತಿಗೊಳಪಡಿಸಲು' ಆಕ್ರಾಮಕ ರೀತಿಯಲ್ಲಿ ಮುಂದೊತ್ತುವಂತಹ ಒಂದು ವಾತಾವರಣವನ್ನು ಸೃಷ್ಟಿಸಿದೆ. ಪ್ರಭುತ್ವ ಶ್ರಮಿಕರ ಕಲ್ಯಾಣವನ್ನು ರಕ್ಷಿಸುವ ತನ್ನ ಜವಾಬ್ದಾರಿಯನ್ನು ಬಿಟ್ಟುಕೊಟ್ಟಾಗ ಇದು ಅನಿವಾರ್ಯ. ಈ ಹಿಂದೆ ಇದೇ ಪ್ರಭುತ್ವ ಅದು ತನ್ನ ಜವಾಬ್ದಾರಿಯೆಂದು ಭಾವಿಸಿತ್ತು.

ಈಗಿನ ಉದಾರೀಕರಣದ ಪರಿಸರದಲ್ಲಿ ಸರಕಾರ ಮಾತ್ರವೇ ನವ ಉದಾರವಾದಿ ಸುಧಾರಣೆಗಳನ್ನು ಒಪ್ಪಿಕೊಂಡಿಲ್ಲ. ನ್ಯಾಯಾಂಗ ಮತ್ತು ಪ್ರಭುತ್ವದ ಇತರ ಸಂಸ್ಥೆಗಳೂ ಅದನ್ನೇ ಮಾಡುತ್ತಿವೆ. ಜನತೆಯ ಪ್ರತಿರೋಧದ ಭಯದಿಂದ ಕೆಲವೊಮ್ಮೆ ಸರಕಾರ ಮಾಡಲು ಹಿಂಜರಿಯುತ್ತಿರುವದನ್ನು ಮೇಲಿನ ಹಂತದ ನ್ಯಾಯಾಂಗ ಮನಃಪೂರ್ವಕವಾಗಿ ಕೈಗೆತ್ತಿಕೊಳ್ಳುತ್ತಿದೆ. ಬಂದ್‌ಗಳನ್ನು, ಹರತಾಳಗಳನ್ನು ನಿಷೇಧಿಸುವುದು, ಮುಷ್ಕರಗಳು, ಪ್ರತಿಭಟನಾ ಮತಪ್ರದರ್ಶನಗಳು ಮತ್ತು ರ್‍ಯಾಲಿಗಳ ಮೇಲೆ ಮಿತಿ ಹೇರುವುದು ಇವೆಲ್ಲಾ ಈಗ ನ್ಯಾಯಾಂಗ ಮಧ್ಯಪ್ರವೇಶದ ಸಾಮಾನ್ಯ ಸ್ವರೂಪಗಳಾಗುತ್ತಿವೆ. ಮಾಧ್ಯಮಗಳು ಬಿಂಬಿಸುತ್ತಿರುವುದು ಈ ಅಸಹನೆಯನ್ನೇ, ಕಾರ್ಮಿಕವರ್ಗದ ಕಾರ್ಯಾಚರಣೆಗಳು ಹಾಗೂ ಸಾಮೂಹಿಕ ಪ್ರತಿಭಟನೆಗಳ ಬಗ್ಗೆ ಈ ಹುಟ್ಟಾಭಯವನ್ನೇ. ಅವು, ಮುದ್ರಣ ಮಾಧ್ಯಮವೇ ಆಗಲಿ, ಟಿವಿ ವಾಹಿನಿಗಳೇ ಆಗಲಿ, ತಮ್ಮ ಒಡೆಯರಾದ ದೊಡ್ಡ ಬಂಡವಾಳಶಾಹಿಗಳ, ದೊಡ್ಡ ಕಂಪನಿಗಳ ವರ್ಗ ದೃಷ್ಟಿಕೋನವನ್ನೇ ಪ್ರತಿಫಲಿಸುತ್ತವೆ.

ಸಾರ್ವತ್ರಿಕ ವಿದ್ಯಮಾನ

ಸಾರ್ವತ್ರಿಕ ಮುಷ್ಕರ ಒಂದು ಎಡಪಂಥೀಯ ಬುದ್ಧಿಭ್ರಮಣೆ, ಯುಪಿಎ ಸರಕಾರದೊಂದಿಗೆ ರಾಜಕೀಯ ಜಗಳದ ಫಲಿತಾಂಶ ಎಂದು ಚಿತ್ರಿಸುವ ಮಾಧ್ಯಮಗಳು ವಿಶ್ವಾದ್ಯಂತ ದೃಷ್ಟಿ ಹಾಯಿಸಿದರೆ ತದ್ವಿರುದ್ಧವಾದುದನ್ನು ಕಾಣಬಹುದು. ಸಾರ್ವತ್ರಿಕ ಮುಷ್ಕರಗಳು ಈಗ ಒಂದು ಸಾರ್ವತ್ರಿಕ ವಿದ್ಯಮಾನವಾಗುತ್ತಿವೆ ಎಂಬುದನ್ನು ಕಾಣಬಹುದು. ಕಳೆದ ಹನ್ನೆರಡು ತಿಂಗಳಲ್ಲಿ ಹಲವು ಪ್ರಮುಖ ಸಾರ್ವತ್ರಿಕ ಮುಷ್ಕರಗಳು ನಡೆದಿವೆ. ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು.

- ಇಟಲಿಯಲ್ಲಿ ಒಂದು ಸಾರ್ವತ್ರಿಕ ಮುಷ್ಕರ ನವೆಂಬರ್ 30, 2004 ರಂದು ಇಡೀ ದೇಶವನ್ನು ಅಸ್ತವ್ಯಸ್ತಗೊಳಿಸಿತು. ಬರ್ಲುಸ್ಕೋನಿ ಸರಕಾರದ ಆರ್ಥಿಕ ಮತ್ತು ಹಣಕಾಸು ನೀತಿಗಳ ವಿರುದ್ಧ ಮೂರು ಕಾರ್ಮಿಕ ಒಕ್ಕೂಟಗಳು ಈ ಮುಷ್ಕರಕ್ಕೆ ಕರೆ ನೀಡಿದವು.
- ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿನ ಪ್ರಮುಖ ಕಾರ್ಮಿಕ ಒಕ್ಕೂಟ ಕೊಸಾಟು (kosatu) ಕರೆಯ ಮೇರೆಗೆ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಜೂನ್ 27,

ಪುಟ 9 ಕ್ಕೆ

ೂಕಂಪ: ಭಾರತ ಮತ್ತು ಪಾಕಿಸ್ತಾನ ಜತೆಗೂಡಿ ಈ ದುರಂತವನ್ನು ಎದುರಿಸಬೇಕಾಗಿದೆ

ಶ ದೇಶಗಳ ನಡುವಣ ಗಡಿಗಳು ಮಾನವ ನಿರ್ಮಿತ. ಹರಿಯುವ ಗೆ-ಹಾರುವ ಹಕ್ಕಿಗೆ ಯಾವ ಗಡಿ? ಯಾವ ನಿಯಂತ್ರಣ ರೇಖೆ? ಪ್ರಕೃತಿ ೋಪಕ್ಕೂ ಅಷ್ಟೆ. ಭಾರತ-ಪಾಕಿಸ್ತಾನ ಎನ್ನದೆ ದಕ್ಷಿಣ ಏಶ್ಯಾದಲ್ಲಿ ಸಂಭವಿಸಿರುವ ಕರ ಭೂಕಂಪದಲ್ಲಿ ಮನೆ ಮಾರು ಕಳೆದುಕೊಂಡು ಪರಿತಪಿಸುತ್ತಿರುವವರು ್ಷಾಂತರ ಮಂದಿ. ಸತ್ತವರು ಸಹಸ್ರಾರು ಮಂದಿ. ಭಾರತ-ಪಾಕಿಸ್ತಾನ ಎರಡೂ ತ್ರಸ್ತ ದೇಶಗಳೂ ಟಿಯಾಗಿ ಈ ಗಂಭೀರ ್ನವೇಶವನ್ನು ುರಿಸಬೇಕಿದೆ.



ಭಾರತದ ಉಪಖಂಡ ತ್ತೊಮ್ಮೆ ಒಂದು ಬೃಹತ್ ೂಪದ ನೈಸರ್ಗಿಕ ವಿಕೋಪಕ್ಕೆ ಗಾಗಿದೆ. ಹಿಂದುಕುಶ್ ರ್ವತಶ್ರೇಣಿಯಲ್ಲಿನ ಒಂದು ದೊಡ್ಡ ಮಾಣದ ಭೂಕಂಪ (ರಿಕ್ಟರ್ ಪನದಲ್ಲಿ 7.6) ವಿನಾಶಲೀಲೆ ೀರಿದೆ. ಈ ಭೂಕಂಪದಲ್ಲಿ 80 ವಿರಕ್ಕಿಂತಲೂ ಹೆಚ್ಚು ಮಂದಿ ಬಲಿಗೀಡಾಗಿದ್ದಾರೆಂದು ವರದಿಯಾಗಿದೆ. ್ಲೂ ಹತ್ತಾರು ಲಕ್ಷ ಜನ ಮನೆ, ಮಠ ದುಕೊಂಡು ಅತ್ಯಂತ ಅಮಾನವೀಯ ಸ್ಥಿತಿಗಳಲ್ಲಿ ಬದುಕುತ್ತಿದ್ದಾರೆ. ಫ್ಘಾನಿಸ್ತಾನ, ಪಾಕಿಸ್ತಾನ, ಪಾಕಿಸ್ತಾನ ಮಿತ ಕಾಶ್ಮೀರ ಹಾಗೂ ನಮ್ಮ ದೇಶದ ್ಮೀರ ಈ ವಿಕೋಪಕ್ಕೆ ಒಳಗಾಗಿವೆ.

ಅತ್ಯಂತ ಹೆಚ್ಚು ವಿನಾಶ ಕಂಡುಬಂದದ್ದು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ. ಅಲ್ಲಿಯ ಮುಖ್ಯನಗರ ಮುಜಫರಾಬಾದ್‌ನಲ್ಲಿ 70 ಶೇಕಡಾ ಕಟ್ಟಡಗಳು ನೆಲಸಮವಾಗಿವೆಯೆಂದು ವರದಿಯಾಗಿದೆ. ಈಗ ಭಾರತ ಮತ್ತು ಪಾಕಿಸ್ತಾನದ ನಡುವೆ ಸ್ನೇಹ ಸಂಬಂಧಗಳ ಕುರುಹಾಗಿರುವ, ಭಾರತವನ್ನು ಪಾಕಿಸ್ತಾನ ಆಕ್ರಮಿತ ಕಾಶ್ಮೀರದೊಡನೆ ಸಂಪರ್ಕಿಸುವ ಅಮನ್‌ಸೇತು (ಶಾಂತಿ ಸೇತುವೆ) ಧ್ವಂಸವಾಗಿದೆ.

ಈ ಹೃದಯವಿದ್ರಾವಕ ವಿನಾಶಲೀಲೆಯ ಜೊತೆಗೆ ದುರ್ಗಮ ಪರ್ವತಪ್ರದೇಶ ಹಾಗೂ ಭೂಕಂಪದ ನಂತರದ ಕಂಪನಗಳು ಪರಿಹಾರ ಕಾರ್ಯವನ್ನು ಕಠಿಣಗೊಳಿಸಿವೆ. ಸಾಮಾನ್ಯ ಪರಿಸ್ಥಿತಿಗಳಲ್ಲಿಯೂ ಈ ಪ್ರದೇಶದಲ್ಲಿ ಸಾರಿಗೆ, ಸಂಪರ್ಕ ಕಷ್ಟವೇ. ಲಕ್ಷಾಂತರ ಜನರಿಗೆ ಈಗ ನೆರವು ಒದಗಿಸಲು ಸಾಧ್ಯವಾಗಿರುವುದು ವಿಮಾನಗಳ ಮೂಲಕವೇ. ಚಳಿಗಾಲ ಆರಂಭವಾಗುತ್ತಿರುವುದರಿಂದ ಈ ಕಾರ್ಯಾಚರಣೆಯೂ ಕಷ್ಟವಾಗಿದೆ.

ಇಂತಹ ಸಂದರ್ಭದಲ್ಲಿ ವ್ಯಾಪಕ ಅಂತರ್‍ರಾಷ್ಟ್ರೀಯ ನೆರವು ಬರುತ್ತಿರುವುದು ಒಂದು ಸಂತಸದ ಸಂಗತಿ. ಭಾರತ ಪಾಕಿಸ್ತಾನ ಸಂಬಂಧಗಳಲ್ಲಿನ ಸೆಳೆತಗಳನ್ನು ಬದಿಗೊತ್ತಿ ಎರಡೂ ಕಡೆಯಿಂದ ಜನಸಾಮಾನ್ಯರು ಈ ದುರಂತವನ್ನು ಎದುರಿಸುವಲ್ಲಿ ಮಾನವ ಸೌಹಾರ್ದವನ್ನು ಮೆರೆಯುತ್ತಿದ್ದಾರೆ. ಭಾರತ ತನ್ನ ಗಡಿಯೊಳಗೆ ಪರಿಹಾರ ಕ್ರಮ ಕೈಗೊಳ್ಳುವ ಜೊತೆಯಲ್ಲೇ ಪಾಕಿಸ್ತಾನಕ್ಕೆ ತಕ್ಷಣ ನೆರವು ಪೂರೈಕೆ ಮಾಡಿದೆ. ಆದರೂ ಇನ್ನೂ ದೊಡ್ಡ ಪ್ರಮಾಣದಲ್ಲಿ ನೆರವು ಭಾರತೀಯ ಜನತೆಯ ಎಲ್ಲಾ ವಿಭಾಗಗಳಿಂದ ಬರಬೇಕಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಪ್ರದೇಶದಲ್ಲಿ ಸಂಪರ್ಕಗಳನ್ನು ಸರಿಪಡಿಸಲು, ಆ ಮೂಲಕ ಮಾನವ ಸಂಕಟವನ್ನು ತುರ್ತಾಗಿ ಎದುರಿಸಲು ಭಾರತ ಮತ್ತು ಪಾಕಿಸ್ತಾನಗಳ ನಡುವೆ ಗರಿಷ್ಟ ಸಹಕಾರ ಅಗತ್ಯ. ಅಮನ್ ಸೇತುವಂತೂ ಮತ್ತೆ ನಿರ್ಮಾಣಗೊಳ್ಳುತ್ತಿದೆ. ಜತೆಗೆ ಇನ್ನಷ್ಟು ಕೆಲಸಗಳು ಆಗಬೇಕಾಗಿದೆ. ಪರಿಹಾರ ಕಾರ್ಯಾಚರಣೆಗಳಲ್ಲಿ ಭಾರತ-ಪಾಕಿಸ್ತಾನ ಸಮನ್ವಯ ನಮ್ಮೆರಡು ದೇಶಗಳ ನಡುವೆ ವಿಶ್ವಾಸ ಕುದುರಿಸಲು ಕ್ರಮಗಳನ್ನು ಇನ್ನಷ್ಟು ಬಲಗೊಳಿಸುತ್ತದೆ.

ಸುನಾಮಿ, ನಂತರ ಮುಂಬೈ ಪ್ರವಾಹ ಹಾಗೂ ಈಗ ಭೂಕಂಪ ಇಂತಹ ನೈಸರ್ಗಿಕ ವಿಕೋಪಗಳನ್ನು ಎದುರಿಸಲು ಸರಕಾರ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವನ್ನು ಮತ್ತೊಮ್ಮೆ ಮನಗಾಣಿಸಿದೆ. ಇತ್ತೀಚೆಗೆ ರಾಷ್ಟ್ರೀಯ ಆಪತ್ತು ನಿರ್ವಹಣೆ ಪ್ರಾಧಿಕಾರವನ್ನು ರಚಿಸಲಾಗಿದೆ. ಇಂತಹ ಆಪತ್ತುಗಳನ್ನು ಎದುರಿಸಲು ಯೋಜನೆ ಗಳನ್ನು ರೂಪಿಸಿ, ಸೂಕ್ತ ಸಂಪನ್ಮೂಲಗಳ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. ಹಿಮಾಲಯ ಪರ್ವತಶ್ರೇಣಿಯಲ್ಲಿ ಭೂಚಲನೆ ಸಕ್ರಿಯವಾಗಿದ್ದು ಆ ಪ್ರದೇಶದಲ್ಲಿ ಮತ್ತೆ ಮತ್ತೆ ಭೂಕಂಪಗಳಾಗುವ ಸಂಭವವಿರುವುದರಿಂದ ಇದು ಅಗತ್ಯ. ○

ಭಾರತ - ಪಾಕಿಸ್ತಾನ ಮಾತುಕತೆಗಳಲ್ಲಿ ಸ್ವಲ್ಪ ಪ್ರಗತಿ

ಾರತ ಮತ್ತು ಪಾಕಿಸ್ತಾನಗಳ ಡುವೆ ಕೇವಲ ರಾಜಕೀಯ-ಆರ್ಥಿಕ ಂಬಂಧವ್ಯ ಮಾತ್ರವಲ್ಲ, ಎರಡೂ ೇಶಗಳ ಜನರ ನಡುವೆ ಪರಸ್ಪರ ಾಂಸ್ಕೃತಿಕ-ಶೈಕ್ಷಣಿಕ ಸಂಬಂಧಗಳು ಲಗೊಳ್ಳಬೇಕಾದದ್ದು, ಎರಡೂ ೇಶಗಳ ಹಿತಾಸಕ್ತಿಗಳಿಗೆ ಗತ್ಯವಾದ ಅಂಶ. ಎರಡೂ ೇಶಗಳ ನಡುವಿನ ಗಡಿ ಭಾಗಗಳ ಲಿಟರೀಕರಣ ಮತ್ತು ಒತ್ತಡದ ಂಸ್ಥಿತಿ ನಿವಾರಿಸಿ ಪರಸ್ಪರ ಶ್ವಾಸ-ನಂಬಿಕೆಯ ವಾತಾವರಣ ೃಷ್ಟಿಸುವುದು ಇಂದಿನ ಐತಿಹಾಸಿಕ ವಶ್ಯಕವಾಗಿದೆ. ಇತ್ತೀಚೆಗೆ ಎರಡೂ ೇಶಗಳ ವಿದೇಶಾಂಗ ಸಚಿವರ ಂಯೋಜಿತ ಸಂವಾದದ ಎರಡನೇ ುತ್ತಿನ ಪರಾಮರ್ಶೆ ಸಭೆ' ಈ ಟ್ಟಿನಲ್ಲಿ ಸ್ವಲ್ಪಮಟ್ಟಿನ ಪ್ರಗತಿಯನ್ನು ಖಲಿಸಿದೆ.

ಭಾರತ ಮತ್ತು ಪಾಕಿಸ್ತಾನದ ವಿದೇಶಾಂಗ ತ್ರಿಗಳು ಎರಡು ದೇಶಗಳ ನಡುವಿನ ಯೋಜಿತ ಸಂವಾದ"ದ ಎರಡನೇ ಸುತ್ತಿನ ಮರ್ಶೆ ನಡೆಸಿದ ಎರಡು ದಿನಗಳ ಸಭೆ ಾಬಾದಿನಲ್ಲಿ ನಡೆಯಿತು. ಈ ಸಂವಾದದ ಾದ ವಿಷಯಗಳ ಮೇಲೆ ಮಾತುಕತೆಗಳನ್ನು ದುವರೆಸುವ ನಿರ್ಧಾರವನ್ನು ಎರಡೂ ವರು ಮಾಡಿದ್ದಾರೆ ಎಂಬುದನ್ನು ಪರಾಮರ್ಶೆ ನಂತರ ಹೊರಡಿಸಿದ ಜಂಟಿ ಹೇಳಿಕೆ ಸುತ್ತದೆ. ರಿಗೆ ಸಂಪರ್ಕ ಬೆಳೆಸುವಲ್ಲಿ, ಬಂಧಿಗಳ ುದು ಹಾಗೂ ಜನಗಳ ನಡುವಿನ ಸಂಪರ್ಕ ುದಲ್ಲಿ ಪ್ರಗತಿ ದಾಖಲಾಗಿದೆ. ೋರ್-ಅಮೃತ್‌ಸರ್ ಬಸ್ ಸಂಚಾರ ನವೆಂಬರ್ 2005ರಿಂದ ಆರಂಭವಾಗಲಿದೆ. ನಾನಕಾನಾ ಸಾಹಿಬ್ - ಅಮೃತ್‌ಸರ್ ಬಸ್ ಸಂಚಾರ ಆರಂಭಿಸಲು ಪರಿಣತರ ನಡುವೆ ಮಾತುಕತೆಗಳು ನಡೆಯಲಿವೆ. ಶ್ರೀನಗರ, ಮುಜಫರಾಬಾದ್ ಬಸ್ ಸಂಚಾರ ಜಿನಾ ಅಂತೆ ಆ ಮಾರ್ಗದಲ್ಲಿ ಟ್ರಕ್ ಸಾರಿಗೆ ಆರಂಭಿಸಲು ಮಾತುಕತೆಗಳು ನಡೆಯಲಿವೆ. ಸೆಪ್ಟೆಂಬರ್ 12 ರಂದು ಕೈದಿಗಳ ವಿನಿಮಯದ ನಂತರ ಇನ್ನು ಮುಂದೆ ಎರಡೂ ಕಡೆಯಿಂದ ಜನಗಳನ್ನು ಬಂಧಿಸಿದಾಗ ಅದರ ಅಧಿಸೂಚನೆ ಹಾಗೂ ಮೂರು ತಿಂಗಳೊಳಗೆ ಎಲ್ಲಾ ವ್ಯಕ್ತಿಗಳಿಗೆ ರಾಜತಾಂತ್ರಿಕ ಸಂಪರ್ಕ ಒದಗಿಸುವ ಬಗ್ಗೆ ಹಾಗೂ ಅವರ ಶಿಕ್ಷೆಯ ಅವಧಿ ಮುಗಿದಾಗ ಅವರ ಬಿಡುಗಡೆ ಮಾಡಬೇಕು ಎಂದು ನಿರ್ಧರಿಸಲಾಯಿತು.

ಪಾಕಿಸ್ತಾನ ಮತ್ತು ಭಾರತದ ಜಂಟಿ ಆಯೋಗವನ್ನು ಪುನರುಜ್ಜೀವನ ಗೊಳಿಸಲಾಗಿದ್ದು, ಇದು ಸಂಬಂಧಗಳನ್ನು ಬೆಳೆಸಲು ನೆರವಾಗುವ ಇನ್ನೊಂದು ಹೆಜ್ಜೆ. 16 ವರ್ಷಗಳ ನಂತರ ಈ ಆಯೋಗದ ಸಭೆ ನಡೆದರೆ. 'ಸಂಯೋಜಿತ ಸಂವಾದ'ದಲ್ಲಿಲ್ಲದ ಆರ್ಥಿಕ ಸಂಬಂಧಗಳು, ಪ್ರವಾಸೋದ್ಯಮ ಹಾಗೂ ಇತರ ವಿಷಯಗಳ ಬಗ್ಗೆ ಈ ಆಯೋಗ ಚರ್ಚಿಸುತ್ತದೆ.

ಈ ಸಭೆ ಸಿಯಾಚಿನ್ ಮತ್ತು ಸರ್‌ಕ್ರೀಕ್‌ನ ಮಿಲಿಟರೀರಣವನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಗಳನ್ನು ಎತ್ತಿಕೊಂಡಿತು ಎಂಬುದು ಗಮನಾರ್ಹ. ಸಾಗರ ಸರಹದ್ದಿನಲ್ಲಿ ಮಿಲಿಟರೀಕರಣವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲು ಜಂಟಿ ಸರ್ವೆ ನಡೆಸಬೇಕೆಂದು ನಿರ್ಧಾರವಾಯಿತು. ಇದೊಂದು ಮುಂದಿಟ್ಟ ಹೆಜ್ಜೆ. ಈಗಿನ ಸಂದರ್ಭದಲ್ಲಿ ಬಹಳ ಮುಖ್ಯವಾದದ್ದೆಂದರೆ ಸಿಯಾಚಿನ್‌ನಿಂದ ಮಿಲಿಟರಿ ಪಡೆಗಳನ್ನು ಹಿಂತೆಗೆದುಕೊಳ್ಳುವುದು. ಮುಂದಿನ ಸುತ್ತಿನ 'ಸಂಯೋಜಿತ ಸಂವಾದ' ಜನವರಿ 2006ರಲ್ಲಿ ನಡೆಯುವ ಮೊದಲು ಈ ಬಗ್ಗೆ ಒಂದು ಸಮಾನ ತಿಳುವಳಿಕೆಗೆ ಬರಲು ಚರ್ಚೆಗಳನ್ನು ಮುಂದುವರೆಸಬೇಕು ಎಂದು ನಿರ್ಧರಿಸಲಾಯಿತು. ಸದ್ಯಕ್ಕೆ ಈ ಬಗ್ಗೆ ಬಹಳ ಭಿನ್ನಾಭಿಪ್ರಾಯಗಳಿವೆಯಾದ್ದರಿಂದ ಹೆಚ್ಚಿನ ಪ್ರಗತಿಯೇನೂ ಆಗಿಲ್ಲ. ಆದರೆ ಪರಸ್ಪರ ವಿಶ್ವಾಸ ಕುದುರಿಸುವ ಕ್ರಮಗಳಲ್ಲಿ ಇದು ಒಂದು ನಿರ್ಣಾಯಕ ಪ್ರಶ್ನೆಯಾದ್ದರಿಂದ ಭಾರತ ಸರಕಾರ ಇದನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕಾಗುತ್ತದೆ. ಈ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು ಎರಡೂ ಕಡೆಯಿಂದ ಪಡೆಗಳ ವಾಪಸಾತಿ ಪರಸ್ಪರ ವಿಶ್ವಾಸ, ನಂಬಿಕೆ ಸ್ಥಾಪನೆಯಾಗಿದೆ ಎಂಬುದರ ಸಂಕೇತವಾಗುತ್ತದೆ.



ಜಮ್ಮು-ಕಾಶ್ಮೀರ ಮಾತುಕತೆ

ಅಧ್ಯಕ್ಷ ಮುಷರ್ರಫ್ ಮತ್ತು ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಎರಡೂ ಕಡೆಗಳಿಂದ ಕೊಡು-ಕೊಳ್ಳುವ ಮನೋಭಾವ ಇರಬೇಕು ಎಂದಿದ್ದಾರೆ. ಇದು ಜಮ್ಮು-ಕಾಶ್ಮೀರ ಕುರಿತ ಮುಂಬರುವ ಚರ್ಚೆಗಳಿಗೆ ಚೌಕಟ್ಟಾಗಬೇಕು. ಇದಕ್ಕೆ ಸಂಬಂಧಪಟ್ಟಂತೆ ಯುಪಿಎ ಸರಕಾರ ಜಮ್ಮು ಮತ್ತು ಕಾಶ್ಮೀರಕ್ಕೊಳಗಾಗುವ ಎಲ್ಲಾ ರಾಜಕೀಯ ಪಕ್ಷಗಳು, ಗುಂಪುಗಳೊಂದಿಗೆ ಸಂವಾದ ನಡೆಸಬೇಕು. ಹುರಿಯತ್‌ನೊಡನೆ ಮೊದಲ ಸುತ್ತಿನ ಮಾತುಕತೆಗಳೊಂದಿಗೆ ಈ ಪ್ರಯತ್ನ ಆರಂಭವಾಗಿದೆ.ಇದನ್ನು ವಿಸ್ತಾರಗೊಳಿಸಬೇಕು. ಇತರ ಪಕ್ಷಗಳನ್ನು ಹಾಗೂ ಗುಂಪುಗಳನ್ನು ಮುಖ್ಯವಾಗಿ ಜಮ್ಮು-ಕಾಶ್ಮೀರ ವಿಧಾನಸಭೆಯಲ್ಲಿ ಪ್ರಾತಿನಿಧ್ಯ ಹೊಂದಿರುವ ಪಕ್ಷಗಳನ್ನು ಒಳಗೊಳ್ಳಬೇಕು. ಗಡಿಗಳ ಪುನರ್ನಿವಚನೆ ಸ್ವೀಕಾರಾರ್ಹವಲ್ಲ ಎಂಬ ಭಾರತದ ನಿಲುವನ್ನು ಒಪ್ಪಿಕೊಳ್ಳುವ ಹಾಗೂ ಪಾಕಿಸ್ತಾನ ಜನಮತಗಣನೆಯ ಬೇಡಿಕೆಗೆ ಅಂಟಿಕೊಂಡಿರುವುದಿಲ್ಲ ಎಂಬ ಅಧ್ಯಕ್ಷ ಮುಷರ್ರಫ್‌ರವರ ಹೇಳಿಕೆಯನ್ನು ಗಮನಕ್ಕೆ ತೆಗೆದುಕೊಂಡು ಮಾತುಕತೆಗಳಿಗೆ ರಾಜಕೀಯ ಚೌಕಟ್ಟು ಮೂಡಿಬಂದಿದೆ. ಪಾಕಿಸ್ತಾನ ಸರ್ಕಾರ ನಿಯಂತ್ರಣ ರೇಖೆಯನ್ನು ಸಶಸ್ತ್ರ ಉಗ್ರಗಾಮಿಗಳು ದಾಟಿ ಬರದಂತೆ ಹಾಗೂ ಗಡಿಯಾಚೆ-ಈಚೆ ಅವರ ನೆಲೆಗಳು ಇರದಂತೆ ತಡೆಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡು ಈ ಪ್ರಕ್ರಿಯೆಯಲ್ಲಿ ನೆರವಾಗಲು ಸಾಧ್ಯ.

ಇಬ್ಬರೂ ವಿದೇಶಾಂಗ ಮಂತ್ರಿಗಳು ಇರಾನ್-ಪಾಕಿಸ್ತಾನ-ಭಾರತ ಅನಿಲ ಪೈಪ್‌ಲೈನ್ ಯೋಜನೆಯನ್ನು ಪುನರುಚ್ಚರಿಸಿದ್ದಾರೆ. ಇದು ಸ್ವಾಗತಾರ್ಹ. ಆದರೆ ಇರಾನ್‌ಗೆ ಸಂಬಂಧಪಟ್ಟಂತೆ ಭಾರತ ಸರ್ಕಾರದ ಇತ್ತೀಚಿನ ಕ್ರಮಗಳು ಈ ಯೋಜನೆಯನ್ನು ಪ್ರಾಮಾಣಿಕತೆ ಯಿಂದ ಅನುಸರಿಸಲಾಗುವುದೇ ಎಂಬ ಬಗ್ಗೆ ಸಂದೇಹವನ್ನೆಬ್ಬಿಸಿವೆ. ಈ ಯೋಜನೆ ನಮ್ಮೆರಡೂ ದೇಶಗಳ ಹಿತಾಸಕ್ತಿಗಳನ್ನು ಈಡೇರಿಸುವಂತದ್ದು.



ವಿಜಯದತ್ತ ಮಂಡ್ಯ ಗುಡಿಸಲು ವಾಸಿಗಳ ಬೃಹತ್ ಚಳುವಳಿ

ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲೇ ಸ್ಲಂ ಜನರ ಠಿಕಾಣಿ, ಪ್ರತಿಭಟನಾ ಸ್ಥಳದಲ್ಲೇ ಅಡುಗೆ, ಅಲ್ಲೇ ಸ್ನಾನ, ರಸ್ತೆಯಲ್ಲೇ ಊಟ, ಡಿ.ಸಿ. ಕಚೇರಿಗೆ ಬೀಗ, ಕಚೇರಿ ಕೆಲಸಕ್ಕೆ ತಡೆ.

ಪ್ರತಿಭಟನಾ ನಿರತರ ಪೆಂಡಾಲ್ ಕಿತ್ತ ಪೊಲೀಸರು, ಜನರಿಂದ ಪ್ರತಿರೋಧ. ಜಿಲ್ಲಾಧಿಕಾರಿ ಸ್ಥಳಕ್ಕೆ... ಪೋಲೀಸರ ವರ್ತನೆಗೆ ಬಹಿರಂಗ ಕ್ಷಮೆ ಯಾಚನೆ. ಮೂರು ದಿನಗಳಲ್ಲಿ ಮೂಲಭೂತ ಸೌಲಭ್ಯ ಮತ್ತು ಹಕ್ಕುಪತ್ರ ನೀಡುವ ಘೋಷಣೆ. ಪ್ರತಿಭಟನೆ ಹಿಂಪಡೆಯಲು ಮನ ಒಲಿಕೆಗೆ ವಿಫಲ ಯತ್ನ... ಮೂರನೇ ದಿನಕ್ಕೇ ಕಾಲಿಟ್ಟ ಪ್ರತಿಭಟನಾ ಸ್ಥಳಕ್ಕೆ ಸ್ಥಳೀಯ ಶಾಸಕ ಎಂ.ಶ್ರೀನಿವಾಸ್ ಭೇಟಿ. ಒಂದು ಗಂಟೆಗೂ ಹೆಚ್ಚು ಕಾಲ ಶಾಸಕರ ಘೆರಾವ್.... ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಭೆ, ಕಾಲೋನಿಗಳ ಹಕ್ಕು ಪತ್ರ, ಮೂಲಭೂತ ಸೌಲಭ್ಯಕ್ಕಾಗಿ ಆರು ಗಂಟೆಗಳ ಕಾಲ ದೀರ್ಘಾವಧಿ ಚರ್ಚೆ. ಸಂಬಂಧಪಟ್ಟ ಅಧಿಕಾರಿಗಳಿಗೆ ತುರ್ತು ಕ್ರಮ ಕೈಗೊಳ್ಳುವಂತೆ ಸೂಚನೆ...

ರಾತ್ರಿ 9 ಗಂಟೆ ಸಮಯದಲ್ಲಿ 100 ಜನರಿಗೆ ಶಾಸಕರಿಂದ ಸ್ವಾಧೀನ ಪತ್ರ ವಿತರಣೆ. 'ಮಂಡ್ಯದ ರಾಜಕಾರಣಿಗಳನ್ನು ತಲ್ಲಣಗೊಳಿಸಿದ ಹೋರಾಟ' ಕೊನೆಗೂ ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳ ಮಂಡ್ಯ ತಾಲ್ಲೂಕು ಸಮಿತಿಗಳ ತೀವ್ರ ಹೋರಾಟಕ್ಕೆ ಮಣಿದ ಶಾಸಕ ಹಾಗೂ ಜಿಲ್ಲಾಡಳಿತ. ಇದು ಮಂಡ್ಯದ ಇತ್ತೀಚಿನ ಗುಡಿಸಲು ನಿವಾಸಿಗಳು ನಡೆಸಿದ ಯಶಸ್ಸಿನತ್ತ ಸಾಗಿರುವ ಚಳುವಳಿಯ ಪಕ್ಷಿನೋಟ.

ಸಿ.ಕುಮಾರಿ

ಸಮಸ್ಯೆಯ ನಾನಾಮುಖ

ಮಂಡ್ಯ ನಗರದ ಹೃದಯ ಭಾಗದಲ್ಲಿರುವ ಗಾಂಧಿನಗರ, ಶಹರ ನಗರ(ಹಿಂದಿನ ಸ್ವತಂತ್ರಪಾಳ್ಯ), ಕಲ್ಲಹಳ್ಳಿಯ ವಿ.ವಿ.ನಗರ, ಪೌರಕಾರ್ಮಿಕರ ಕಾಲೋನಿ, ಗುತ್ತಲು, ನೆಹರು ನಗರದ ತಮಿಳು ಕಾಲೋನಿ, ಬೇಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಎಸ್.ಡಿ.ಜಯರಾಂ ಬಡಾವಣೆ, ಮಂಡ್ಯ ನಗರದ ಚಿಕ್ಕಮಂಡ್ಯ ಕೆರೆಯಂಗಳ, ಬೀಡಿಕಾಲೋನಿ, ಕೋಣನಹಳ್ಳಿಯ ವಸತಿಹೀನರು, ಹೀಗೆ ನಗರದ ಹಲವಾರು ಕೊಳಚೆ ಪ್ರದೇಶಗಳಲ್ಲಿ ಸುಮಾರು 50 ವರ್ಷಗಳಿಂದ ಕನಿಷ್ಠ ಮೂಲಭೂತ ಸೌಲಭ್ಯವಿಲ್ಲದೆ, ಮನೆಗಳಿಗೆ ಹಕ್ಕುಪತ್ರವಿಲ್ಲದೆ ಈ ಕೊಳಚೆ ಪ್ರದೇಶಗಳಲ್ಲಿ ತೆಂಗಿನ ಗರಿಯಿಂದ ಗುಡಿಸಲು ಕಟ್ಟಿಕೊಂಡು ಅತಿ ಚಿಕ್ಕ ಅಂದರೆ 10 ರಿಂದ 15 ಅಡಿ ಇರುವ ಗುಡಿಸಲುಗಳಲ್ಲಿ ವಾಸಿಸುತ್ತಿರುವ ಜನರಿಗೆ ಕಾಂಗ್ರೆಸ್ ಮತ್ತು ಜನತಾದಳ ಪುಡಾರಿಗಳ ದಿನದ ಬಡ್ಡಿ ಸುಲಿಗೆ, ಹೆಂಡ, ಸಾರಾಯಿ ಹಣಕ್ಕಾಗಿ ಓಟಿನ ಬ್ಯಾಂಕ್ ಆಗಿದ್ದ ಕೊಳಗೇರಿ ಜನರ ಜೀವನ ಸ್ಥಿತಿ ತುಂಬಾ ದುಸ್ತರವಾಗಿದೆ. ಕುಡಿಯುವ ನೀರಿನ ಬವಣೆ ಹೇಳತೀರದು, ಶೌಚಾಲಯವಂತೂ ಇಲ್ಲವೇ ಇಲ್ಲ. ಉತ್ತಮ ಆರೋಗ್ಯ ಕನಸಿನ ಮಾತಾಗಿದೆ. ರಸ್ತೆ, ಚರಂಡಿ ಕಾಣದ ನೂರಾರು ಕುಟುಂಬಗಳು ಸಾವಿರಾರು ಜನಸಂಖ್ಯೆಯನ್ನು ಹೊತ್ತಿರುವ ಈ ಕೊಳಚೆ ಪ್ರದೇಶಗಳಲ್ಲಿ ಅನಕ್ಷರತೆ ಹೆಚ್ಚಿದ್ದು, ದುಡಿಯುವ ಕೈಗಳಿಗೆ ಕೆಲಸವಿಲ್ಲದೆ ಅರೆ ಹೊಟ್ಟೆ ಜೀವನ ಸಾಗಿಸುತ್ತಿದ್ದಾರೆ. ಸಮರ್ಪಕ ಪಡಿತರ ಚೀಟಿ ಹಾಗೂ ಸಾರ್ವತ್ರಿಕ ಪಡಿತರ ವಿತರಣೆಯಿಂದ ವಂಚಿತರಾಗಿದ್ದಾರೆ. ಅವರ ಜೀವಿತದ ಅವಧಿಯಲ್ಲಿ ಅರ್ಧ ಶತಮಾನ ಕಳೆದರೂ ಹತ್ತಾರು ಜನಪ್ರತಿನಿಧಿಗಳು ಆಳ್ವಿಕೆ ಮಾಡಿದರೂ ಕೂಡಾ ಭದ್ರತೆಗೆ ಸೂರಿಲ್ಲ. ಆ ಸೂರಿಗೆ 'ನಮ್ಮದೆಂಬ ಹಕ್ಕುಪತ್ರ'ವಿಲ್ಲ.

ಜನರನ್ನು ಸಂಘಟಿಸುವ ಯೋಜನೆ ಬದುಕಿನ ಬವಣೆಗಳ ವಿರುದ್ಧ ಚಳುವಳಿ

ಹೀಗೆ ಬಡ ಜನರ ನಿರಂತರ ಶೋಷಣೆ ಸಾಗುತ್ತಾ ಬರುತ್ತಿರುವಾಗಲೇ ಇಂತಹ ಗಂಭೀರ ಸಮಸ್ಯೆಗಳ ನಿವಾರಣೆಗಾಗಿ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳಲು ಕಳೆದ ಎರಡೂ ಮೂರು ವರ್ಷದಿಂದ ಆ ಕಾಲೋನಿಗಳ ಸಂಪರ್ಕ ಸಾಧಿಸಿ ಜನವಾದಿ ಮಹಿಳಾ ಸಂಘಟನೆಗೆ ಸದಸ್ಯತ್ವ, ಘಟಕ ಆರಂಭ ಮಾಡಿ ನಂತರದಲ್ಲಿ ಕೃಷಿಕೂಲಿಕಾರರ ಸಂಘಟನೆ ಪರಿಚಯಿಸಿ, ಹೀಗೆ ಈ ವ್ಯವಸ್ಥೆಯ ಕಟ್ಟಕಡೆಯ ಜನರನ್ನು ಹೋರಾಟದ ಮುಂಚೂಣಿಗೆ ತರುವಲ್ಲಿ ಎರಡು ಸಂಘಟನೆಗಳ ನಿರಂತರ ಶ್ರಮಿಸಿದವು. ಇದರಿಂದಾಗಿ ಈ ಎಂಟು ಸ್ಲಂಗಳಲ್ಲಿಯೂ ಪ್ರತ್ಯೇಕವಾಗಿ ಆಯಾ ಕಾಲೋನಿಗಳ ಸಮಸ್ಯೆಗಳನ್ನೆತ್ತಿಕೊಂಡು ಎರಡು ಸಂಘಟನೆಗಳು ಜಂಟಿಯಾಗಿ ಭಾಗ್ಯಜ್ಯೋತಿ ಮೀಟರ್ ವಾಪಸ್ಸಾಗಿ, ವಿದ್ಯುತ್ ಬಿಲ್ ಬಾಕಿ ಮನ್ನಾ, ಅಕ್ರಮ-ಸಕ್ರಮ, ಬಿಪಿಎಲ್ ಕಾರ್ಡ್‌ಗಾಗಿ, ಭಾಗ್ಯಜ್ಯೋತಿ ಪರಿವರ್ತನೆಗಾಗಿ, ಸಮರ್ಪಕ ಪಡಿತರ ವಿತರಣೆ, ಪುನರ್‌ಸಮೀಕ್ಷೆಯಲ್ಲಿ ರೇಷನ್ ಕಾರ್ಡು ರಹಿತರ ಸೇರ್ಪಡೆಗಾಗಿ, ತೂಕದಲ್ಲಿನ ಲೋಪ ತಪ್ಪಿಸಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಹಾಗೂ ತಹಶೀಲ್ದಾರರ ಕಛೇರಿಗೆ ಮುತ್ತಿಗೆ, ಮೂಲಭೂತ ಸೌಲಭ್ಯಗಳು ಹಾಗೂ ಹಕ್ಕುಪತ್ರಕ್ಕಾಗಿ ಆಗ್ರಹಿಸಿ ತಾಲ್ಲೂಕು ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಲಾಗಿತ್ತು. ಆಗಸ್ಟ್ 2, 2005 ರಂದು ಎಸ್.ಡಿ.ಜಯರಾಂ ಬಡಾವಣೆಗೆ ತಕ್ಷಣವೇ ಕುಡಿಯುವ ನೀರಿಗೆ ಹ್ಯಾಂಡ್ ಪಂಪ್ ವ್ಯವಸ್ಥೆ ಮಾಡಿದ್ದರು.

ಕೆರೆಗೆ ಬಿದ್ದ ಬೀಡಿ ಕಾರ್ಮಿಕರ ಬದುಕಿಗೆ ಚಳುವಳಿಯ ಆಸರೆ

ಬೀಡಿ ಕಾರ್ಮಿಕರಿಗೆ ಜಬೀ ಉಲ್ಲಾ, ಅಕ್ರಮ್ ಪಾಷ ಮತ್ತು ನಗರಸಭಾ ಹಾಲಿಉಪಾಧ್ಯಕ್ಷೆ ನಸ್ರೀನ್ ತಾಜ್ ಹೀಗೆ ಹಲವಾರು ಜನ ಬೀಡಿ ವಿವಿದ್ದೋದ್ದೇಶ ಸಹಕಾರಿ ಸಂಘ ಮಾಡಿಕೊಂಡು ಚಿಕ್ಕ ಮಂಡ್ಯ ಕೆರೆಯಂಗಳದಲ್ಲಿ ಜಾಗ ಪಡೆದು ಒಂದೂವರೆಸಾವಿರ ಕುಟುಂಬಗಳಿಗೆ ಮನೆ ನಿರ್ಮಿಸಲು ಪ್ರತಿಮನೆಗೆ ರೂ. 90,000 ಒಟ್ಟು ಲೆಕ್ಕದಲ್ಲಿ ಇದೂವರೆಗೂ ಪ್ರತಿಯೊಬ್ಬ ಫಲಾನುಭವಿಗಳಿಂದ 18,400 ರೂ. ಸಂಗ್ರಹಿಸಿ, ಕುಡಿಯುವ ನೀರು, ರಸ್ತೆ, ವಿದ್ಯುತ್, ಒಳಚರಂಡಿ, ಹಕ್ಕುಪತ್ರ ಮುಂತಾದ ಯಾವುದೇ ಮೂಲಭೂತ ಸೌಲಭ್ಯ ನೀಡದೇ ಕಳಪೆ ಕಾಮಗಾರಿ ಮಾಡಿದ್ದುದ್ದರ ಪ್ರತಿಫಲ ಕಟ್ಟಿದ ಕೆಲವೇ ತಿಂಗಳುಗಳಲ್ಲಿ ಮನೆಗಳು ಬಿರುಕು ಬಿಟ್ಟವು. ಆಗಸ್ಟ್ 23 ರಂದು ಮಂಡ್ಯದಲ್ಲಿ ಬಿದ್ದ ಭಾರಿ ಮಳೆಯಿಂದಾಗಿ, ಬೀಡಿ ಕಾಲೋನಿಗೆ ನೀರು ನುಗ್ಗಿತು. ಸಾಲ-ಸೋಲ ಮಾಡಿ ಬದುಕಿಗೊಂದು ಸೂರು ಬೇಕೆಂದು ಪಡೆದ ಬೀಡಿ ಕಾರ್ಮಿಕರ ವಸತಿಯ ಪರಿ ಹೇಳತೀರದು.



ಜಿಲ್ಲಾಧಿಕಾರಿ ಕಛೇರಿ ಎದುರೇ ಅಡುಗೆ ತಯಾರಿಕೆಯಲ್ಲಿ ಧರಣಿ ನಿರತರು

ಚಳುವಳಿಯಿಂದ ದೊರೆತ ತಾತ್ಕಾಲಿಕ ಪರಿಹಾರ

ಸಂಪೂರ್ಣ ಜಲಾವೃತ್ತಗೊಂಡದ್ದ ರಿಂದ ಬಡಾವಣೆಯ ಜನರನ್ನು ಹೋರಾಟಕ್ಕೆ ಅಣಿನೆರೆಸಿ ಬೀಡಿ ವಸತಿಯ ನಿರ್ಮಿತಿ ಕೇಂದ್ರದ ಎದುರು ಜಮಾವಣೆಗೊಂಡು ಸುಮಾರು ಒಂದು ತಾಸಿಗೂ ಅಧಿಕ ಕಾಲ ಶಾಸಕರು ಹಾಗೂ ಅಧಿಕಾರಿಗಳನ್ನು ಘೆರಾವ್ ಮಾಡಿ ತರಾಟೆಗೆ ತೆಗೆದುಕೊಂಡ ನಂತರ ನೊಂದ ಬಡ ಬೀಡಿ ಕಾರ್ಮಿಕರಿಗೆ ತಕ್ಷಣದ ವಸತಿ ವ್ಯವಸ್ಥೆ ಮತ್ತು ಬಡಾವಣೆಯ ಜನತೆಗೆ ಊಟದ ಹಾಗೂ ಮೇಲಿಂದ ನುಗ್ಗುವ ನೀರು ತಡೆಯಲು ತುರ್ತು ಕ್ರಮ ಕೈಗೊಂಡರು. ಸುರಕ್ಷತಾ ಕ್ರಮಕ್ಕೆ ಕೇಂದ್ರ ಸ್ಥಾನಿಕ ಸಹಾಯಕ ಅಧಿಕಾರಿ ಸೂಕ್ತ ಕ್ರಮಕ್ಕೆ ಆದೇಶಿಸಿ, ಸ್ಥಳಕ್ಕೆ ತಹಶೀಲ್ದಾರ್ ಮೂಲಕ ತುರ್ತು ಕ್ರಮ ಕೈಗೊಂಡರು.

ಬಡವರನ್ನು ಒಕ್ಕಲ್ಲೆಬ್ಬಿಸುವ ಖದೀಮರು ಹಾಗೂ ಕೋರ್ಟ್‌ನ ಆದೇಶಕ್ಕೇ 'ಸ್ಟೇ' ನೀಡಿದ ಚಳುವಳಿ

ಶಂಕರನಗರ, ಗಾಂಧಿ ನಗರದ ನಿವಾಸಿಗಳ ವಿರುದ್ಧ ಕೆಲವು ವ್ಯಕ್ತಿಗಳು ನ್ಯಾಯಾಲಯದಲ್ಲಿ ಸುಳ್ಳು ಮೊಕದ್ದಮೆ ಹೂಡಿ ನಿವಾಸಿಗಳ ಜಾಗ ನಮ್ಮದೆಂದು ನ್ಯಾಯಾಲಯದಿಂದ ಆದೇಶ ಹೊರಡಿಸಿ, ಪೊಲೀಸರ ಮೂಲಕ ಎತ್ತಂಗಡಿ ಮಾಡಿಸಲು ಮುಂದಾದಾಗ ಸ್ಥಳೀಯ ರಾಜಕಾರಣಿಗಳು ಯಾರು ಕೂಡಾ ಅವರ ಸಹಾಯಕ್ಕೆ ನಿಲ್ಲದಿದ್ದಾಗ ಸಂಘಟನೆಯಿಂದ ಆ ಜನರಿಗೆ ರಕ್ಷಣೆ ಕೊಟ್ಟು ಪೊಲೀಸರ ದೌರ್ಜನ್ಯ ವಿರೋಧಿಸಿ ಹಾಗೂ ಜನರನ್ನು ಎತ್ತಂಗಡಿ ಮಾಡದಂತೆ ಸರ್ಕಾರದ ಗಮನ ಸೆಳೆದದ್ದು, ಆಗಸ್ಟ್ 26-2005 ರ ಹೋರಾಟ. ಇಂತಹ ಹೋರಾಟಗಳಿಂದ ಮಹಿಳೆಯರು ಅದರಲ್ಲೂ ದಲಿತ ಹಾಗೂ ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರು ಹೆಚ್ಚೆಚ್ಚು ಗಟ್ಟಿಯಾಗುತ್ತಾ ಬಂದರು.

ಸಮಸ್ಯೆಗಳ ಸಮೀಕ್ಷೆ - ಅಧ್ಯಯನ :

ರಾಜ್ಯವ್ಯಾಪಿ - ರಾಷ್ಟ್ರವ್ಯಾಪಿ ಚಳುವಳಿ ಅಂಗವಾಗಿ ಆಹಾರ, ಭೂಮಿ ಮತ್ತು ಉದ್ಯೋಗದಿಂದ ವಂಚಿತರಾದವರ ಮಾಹಿತಿಗಾಗಿ ಸಿಪಿಐ(ಎಂ) ಪಕ್ಷ ಒಂದು ಸಮೀಕ್ಷಾ ತಂಡವನ್ನು ನೇಮಿಸಿ, ಪ್ರತಿ ಮನೆಯ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ಅತ್ಯಂತ ಗಂಭೀರವಾಗಿ ಕಂಡುಬಂದದ್ದು ವಸತಿ, ಮೂಲಭೂತ ಸೌಲಭ್ಯಗಳು, ಹಕ್ಕುಪತ್ರ ಮತ್ತು ಉದ್ಯೋಗ ಹಾಗೂ ಪಡಿತರ ವಿತರಣೆಯಲ್ಲಿ ಲೋಪ, ಇವೆಲ್ಲವನ್ನು ಆಧರಿಸಿ, ಹಕ್ಕುಪತ್ರ, ಮೂಲಭೂತ ಸೌಲಭ್ಯಕ್ಕೆ ಜೆಎಂಎಸ್ ಮತ್ತು ಕೂಲಿಕಾರರ ಸಂಘಟನೆಗಳ ಘಟಕ ಜಂಟಿ ಸಭೆ, ಬೀದಿಬದಿಯ ಸಭೆಗಳನ್ನು ಮಾಡಿ ಸೆಪ್ಟಂಬರ್ 26, 27, 28 ರಂದು ಅನಿರ್ದಿಷ್ಟಾವಧಿ ಹೋರಾಟಕ್ಕೆ ಜನರನ್ನು ಅಣಿನೆರೆಸಿತು.

ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮುಂದೆ ಬಡಜನರ ಅನಿರ್ಧಿಷ್ಟಾವಧಿ ಠಿಕಾಣಿ

ಹಕ್ಕುಪತ್ರ ಮತ್ತು ಮೂಲಭೂತ ಸೌಲಭ್ಯಕ್ಕೆ ಆಗ್ರಹಿಸಿ ಮಂಡ್ಯದ ಜಿಲ್ಲಾಧಿಕಾರಿಗಳ ಕಛೇರಿಮುಂದೆ ಅನಿರ್ದಿಷ್ಟಾವಧಿ ಹೋರಾಟ ನಡೆಸಲು ವಿವಿಧ ಕೊಳಚೆ ಕಾಲೋನಿಗಳಿಂದ ನೂರಾರು ಸಂಖ್ಯೆಯಲ್ಲಿ ವಿವಿಧ ಪ್ರದೇಶದಿಂದ ಜಿಲ್ಲಾಧಿಕಾರಿ ಕಛೇರಿ ಬಳಿಗೆ ತಲೆ ಮೇಲೆ ಅಡುಗೆ ಪಾತ್ರೆ, ಅಡುಗೆಗೆ ಸೌದೆ, ಮಲಗಲು ಚಾಪೆ, ವಯಸ್ಸಾದ ಅಜ್ಜಿಯರೂ ಕೈಯಲ್ಲಿ ಕೆಂಬಾವುಟ ಹಿಡಿದು ನಗರ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ತೆಗೆದು ಮೆರವಣಿಗೆಯುದ್ದಕ್ಕೂ ಸರ್ಕಾರದ ವಿರುದ್ಧ, ನಗರ ಸಭೆಯ ವಿರುದ್ಧ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಜಿಲ್ಲಾಧಿಕಾರಿಗಳ ಕಛೇರಿ ಆವರಣಕ್ಕೆ ಲಗ್ಗೆ ಇಟ್ಟರು.

ನಂತರ ಹೋರಾಟಕ್ಕೆ ಚಾಲನೆ ನೀಡಿ ಉದ್ಘಾಟನಾ ಭಾಷಣ ಮಾಡಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿಯವರಾದ ಕಾಂ. ಜಿ.ಎನ್.ನಾಗರಾಜರವರು ಐದು ದಶಕಗಳಿಂದ ಇಲ್ಲೇ ನೆಲೆಸಿದ್ದರೂ ಈವರೆಗೆ ಹಕ್ಕುಪತ್ರ ನೀಡದೇ ಇರುವುದಕ್ಕೆ ಸರ್ಕಾರವೇ ಹೊಣೆ, ಸರ್ಕಾರದ ನಿರ್ಲಕ್ಷ್ಯದಿಂದಲೇ ಈ ಸ್ಥಿತಿ ನಿರ್ಮಾಣವಾಗಿದೆ ಎಂದು ಖಂಡಿಸಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಹಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ ಸಹ ಅಂದು ಭೇಟಿ ನೀಡಿ ಚಳುವಳಿಗೆ ಬೆಂಬಲ ನೀಡಿದರು.

ಜಾತಿ ಮತ ಭೇದವಿಲ್ಲದ ಸಹ ಭೋಜನ

ಹೋರಾಟದಲ್ಲಿ ಭಾಗವಹಿಸಿದ ಎಲ್ಲರಿಗೂ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲೇ ದೊಡ್ಡ ದೊಡ್ಡ ಪಾತ್ರೆಯಲ್ಲಿ ಅಡುಗೆ ಮಾಡಿ, ಹಿಂದು, ಮುಸಲ್ಮಾನ್, ದಲಿತರು ಎಂಬ ಬೇದ ಮರೆತು ಒಟ್ಟಿಗೆ ಬಡಿಸಿಕೊಂಡು ಊಟ ಮಾಡಲಾಯಿತು.

ಟೆಂಟ್ ಕಿತ್ತ ಪೊಲೀಸರ ದುರ್ವರ್ತನೆ ಚಳುವಳಿಯಿಂದ ಟೆಂಟ್ ಮರು ಸ್ಥಾಪನೆ

ಆ ದಿನ ಕಳೆದು ಸಂಜೆಯಾಗುತ್ತಿದ್ದಂತೆ ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಪೆಂಡಾಲ್ ಕಿತ್ತುಹಾಕಿದರು. ಪ್ರಜಾಸತ್ತಾತ್ಮಕ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದ ಪಶ್ಚಿಮ ವಲಯ ಪೊಲೀಸ್ ಠಾಣೆಯ ಎಸ್.ಐ. ಕೃಷ್ಣರನ್ನು ಸೇವೆಯಿಂದ ಅಮಾನತು ಮಾಡುವಂತೆ ಪ್ರತಿಭಟನೆ ತೀವ್ರಗೊಂಡಿತು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಎಂ.ಎಸ್.ರವಿಶಂಕರ್‌ರವರು ಇನ್ನು ಮೂರು ದಿನದೊಳಗೆ ಸ್ಲಂ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಲು, ಮೂಲಭೂತ ಸೌಲಭ್ಯ ಕಲ್ಪಿಸಿಕೊಡಲಾಗುವುದು, ಪ್ರತಿಭಟನಾಕಾರರು

→

ಶಾಂತಿಯುತವಾಗಿ ಪ್ರತಿಭಟನೆಯನ್ನು ಹಿಂದಕ್ಕೆ ಪಡೆಯಬೇಕೆಂದು ಕೋರಿದರು. ಹಕ್ಕುಪತ್ರ ನೀಡುವ ತನಕ ಇಲ್ಲಿಯೇ ಹೋರಾಟ ಮುಂದುವರೆಸುವುದಾಗಿ ತಿಳಿಸಲಾಯಿತು.

ಪೊಲೀಸರ ದುರ್ವರ್ತನೆಗೆ ಜಿಲ್ಲಾಧಿಕಾರಿಯೇ ಬಹಿರಂಗ ಕ್ಷಮೆ ಯಾಚಿಸಿದರು. ನಂತರ ಪೆಂಡಾಲ್ ಹಾಕಿಕೊಂಡು ಆ ದಿನ ರಾತ್ರಿ ಮಕ್ಕಳು, ಮುದುಕ/ಮುದುಕಿಯುವರು ಯುವಕರು ಮಹಿಳೆಯರಾದಿಯಾಗಿ ಚಳುವಳಿಯ ಮುಖಂಡರೂಸೇರಿ ಸುಮಾರು 350 ಜನ ಡಿ.ಸಿ. ಕಚೇರಿ ಮುಂಭಾಗದಲ್ಲೇ ಮಲಗಿದರು.

ಪತ್ರಿಕೆ ಮತ್ತು ಟಿ.ವಿ.ಮಾಧ್ಯಮಗಳಿಂದ ಸುದ್ದಿ ತಿಳಿದ ಇತರೆ ಕೊಳಚೆ ನಿವಾಸಿಗಳು 27ನೇ ತಾರೀಖು ಬೆಳಗಾಗುತ್ತಿದ್ದಂತೆ ಮನೆಗೊಂದು ಸೇರು ಅಕ್ಕಿ, ಹುಡಿ, ಉಪ್ಪು ಹುಣಸೆ, ಬೇಳೆ, ಸೊಪ್ಪು ತರಕಾರಿಗಳನ್ನು ಕೈಗಾಡಿಗಳಲ್ಲಿ ಸೌದೆ, ಪಾತ್ರೆ ತುಂಬಿಕೊಂಡು ಜಾತ್ರೆ ಹೊರಟ್ಹಾಂಗೆ ಬಡ ಜನರ ದಂಡು ಡಿ.ಸಿ. ಕಚೇರಿ ಮುಂದೆ ನಡೆಯುತ್ತಿದ್ದ ಹೋರಾಟಕ್ಕೆ ಸಾವಿರಾರು ಸಂಖ್ಯೆಯಲ್ಲಿ ಧಾವಿಸಿತು. ಪ್ರತಿಭಟನಾ ಸ್ಥಳದಲ್ಲೇ ಊಟ, ಸ್ನಾನ, ಅಲ್ಲೇ ನಿದ್ರೆ ಹೀಗೆ ನಡೆದ ಚಳುವಳಿ ಸ್ಥಳೀಯ ರಾಜಕಾರಣಿಗಳನ್ನು ಹಾಗೂ ಜಿಲ್ಲಾಡಳಿತವನ್ನು ತಲ್ಲಣಗೊಳಿಸಿತು. ಪ್ರತಿಭಟನೆಗೆ ಬೆಂಬಲ ಕೋರಲು ಕೋಲಾರ ಜಿಲ್ಲೆಯ ಬಾಗೇಪಲ್ಲಿ ಕ್ಷೇತ್ರದ ಸಿಪಿಐ(ಎಂ) ಶಾಸಕರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ಧರಣಿ ಸ್ಥಳಕ್ಕೆ ಭೇಟಿ ನೀಡಿ ಹಕ್ಕುಪತ್ರ ನೀಡುವಂತೆ ಸರ್ಕಾರದ ಮಟ್ಟದಲ್ಲಿ ಒತ್ತಾಯ ತರುತ್ತೇನೆಂದು ಹೇಳಿ - ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿ ಜಿಲ್ಲಾಧಿಕಾರಿ ಹಾಗೂ ಮಂಡ್ಯ ವಿಧಾನಸಭಾ ಶಾಸಕ ಎಂ.ಶ್ರೀನಿವಾಸ್ ಜೊತೆ ಹಾಗೂ ಕೊಳಚೆ ನಿರ್ಮೂಲನಾ ಮಂಡಳಿಯ ಅಧಿಕಾರಿಗಳ ಜೊತೆ ಚರ್ಚಿಸಿ ತುರ್ತು ಕ್ರಮ ಕೈಗೊಂಡರು. ಇದಾದ ನಂತರ ಮಾತ್ರವೇ ಅಧಿಕಾರಿಗಳು ಕೆಲಸ ನಿರ್ವಹಿಸುವಂತ ವಾತಾವರಣ ಸೃಷ್ಟಿಯಾಯಿತು.


ಆ ದಿನ ವಕೀಲರ ಸಂಘ, ದಲಿತ ಸಂಘರ್ಷ ಸಮಿತಿಯ ಎರಡು ಬಣಗಳು, ಎಸ್‌ಎಫ್‌ಐ, ಡಿವೈಎಫ್‌ಐ, ಸಿಐಟಿಯು, ಬಿಪಿಎಲ್ ಕಾರ್ಮಿಕ ಸಂಘಟನೆ, ವಿವಿಧ ಸಂಘಟನೆಗಳ ಮುಖಂಡರು ಧಾವಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

100 ಜನರಿಗೆ ಸ್ವಾಧೀನ ಪತ್ರ, ಹಕ್ಕುಪತ್ರ ಹಾಗೂ ಸಮಸ್ಯೆಗಳ ಪರಿಹಾರದ ಖಚಿತ ಕ್ರಮ ವಿಜಯದತ್ತ ಚಳುವಳಿ

ಶಾಸಕರ ಸಮ್ಮುಖದಲ್ಲಿ ಮಾತುಕತೆ ಫಲಶೃತಿ, ನಗರಸಭೆಯ ಸಾಮಾನ್ಯ ಸಭೆಯನ್ನು ಅಕ್ಟೋಬರ್ 15ರಂದು ಕರೆಯಲು ಸೂಚನೆ.


ಗುಡಿಸಲು ನಿವಾಸಿಗಳ ಬದುಕು ಹಸನಾಗಲು ಜನವಾದಿ ಮಹಿಳಾ ಸಂಘಟನೆ ಮತ್ತು ಕೃಷಿಕೂಲಿಕಾರರ ಸಂಘಟನೆಗಳು ನಡೆಸುತ್ತಿದ್ದ ಧರಣಿ ಸತ್ಯಾಗ್ರಹವನ್ನು ಶಾಸಕರು ಮತ್ತು ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆಯಿಂದ ಮಾತುಕತೆಗೆ ಮುಂದಾದರು.

ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲೇ ಠಿಕಾಣಿ ಹೂಡಿದ, ಚಳುವಳಿಕಾರರು ಜಗ್ಗುವುದಿಲ್ಲವೆಂದು ಅರಿತುಕೊಂಡ ಶಾಸಕ ಎಂ.ಶ್ರೀನಿವಾಸರವರು ಸ್ವಲ್ಪ ದೈರ್ಯ ಮಾಡಿ 3ನೇ ದಿನ ಮಧ್ಯಾಹ್ನ 3 ಗಂಟೆಗೆ ಪ್ರತಿಭಟನಾ ನಿರತರಲ್ಲಿಗೆ ಬಂದರು. ಗುಡಿಸಲು ನಿವಾಸಿಗಳಿಗೆ ಹಕ್ಕುಪತ್ರ ಮತ್ತು ಮೂಲಸೌಲಭ್ಯ ನೀಡುವುದಾದರೆ ಮಾತ್ರ ನಿಮ್ಮೊಂದಿಗೆ ಮಾತು, ಸುಮ್ಮನೆ ಆಶ್ವಾಸನೆ ಕೊಡುವುದಾದರೆ ನಾವು ನಿಮ್ಮೊಟ್ಟಿಗೆ ಯಾವ ವಿಚಾರವನ್ನು ಹಂಚಿಕೊಳ್ಳುವುದಿಲ್ಲವೆಂದು ಪಟ್ಟು ಹಿಡಿದು ಒಂದು ಗಂಟೆಗೂ ಹೆಚ್ಚುಕಾಲ ಎಂಎಲ್‌ಎ ಶ್ರೀನಿವಾಸರನ್ನು ಘೇರಾವ್ ಮಾಡಿ ಧಿಕ್ಕಾರ ಹಾಕಿ ಪ್ರತಿಭಟಿಸಲಾಯಿತು. ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿಯವರು ಅಂದು ಭೇಟಿ ನೀಡಿ ಚಳುವಳಿಯನ್ನು ಬೆಂಬಲಿಸಿದರು.



ಶಾಸಕರಾದ ಎಂ.ಶ್ರೀನಿವಾಸ್, ಡಾ. ಕೆ.ಅನ್ನದಾನಿ, ವಿಜಯಲಕ್ಷ್ಮಿ ಮತ್ತು ಜಿಲ್ಲಾಧಿಕಾರಿ ಎಂ.ಎಸ್.ರವಿಶಂಕರ್ ಜೊತೆಯಲ್ಲಿ ಮಾತುಕತೆ

ನಂತರ ಶಾಸಕರ ಉಪಸ್ಥಿತಿಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಳವಳ್ಳಿ ಹಾಗೂ ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕರ ಸಮ್ಮುಖದಲ್ಲಿ ಕೊಳಚೆ ನಿರ್ಮೂಲನ ಮಂಡಳಿಯ ಅಧಿಕಾರಿಗಳು ಮತ್ತು ಕೇಂದ್ರ ಸ್ಥಾನಿಕ ಸಹಾಯಕರು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಮಂಡಳಿ ಸಹಾಯಕ ಕಾರ್ಯಪಾಲ ಅಭಿಯಂತರರು, ಕೊಳಚೆ ನಿರ್ಮೂಲನಾ ಮಂಡಳಿ ಮೈಸೂರು ವೃತ್ತ ಪೌರಾಯುಕ್ತರು, ನಗರಸಭೆ ಮಂಡ್ಯ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಸಿಪಿಐ(ಎಂ) ಮುಖಂಡರು ಹಾಗೂ ಎಂಟು ಜನ ಸ್ಲಂ ಮುಖಂಡರು, ಸುಮಾರು 50 ಜನರ ಸಮ್ಮುಖದಲ್ಲಿ ದೀರ್ಘ ಚರ್ಚೆ ನಡೆಯಿತು.



ನೀರಿನಲ್ಲಿ ಮುಳುಗಿರುವ ಬೀಡಿ ಕಾರ್ಮಿಕರ ವಸತಿ ಸಮುಚ್ಚಯ



ಇಂಜಿನಿಯರ್‌ರವರಿಗೆ ಘೇರಾವ್

ಸಮಸ್ಯೆ ಪರಿಹಾರದ ನಿಟ್ಟಿನಲ್ಲಿ ಹಿಂದಿನ ಸಭೆಯಲ್ಲಿ ಆದ ತೀರ್ಮಾನ ಒಂದೂ ಜಾರಿಯಾಗಿಲ್ಲದ ಬಗ್ಗೆ ಕುಮಾರಿ ಯವರು ಸಂಬಂಧಿಸಿದವರನ್ನು ಚೆನ್ನಾಗಿ ತರಾಟೆಗೆ ತೆಗೆದುಕೊಂಡರು. ನಂತರ ಗಾಂಧಿನಗರ, ಶಂಕರನಗರ ಸಮಸ್ಯೆಯನ್ನು ಸುಮಾರು ಒಂದು ಗಂಟೆ ಕಾಲ ಚರ್ಚಿಸಿ, ಕಾಲೋನಿ ಅಳತೆ ಮಾಡಿಸಿ ಹಕ್ಕುಪತ್ರ ಕೊಡಿಸಲು ಕ್ರಮ ಕೈಗೊಳ್ಳಲು ಮುಂದಾಗುವುದು ತಿಳಿಸಿ, ಕೆಲವರಿಗೆ ಸ್ವಾಧೀನವನ್ನು ಸದ್ಯಕ್ಕೆ ಕೊಟ್ಟಿದ್ದು ನಂತರದ ದಿನದಲ್ಲಿ ಹಕ್ಕುಪತ್ರವಾಗಿ ಪರಿವರ್ತಿಸಿ ಕೊಡುವುದಾಗಿ ತಿಳಿಸಿದರು. ತಮಿಳು ಕಾಲೋನಿ ವಿಚಾರವಾಗಿ ಸುಮಾರು ಎರಡು ಗಂಟೆಯವರೆಗೂ ಚರ್ಚಿಸಿ ಅಲ್ಲಿಯ ಭಾಗ ಅಳತೆ ಮಾಡಿ ಹಕ್ಕುಪತ್ರ ನೀಡಿ ವ್ಯವಸ್ಥಿತವಾಗಿ ಮನೆಗಳನ್ನು ನಿರ್ಮಿಸಿಕೊಡುವಂತೆ ತಿಳಿಸಿದರು. ಹೀಗೆ ಪೌರಕಾರ್ಮಿಕರ ಕಾಲೋನಿ ಮತ್ತು ಬೀಡಿಕಾರ್ಮಿಕರಿಗೆಕೂಡ ನಗರ ಸಭೆ ವ್ಯಾಪ್ತಿಯಲ್ಲಿನ ಕೊಳಗೇರಿಗಳಿಗೆ ಹಕ್ಕುಪತ್ರ ನೀಡುವ ಅಧಿಕಾರವನ್ನು ನಗರಸಭೆಗೆ ನೀಡಲಾಗಿದೆ. ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಅಕ್ಟೋಬರ್ 15 ರಂದು ನಗರಸಭೆಗೆ ಸಾಮಾನ್ಯ ಸಭೆ ಕರೆಯಲು ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಯಾವ ಕೊಳಗೇರಿಗಳು ನಗರ ಸಭೆ ವ್ಯಾಪ್ತಿಗೆ ಸೇರಿಲ್ಲವೋ ಅಂತಹ ಕಡೆ ಏನೆಲ್ಲ ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಕೊಳಚೆ ನಿರ್ಮೂಲನ ಮಂಡಳಿಯ ಅಧಿಕಾರಿಗಳ ಜೊತೆ ಅ. 17ರಂದು ಸಭೆ ನಡೆಸಲಾಗುವುದು. ಇದಕ್ಕೆ ಕೊಳಚೆ ನಿರ್ಮೂಲನ ಮಂಡಳಿ ಆಯುಕ್ತರು ಕೂಡಾ ಆಗಮಿಸಲಿದ್ದಾರೆ ಎಂದರು.

ತಮಿಳು ಕಾಲೋನಿ ಮತ್ತು ಪೌರ ಕಾರ್ಮಿಕರ ಕಾಲೋನಿಗೆ ಮಾರನೇ ದಿನದಿಂದಲೇ ವಿದ್ಯುತ್ ಮತ್ತು ಕುಡಿಯುವ ನೀರು - ಸರಬರಾಜು ಮಾಡಲು ಕೊಳಚೆ ನಿರ್ಮೂಲನ ಮಂಡಳಿಯ ಅಧಿಕಾರಿಗಳು ಒಪ್ಪಿದರು. ಹಾಗೆಯೇ ಎಸ್.ಡಿ.ಜಯರಾಂ ಬಡಾವಣೆಗೆ ಅ.4 ರೊಳಗೆ ವಿದ್ಯುತ್ ಮತ್ತು ನೀರು ನೀಡಲಾಗುವುದು ಎಂದು ಶಾಸಕ ಎಂ.ಶ್ರೀನಿವಾಸ್ ತಿಳಿಸಿದರು.

ಬೀಡಿ ಕಾರ್ಮಿಕರ ಸಹಕಾರ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ, ಅಗತ್ಯ ಬಿದ್ದರೆ ಸ್ವಾಧೀನಕ್ಕೆ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ. ಇದಕ್ಕೆ ಸಂಬಂಧಿಸಿದಂತೆ ಅ. 24 ರಂದು ಸಭೆ ನಡೆಸಲಾಗುವುದು, ಎಂದು ಜಿಲ್ಲಾಧಿಕಾರಿಗಳು ವಿವರಿಸಿದರು.

ರಾತ್ರಿ 9.15 ರಲ್ಲಿ ಸುಮಾರು 100 ಮಂದಿ ಕೊಳಗೇರಿಗಳಿಗೆ ಸ್ವಾಧೀನ ಪತ್ರಗಳನ್ನು ಶಾಸಕ ಎಂ.ಶ್ರೀನಿವಾಸ್ ವಿತರಿಸಿದರು. ಈ ಸ್ವಾಧೀನ ಪತ್ರಗಳನ್ನೇ ಹಕ್ಕುಪತ್ರಗಳ ಹಾಗೆ ಪರಿವರ್ತಿಸಲು ಸರ್ಕಾರದಲ್ಲಿ ಕಾನೂನಿಗೆ ತಿದ್ದುಪಡಿ ತರಲಾಗುವುದು. ಈ ಬಗ್ಗೆ ಚರ್ಚೆ ನಡೆಯುತ್ತಿದೆ. ಹೀಗಾಗಿ ಸ್ವಾಧೀನ ಪತ್ರ ಪಡೆದು, ನಂತರ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸೋಣ ಎಂದು ಶಾಸಕರು ತಿಳಿಸಿದರು. ಅಂದು ರಾತ್ರಿ ಜಯ ಘೋಷಗಳೊಂದಿಗೆ ಹಾಗೂ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಕ್ರಮವಹಿಸದೆ ಹೋದಲ್ಲಿ ಮತ್ತೆ ಸಂಘರ್ಷವನ್ನು ಮುಂದುವರಿಸುವ ಸಂಕಲ್ಪದೊಂದಿಗೆ ಪ್ರತಿಭಟನೆ ಅಂತ್ಯಗೊಂಡಿತು. ಈ ಹೋರಾಟದ ಮುಂಚೂಣಿಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಹಕಾರ್ಯದರ್ಶಿ ಸಿ.ಕುಮಾರಿ, ಪ್ರಾಂತ ಕೃಷಿಕೂಲಿಕಾರರ ಸಂಘದ ಮುಖಂಡರು ಹಾಗೂ ಸಿಪಿಐ(ಎಂ) ಪಕ್ಷದ ಮಂಡ್ಯ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿಗಳಾದ ಎಂ.ಪುಟ್ಟಮಾದು, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಸದಸ್ಯೆ ಮುರುವಾಯಿ, ಶ್ಯಾಮಲ, ಸುಮತಿ, ಬೃಂದಾ, ರಾಧ, ಮಂಜುಳ, ಕೂಲಿಕಾರ ಸಂಘ, ಮಂಡ್ಯ ತಾಲ್ಲೂಕು ಮುಖಂಡರಾದ ಎಬಿನ್ಸರ್, ಅಧ್ಯಕ್ಷೆ ಸಿ.ಗಾಯಿತ್ರಿ, ಸೆಲ್ವಕುಮಾರ್, ಶರವಣ, ಮುರುಗೇಶ್, ವೆಂಕಟೇಶ್, ನಾಗೇಂದ್ರ, ನಾಗರಾಜು, ಮಹದೇವು, ಅಬ್ದುಲ್ಲಾ, ಯಾಸ್ಮಿನ್ ತಾಜ್, ನೂರ್‌ಜಾನ್, ಖಿತ್ಸರ್, ಪೌಜಿಯಾ, ಅಂಜನಮ್ಮ ಶಿವರಾಮು, ಮಾದೇವ್, ಕೃಷ್ಣ, ಮಹಬೂಬ್ (ಬಾಬು), ಕೇಶವ, ಹಸೀನಾ, ಕುಮಾರ್, ನಾಗರಾಜ್, ರಾಜೇಶ್, ಲಕ್ಷ್ಮಮ್ಮ ನಂಜಮ್ಮ, ಹೇಮಾವತಿ, ಗಾಯಿತ್ರಿ, ಪ್ರೇಮಮ್ಮರಾಧ ಹೋರಾಟದ ನೇತೃತ್ವ ವಹಿಸಿದ್ದರು.

ಮುಷ್ಕರಕ್ಕೆ ಹುಚ್ಚುಚ್ಚಾದ ಪ್ರತಿಕ್ರಿಯೆ....

ಪುಟ 6 ರಿಂದ

2005ರ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದರು. ಉದ್ಯೋಗನಷ್ಟಗಳು ಮುಂದುವರೆಯುತ್ತಿರುವುದು, ವಿಪರೀತ ನಿರುದ್ಯೋಗ ಹಾಗೂ ಬಡತನದ ವಿರುದ್ಧ ಪ್ರತಿಭಟಿಸಲು ಈ ಮುಷ್ಕರಕ್ಕೆ ಕರೆ ನೀಡಲಾಗಿತ್ತು.

● ಗ್ರೀಸ್‌ನಲ್ಲಿ ಜುಲೈ 26, 2005ರಂದು 24 ಗಂಟೆಗಳ ಸಾರ್ವತ್ರಿಕ ಮುಷ್ಕರದಲ್ಲಿ ಬೃಹತ್ ಪ್ರಮಾಣದ ಭಾಗವಹಿಸುವಿಕೆ ಕಂಡುಬಂತು. ಮನಬಂದಂತೆ ಬದಲಿಸಬಹುದಾದ ಕೆಲಸದ ಅವಧಿ ಹಾಗೂ ಓವರ್‌ಟೈಂ ಕೆಲಸಕ್ಕೆ ಸಂಬಳದಲ್ಲಿ ಬದಲಾವಣೆಗಳನ್ನು ತರುವ ಸರಕಾರದ ಪ್ರಯತ್ನಗಳ ವಿರುದ್ಧ ಹತ್ತು ಲಕ್ಷ ಕಾರ್ಮಿಕರು ಗ್ರೀಕ್ ಕಾರ್ಮಿಕ ಒಕ್ಕೂಟ ಜಿಎಸ್‌ಇಇಯ ಕರೆಯ ಮೇರೆಗೆ ಮುಷ್ಕರ ನಡೆಸಿದರು.

● ಫ್ರಾನ್ಸ್‌ನಲ್ಲಿ ಭಾರತದಲ್ಲಿ ಸಾರ್ವತ್ರಿಕ ಮುಷ್ಕರ ನಡೆದ ನಾಲ್ಕು ದಿನಗಳ ನಂತರ, ಅಕ್ಟೋಬರ್ 4, 2005ರಂದು ಒಂದು ಬೃಹತ್ ಮುಷ್ಕರ ನಡೆಯಿತು. ಈ ಮುಷ್ಕರ ಸಾರಿಗೆಯನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿತು. ಖಾಸಗೀಕರಣವನ್ನು, ಕಾರ್ಮಿಕ ಕಾನೂನುಗಳಲ್ಲಿ ಹೊಸ ಬದಲಾವಣೆಗಳನ್ನು ಹಾಗೂ ಸಣ್ಣ ಸಂಸ್ಥೆಗಳು ಮನಬಂದಂತೆ ಕಾರ್ಮಿಕರನ್ನು ನೇಮಿಸಿಕೊಳ್ಳಲು, ಕಿತ್ತುಹಾಕಲು ಅವಕಾಶ ನೀಡಿರುವುದನ್ನು ಪ್ರತಿಭಟಿಸಲು ಈ ಮುಷ್ಕರಕ್ಕೆ ಕರೆ ನೀಡಲಾಗಿತ್ತು. 150ಕ್ಕೂ ಹೆಚ್ಚು ಸ್ಥಳಗಳಲ್ಲಿ ಅಂದು ಸಾವಿರಾರು ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಬೆಂಬಲವಾಗಿ ಮೆರವಣಿಗೆ ನಡೆಸಿದರು.

● ಮೂರು ದಿನಗಳ ನಂತರ ಅಕ್ಟೋಬರ್ 7ರಂದು ಬೆಲ್ಜಿಯಂನಲ್ಲಿ ನಡೆದ ಸಾರ್ವತ್ರಿಕ ಮುಷ್ಕರ ಈ ಹನ್ನೆರಡು ವರ್ಷಗಳಲ್ಲೇ ಮೊದಲ ಸಾರ್ವತ್ರಿಕ ಮುಷ್ಕರವಾಗಿದ್ದು, ಇಡೀ ದೇಶವನ್ನು ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿತು. ಈ ಮುಷ್ಕರ ಸಾರಿಗೆ, ಶಾಲೆ, ಸರಕಾರಿ ಕಚೇರಿಗಳು, ಅಂಗಡಿಗಳು ಹಾಗೂ ಇತರ ಕೈಗಾರಿಕಾ ವಲಯವನ್ನು ತಟ್ಟಿತು.


● ದಕ್ಷಿಣಾ ಕೋರಿಯಾದಲ್ಲಿ ಏಪ್ರಿಲ್ 1, 2005ರಂದು 231 ಸಂಘಗಳ 1,68,000 ಕಾರ್ಮಿಕರು ನಾಲ್ಕು ಗಂಟೆಗಳ ಒಂದು ಎಚ್ಚರಿಕೆ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದರು. ತಾತ್ಕಾಲಿಕ ಕಾರ್ಮಿಕರ ಬಳಕೆಯ ವಿರುದ್ಧ ಹಾಗೂ ತಮ್ಮ ಹಕ್ಕುಗಳಿಗೆ ಬೆಂಬಲವಾಗಿ ಅವರು ಈ ಮುಷ್ಕರ ನಡೆಸಿದರು.

ಬೇರೆ ದೇಶಗಳಲ್ಲೂ ಇಂತಹ ಹಲವು ಮುಷ್ಕರಗಳಾಗಿವೆ. ಈ ಎಲ್ಲಾ ದೇಶಗಳಲ್ಲಿನ ಮುಷ್ಕರಗಳಿಗೆ ಕಾರಣವಾದ ಪ್ರಶ್ನೆಗಳಲ್ಲಿ ಹಲವು ನಮ್ಮ ದೇಶದ ಸೆಪ್ಟೆಂಬರ್ 29ರ ಸಾರ್ವತ್ರಿಕ ಮುಷ್ಕರದಲ್ಲಿ ಎತ್ತಿದ ಪ್ರಶ್ನೆಗಳಂತವೇ - ಉದ್ಯೋಗ ನಷ್ಟ, ಪೆನ್ಶನ್ ಸೌಲಭ್ಯಗಳಲ್ಲಿ ಕಡಿತ, ಕಾರ್ಮಿಕರ ಕಾನೂನುಗಳಲ್ಲಿ ಬದಲಾವಣೆ ಇತ್ಯಾದಿ.

ಕೋಟ್ಯಾಂತರ ಕಾರ್ಮಿಕರು, ನೌಕರರು ಭಾಗವಹಿಸಿದ ಮುಷ್ಕರ ಕಾರ್ಯಾಚರಣೆ ಯುಪಿಎ ಸರಕಾರದೊಂದಿಗೆ ಸೇಡು ತೀರಿಸಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ಬಳಸಿರುವ ಒಂದು ರಾಜಕೀಯ ಒತ್ತಡ ತಂತ್ರ ಎಂದು ಬಣ್ಣಿಸುವುದು ಕಾರ್ಮಿಕರಿಗಿದೆ, ಸರ್ಕಾರಿ ನೌಕರರಿಗೆ ಹಾಗೂ ದೇಶದ ದುಡಿಯುವ ಜನತೆಗೆ ಮಾಡಿರುವ ಅವಮಾನ.

ಇಂತಹ ಎಷ್ಟೇ ದೂಷಣೆಗಳನ್ನು ಹರಿಯಬಿಟ್ಟರೂ ಸಿಪಿಐ(ಎಂ) ಒಂದು ಉತ್ತಮ ಬದುಕಿಗಾಗಿ ಹೋರಾಟ ನಡೆಸಿರುವ ಕಾರ್ಮಿಕ ವರ್ಗ ಹಾಗೂ ದುಡಿಯುವ ಜನಗಳ ಇತರ ವಿಭಾಗಗಳಿಗೆ ಬೆಂಬಲವಾಗಿ ದೃಢವಾಗಿ ನಿಲ್ಲುವುದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಪ್ರತಿಭಟನೆಯ ಹಕ್ಕು ಮತ್ತು ಮುಷ್ಕರದ ಹಕ್ಕಿನ ಮೇಲೆ ಮಿತಿ ಹಾಕುವ ಎಲ್ಲಾ ಪ್ರಯತ್ನಗಳನ್ನು ದುಡಿಯುವ ಜನ ಹಿಮ್ಮೆಟ್ಟಿಸುತ್ತಾರೆ. **ಪ್ರಮುಖ ಮಾಧ್ಯಮಗಳು ರಾಷ್ಟ್ರೀಯ ಹಿತಾಸಕ್ತಿಗಳ ಹೆಸರಿನಲ್ಲಿ ಮುಷ್ಕರವನ್ನು ದಮನ ಮಾಡಲು ಸುಮಾರಾಗಿ ಸರ್ವಾಧಿಕಾರಶಾಹಿ ಕ್ರಮಗಳನ್ನೆ ಪ್ರತಿಪಾದಿಸುತ್ತಿವೆ. ಹೀಗೆ ಮಾಡುವಾಗ ವಾಸ್ತವವಾಗಿ ಅವು ಮಾಡುತ್ತಿರುವುದು ದೊಡ್ಡ ಬಂಡವಾಳಿಗರ ಹಿತಾಸಕ್ತಿಗಳ ರಕ್ಷಣೆಯನ್ನು.** ಇದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಾಯಕಾರಿ. ಈ ಮಹತ್ವಪೂರ್ಣ ಪ್ರತಿಭಟನಾ ಕಾರ್ಯಾಚರಣೆಯ ಮೂಲಕ ವ್ಯಕ್ತಪಡಿಸಿದ ಸಂದೇಶವನ್ನು ಅರ್ಥ ಮಾಡಿಕೊಳ್ಳುವುದು ಆಳುವ ವಲಯಗಳಿಗೆ ಒಳ್ಳೆಯದು.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಹೂಡಿಕೆ ಭಾರತದ ಹಿತಾಸಕ್ತಿಯಲ್ಲ - ಎಂ.ಕೆ.ಪಂಧೆ



ಯುಪಿಎ ಸರ್ಕಾರ ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಹೂಡಿಕೆಗೆ ಅನುಮತಿ ನೀಡಿರುವುದರಿಂದ ಇಲ್ಲಿನ ಲಕ್ಷಾಂತರ ಚಿಲ್ಲರೆ ವ್ಯಾಪಾರಿಗಳ ಬದುಕನ್ನು ಕಷ್ಟಕರಗೊಳಿಸಲಿದೆ. ಈ ಚಿಲ್ಲರೆ ವ್ಯಾಪಾರಿಗಳು ಜನ ಸಾಮಾನ್ಯರಿಗೆ ಜೀವನಾವಶ್ಯಕ ವಸ್ತುಗಳನ್ನು ವಿತರಿಸುವ ಕೆಲಸ ಮಾಡುತ್ತಾರೆ. ಸಗಟು ವ್ಯಾಪಾರಸ್ಥರು ಈ ವ್ಯವಹಾರದ ಬಹುತೇಕ ಲಾಭವನ್ನು ಗಿಟ್ಟಿಸುತ್ತಾರೆ. ಇವರು ಬೆಲೆಗಳನ್ನು ಏರಿಳಿಸಿ ಸಟ್ಟಾ ವ್ಯವಹಾರ ಮಾಡಿ ಲಾಭ ಗಳಿಸುತ್ತಾರೆ. ಇದನ್ನು ನಿಯಂತ್ರಿಸುವ ಅವಶ್ಯಕತೆ ಖಂಡಿತ ಇದೆ. ಹೀಗೆ ನಿಯಂತ್ರಿಸಿದರೆ ಅವಶ್ಯಕ ವಸ್ತುಗಳನ್ನು ಸುಲಭ ಬೆಲೆಗೆ ಪೂರೈಸಬಹುದು. ಯುಪಿಎ ಸರ್ಕಾರ ಪಟ್ಟಭದ್ರ ಹಿತಾಸಕ್ತಿಗಳನ್ನು ನಿಯಂತ್ರಿಸುವ ಕೆಲಸ ಮಾಡಬೇಕು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಇನ್ನೂ ಬಲಗೊಳಿಸಬೇಕು.

ಈ ಕ್ಷೇತ್ರದಲ್ಲಿ ವಿದೇಶೀ ನೇರ ಹೂಡಿಕೆಗೆ ಅನುವು ಮಾಡಿಕೊಟ್ಟರೆ ಅದರಿಂದ ಜನಹಿತ ಕೆಡುತ್ತದೆ. ಬಹುರಾಷ್ಟ್ರೀಯ ಕಂಪನಿಗಳ ಏಕಸ್ವಾಮ್ಯತೆಗೆ ಇದು ಅನುವು ಮಾಡಿ ಕೊಡುತ್ತದೆ. ಬೆಲೆಗಳನ್ನು ಇದು ಪ್ರಭಾವಿಸುವುದರಿಂದ ಬೆಲೆಗಳು ಏರು ಪೇರಾಗುತ್ತದೆ. ಅಮೇರಿಕ ಮತ್ತು ಯುರೋಪಿನ ದೇಶಗಳಲ್ಲಿನ ಅನುಭವವೇನೆಂದರೆ ಈ ಚಿಲ್ಲರೆ ವ್ಯಾಪಾರದ ದೈತ್ಯ ಕಂಪನಿಗಳು ಚಿಲ್ಲರೆ ವ್ಯಾಪಾರಸ್ಥರ ಜೀವನೋಪಾಯವನ್ನೇ ತಿಂದು ಹಾಕಿ ಜನರನ್ನು ನೆಲೆಯಿಲ್ಲದವರನ್ನಾಗಿ ಮಾಡಿದವು. ಇವರು ಈ ಕಂಪನಿಗಳ ಕಡಿಮೆ ಸಂಬಳದ ಕೆಲಸಗಾರರಾದರು.

ವಾಲ್ ಮಾರ್ಟ್ ಎಂಬ ಚಿಲ್ಲರೆ ವ್ಯಾಪಾರಗಳ ಕಂಪನಿಯನ್ನೇ ತೆಗೆದುಕೊಳ್ಳಿ. ಇದು ಹತ್ತು ಹನ್ನೆರಡು ದೇಶಗಳಲ್ಲಿ ಐದು ಸಾವಿರಕ್ಕೂ ಹೆಚ್ಚು ಅಂಗಡಿಗಳನ್ನು ನಡೆಸುತ್ತಿದೆ. 'ಟೈಮ್ಸ್ ನ್ಯೂಸ್ ನೆಟ್‌ವರ್ಕ್ಸ್' ಹೇಳುವಂತೆ ಇದು ಅಮೇರಿಕದಲ್ಲಿ ಹದಿನೈದು ಲಕ್ಷದಷ್ಟು ಕೆಲಸಗಾರರಿಗೆ ಕೆಲಸ ನೀಡಿದೆ. ಅಮೇರಿಕದ ಡಾಲರ್ ವ್ಯವಹಾರದ ಶೇ.9 ರಷ್ಟನ್ನು ಈ ಕಂಪನಿ ಮಾಡುತ್ತಿದೆ. ದೇಶದ ದಿನಸಿ, ಔಷಧಿ ಇತ್ಯಾದಿಗಳ ಶೇ.20 ರಷ್ಟನ್ನು ಇದು ಮಾರುತ್ತದೆ. ಇದು ಕೆನಡಾದ ಶೇ.52 ರಷ್ಟು ಚಿಲ್ಲರೆ ಮಾರುಕಟ್ಟೆಯನ್ನು ಹಿಡಿದಿದೆ.

ಈಗ ಭಾರತದ ಚಿಲ್ಲರೆ ಮಾರುಕಟ್ಟೆಯನ್ನು ಅದು ಹಿಡಿದು ವಿದೇಶೀ ವಸ್ತುಗಳನ್ನು ಅತಿ ಅಗ್ಗದ ಬೆಲೆಗೆ ಮಾರಬಯಸುತ್ತದೆ. ಆ ಮೂಲಕ ಲಕ್ಷಾಂತರ ಜನರ ಜೀವನೋಪಾಯಕ್ಕೆ ಕಲ್ಲು ಹಾಕಬಯಸುತ್ತದೆ. ಈ ಕಂಪನಿ ಕಾರ್ಮಿಕ ವಿರೋಧಿ ನೀತಿಗಳಿಗೂ ಹೆಸರುವಾಸಿ. ಸರ್ಕಾರಗಳು ಕಾರ್ಮಿಕ ಕಾನೂನುಗಳನ್ನೇ ತರದಂತೆ ತಡೆಯುವಷ್ಟು ಹಣವೂ ಈ ಕಂಪನಿಯ ಕೈಯಲ್ಲಿದೆ. ಉಳಿದ ಚಿಲ್ಲರೆ ವ್ಯಾಪಾರದ ಕಂಪನಿಗಳೂ ಇಂತಹದೇ ನೀತಿಗಳನ್ನು ಹೊಂದಿವೆ. ಆದ್ದರಿಂದಲೇ ಎಡಪಕ್ಷಗಳು ಈ ವಿದೇಶೀ ನೇರ ಹೂಡಿಕೆಯನ್ನು ತೀವ್ರವಾಗಿ ವಿರೋಧಿಸುತ್ತಿರುವುದು

○

ಇಂದಬೆಟ್ಟು - ನಾವೂರು : ಒಕ್ಕಲೆಬ್ಬಿಸುವಿಕೆಯ ವಿರುದ್ಧ ಒಂದಾದ ಜನತೆಯ ಸಂಘರ್ಷ

ಬೆಳ್ತಂಗಡಿ ತಾಲ್ಲೂಕಿನ ನಾವೂರಿನ ಸಮೀಪದ ಅರಣ್ಯ ಪ್ರದೇಶದ ಆದಿವಾಸಿಗಳು ಕುದುರೆಮುಖ ರಾಷ್ಟ್ರೀಯ ಉದ್ಯಾನದ ಕಾರಣಕ್ಕಾಗಿ ತಮ್ಮನ್ನು ಒಕ್ಕಲೆಬ್ಬಿಸುವ ಸರ್ಕಾರದ ಪ್ರಯತ್ನಗಳ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಚಳುವಳಿಗೆ ಮುಂದಾಗಿದ್ದಾರೆ. ತಮ್ಮ ಪರವಾಗಿ 'ಕ್ರಾಂತಿಕಾರಿ' ಚಳುವಳಿ ನಡೆಸುವ ನಕ್ಸಲೀಯರ ಭ್ರಾಮಕ ಮಾತುಗಳನ್ನು-ದುಸ್ಸಾಹಸವಾದಿ ದಾರಿಯನ್ನು ತಿರಸ್ಕರಿಸಿರುವ ಈ ಜನರು ಸಿಪಿಐ(ಎಂ) ನೇತೃತ್ವದಲ್ಲಿ ತಾವೇ ಚಳುವಳಿಗೆ ಮುಂದಾಗಿರುವುದು ಗಮನಾರ್ಹವಾಗಿದೆ. ಇದರ ಜೊತೆಗೆ ಇಂದಬೆಟ್ಟು - ನಾವೂರು ಗ್ರಾಮಗಳ ಜನರ ನಿವೇಶನ, ಕೃಷಿಭೂಮಿ ಹಕ್ಕು ಪತ್ರದ ಪ್ರಶ್ನೆ - ಗ್ರಾಮಗಳ ಕುಡಿಯುವ ನೀರಿನ ಪ್ರಶ್ನೆಗಳ ಆಧಾರದಲ್ಲಿ ನಡೆಯುತ್ತಿರುವ ಚಳುವಳಿಯ ವರದಿ ಇದು.

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಇಂದಬೆಟ್ಟ - ನಾವೂರು ಎಂಬೆರಡು ಗ್ರಾಮಗಳು. ನಾವೂರು ಗ್ರಾಮದ ಬಳಿಯ ಮಲ್ಲ ಎಂಬ ಅರಣ್ಯ ಪ್ರದೇಶದಲ್ಲಿ ತಲತಲಾಂತರದಿಂದ ಆದಿವಾಸಿ ಕೊರಗ-ಮಲೆಕುಡಿಯರ ಹಲವು ಕುಟುಂಬಗಳು ವಾಸಿಸುತ್ತಿವೆ. ಈಗ ಅವು ಸುಮಾರು ನಲವತ್ತು ಕುಟುಂಬಗಳಾಗಿವೆ. ರಾಷ್ಟ್ರೀಯ ಉದ್ಯಾನದ ಗುಮ್ಮ ಇವರ ಬದುಕನ್ನೇ ತಿನ್ನುತ್ತಿದೆ. ಈ ಕುಟುಂಬಗಳು ಈ ಜಾಗ ತೊರೆದು ಹೋಗಬೇಕು ಎಂದು ಸರ್ಕಾರ ಒತ್ತಾಯಿಸುತ್ತಿದೆ. ಎಷ್ಟೆಷ್ಟೊ ವರ್ಷಗಳಿಂದ ಇಲ್ಲಿ ವಾಸಿಸುತ್ತಿರುವ ಈ ಆದಿವಾಸಿ ಜನತೆ ಎಲ್ಲಿಗೆ ಹೋಗಬೇಕು? ಏನು ಮಾಡಬೇಕು? ನಿಂತ ನೆಲ ಬಾಯ್ಬಿಟ್ಟಂತಹ ಅನುಭವ ಅವರದ್ದು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸರ್ಕಾರ ಒಕ್ಕಲೆಬ್ಬಿಸುತ್ತಿರುವ ಈ ಜನತೆಯನ್ನು ಸಂಘಟಿಸಿತು. ಈ ನೊಂದ ಜನತೆಯ ಕೈಯಲ್ಲೀಗ ಕೆಂಬಾವುಟ.

ಇದೇ ಇಂದಬೆಟ್ಟು ನಾವೂರು ಗ್ರಾಮಗಳಲ್ಲಿರುವ ಇತರ ಸುಮಾರು 250 ಕುಟುಂಬಗಳು ಹತ್ತಾರು ವರ್ಷಗಳಿಂದ ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡಿವೆ. ಈ ಸಾಗುವಳಿ ಭೂಮಿಗೆ ಹಕ್ಕು ಪತ್ರ ನೀಡಬೇಕೆಂಬುದು ಈ ಜನರ ಹಳೆಯ ಬೇಡಿಕೆ. 'ಉಳುವವನಿಗೆ ಭೂಮಿ' ಎಂಬ ಘೋಷಣೆ ಕೊಟ್ಟ ಪಕ್ಷವು ಆ ಘೋಷಣೆಯನ್ನೇ ಮರೆತಿದೆ. ಸ್ವಾತಂತ್ರ್ಯ ಪೂರ್ವದಲ್ಲೇ ರೈತರ ಭೂಮಿ ಹಕ್ಕಿಗಾಗಿ ಧೀರೋದಾತ್ತ ಚಳುವಳಿ ಮಾಡಿದ ಕಮ್ಯುನಿಸ್ಟ್ ಪಕ್ಷದ ಪರಂಪರೆಯ - ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಡರೈತರ ಬದುಕಿನ ಈ ಪ್ರಶ್ನೆಯನ್ನು ಕೈಗೆತ್ತಿಕೊಂಡಿದೆ. ಭೂಮಿ ಮಾತ್ರವಲ್ಲ ರೇಷನ್ ವ್ಯವಸ್ಥೆಯ ಸಮಸ್ಯೆ - ಹಾಳಾದ ರಸ್ತೆಗಳ ಪ್ರಶ್ನೆಯೂ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿನ ಚುನಾಯಿತ ಇಂದಬೆಟ್ಟ ಗ್ರಾಮ ಪಂಚಾಯ್ತಿ ಕುಡಿಯುವ ನೀರಿನ ವ್ಯಾಪಾರ ಆರಂಭಿಸಿರುವುದು ಜನರ ದೊಡ್ಡ ಸಮಸ್ಯೆಯಾಗಿದೆ. ಇದುವರೆಗೆ ಈ ಗ್ರಾಮಗಳಲ್ಲಿ ಸಾರ್ವಜನಿಕ ನಲ್ಲಿಯ ಮೂಲಕ ಕುಡಿಯುವ ನೀರು ಪೂರೈಕೆಯಾಗುತ್ತಿತ್ತು. ಎಷ್ಟೆಲ್ಲಾ ವಿರೋಧದ ನಂತರವೂ ಪಂಚಾಯ್ತಿಯಲ್ಲಿ ಬೀದಿ ನಲ್ಲಿಗಳನ್ನು ಕಿತ್ತುಹಾಕಲು ನಿರ್ಧರಿಸಲಾಗಿತ್ತು. ಗ್ರಾಮಗಳಲ್ಲಿ ಮನೆ ಮನೆಗೆ ನಲ್ಲಿ ಹಾಕಿಸಿಕೊಳ್ಳಿ ಎನ್ನುತ್ತದೆ ಪಂಚಾಯ್ತಿ. ಅದಕ್ಕೆ ಶುಲ್ಕ ತೆರುವವರು ಯಾರು? ಗ್ರಾಮ ಪಂಚಾಯ್ತಿಯ ಜವಾಬ್ದಾರಿ ಏನು? ಗ್ರಾಮ ಸಭೆ ನಡೆಸಿ ಜನರಿಗೆ ಇಲ್ಲದ ಭ್ರಮೆ ಹುಟ್ಟಿಸಿ ಬೀದಿ ನಲ್ಲಿ ಬಂದ್ ಮಾಡುವ ಬಗ್ಗೆ ಗ್ರಾಮ ಸಭೆಯ ಒಪ್ಪಿಗೆ ಪಡೆದುಕೊಂಡಿರುವುದನ್ನೇ ಇಟ್ಟುಕೊಂಡು ಈಗಲೂ ಗ್ರಾಮ ಪಂಚಾಯ್ತಿಯು ಮೊಂಡಾಟ ಮಾಡುತ್ತಿದೆ. ಈ ಎಲ್ಲ ಪ್ರಶ್ನೆಗಳ ಆಧಾರದಲ್ಲಿ ಸಿಪಿಐ(ಎಂ) ತೀವ್ರ ಚಳುವಳಿಗೆ ಮುಂದಾಗಿದೆ.

ಪಕ್ಷದ ನಾವೂರು ಶಾಖೆ 10 ದಿನಗಳ ಮುಂಚಿತವಾಗಿ ಪಂಚಾಯತ್‌ಗೆ ಆದಿವಾಸಿಗಳು, ರೈತರು, ಜನರ ಸಮಸ್ಯೆಗಳ ಬಗೆಗೆ ಪತ್ರನೀಡಿ ಬೇಡಿಕೆ ಈಡೇರದಿದ್ದಲ್ಲಿ ಪಂಚಾಯತ್‌ಗೆ ಸೆಪ್ಟೆಂಬರ್ 21ರಂದು ಮುತ್ತಿಗೆ ಹಾಕಲಾಗುತ್ತದೆ ಎಂದು ಎಚ್ಚರಿಸಿತ್ತು. ಆದರೆ ತಮ್ಮ ಮತದಾರರ ಸಮಸ್ಯೆಗೆ ಸ್ಪಂದಿಸುವ ಅಥವಾ ಉತ್ತರಿಸುವ ಸೌಜನ್ಯ ತೋರದೆ ಪ್ರತಿಭಟನೆಯಂದು ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷರೂ ಸೇರಿದಂತೆ ಎಲ್ಲಾ ಸದಸ್ಯರು (ಬಿಜೆಪಿ, ಕಾಂಗ್ರೆಸ್, ಜೆಡಿಎಸ್) ತರಬೇತಿಗೆಂದು ನೆಪಹೇಳಿ ಗೈರು ಹಾಜರಾಗಿದ್ದರು.

ಅಂದು ಬೆಳಿಗ್ಗೆ 10 ಗಂಟೆಗೆ ನೂರಾರು ಗ್ರಾಮಸ್ಥರು ಪಕ್ಷದ ನೇತೃತ್ವದಲ್ಲಿ ಪಂಚಾಯತ್ ಕಚೇರಿಗೆ ತೆರಳಿ ಮುತ್ತಿಗೆ ಹಾಕಿದರು. ಆದರೆ ಆ ಸಮಯದಲ್ಲಿ ಕಚೇರಿಯಲ್ಲಿ ಪಂಚಾಯತ್ ಕಾರ್ಯದರ್ಶಿ ಸೇರಿದಂತೆ ನೌಕರರು ಮಾತ್ರ ಇದ್ದುದು ಪ್ರತಿಭಟನಾಕಾರರ ಆಕ್ರೋಶಕ್ಕೆ ಕಾರಣವಾಯಿತು. ಪಂಚಾಯತ್ ಆಡಳಿತ ತಮ್ಮ ಬೇಡಿಕೆ ಈಡೇರಿಸದ ಹೊರತು ಸ್ಥಳದಿಂದ ಹೋಗುವುದಿಲ್ಲ ಎಂದು ಪಟ್ಟುಹಿಡಿದು ಪಂಚಾಯತ್ ಆವಣರದಲ್ಲಿ ಅನ್ನ ಬೇಯಿಸಿ ಊಟ ಮಾಡಿ ಪ್ರತಿಭಟನೆ ಮುಂದುವರಿಯಿತು. ಅನ್ನ ಬೇಯಿಸಲು ಮಾಡಿದ ಒಲೆಯ ಕಲ್ಲುಗಳನ್ನೇ ಸೇರಿಸಿ ಅಲ್ಲಿಯೇ 'ಪಂಚಾಯತ್ ಸದಸ್ಯರ ಸಮಾಧಿ' ನಿರ್ಮಿಸಿ ನಾಮಫಲಕ ಹಾಕಿದ ಪ್ರತಿಭಟನಾಕಾರರು ಸಮಾಧಿಯ ಅಡಿಗಲ್ಲು ಹಾಕಲು ಪಂಚಾಯತ್ ಕಾರ್ಯದರ್ಶಿಯನ್ನೇ ಆಹ್ವಾನಿಸಿದರು. ಈ ರೀತಿ ತಮ್ಮ ಹೋರಾಟವನ್ನು ವಿಶಿಷ್ಟ ರೀತಿಯಲ್ಲಿ ತೀವ್ರಗೊಳಿಸತೊಡಗಿದರು. ಇದರಿಂದಾಗಿ ಹೋರಾಟ ತೀವ್ರಗೊಳ್ಳುವ ಮುನ್ಸೂಚನೆಯನ್ನರಿತ ಪೊಲೀಸ್ ಅಧಿಕಾರಿಗಳು ಪಂಚಾಯತ್ ಸದಸ್ಯರ ತರಬೇತಿ ನಡೆಯುವ ಸ್ಥಳಕ್ಕೆ (ಬೆಳ್ತಂಗಡಿ) ಆಗಮಿಸಿ, ಇಂದಬೆಟ್ಟು ಪಂಚಾಯತ್ ಸದಸ್ಯರು ತಕ್ಷಣ ಇಲ್ಲಿಂದ ಹೋಗಬೇಕು ಮಾತ್ರವಲ್ಲದೆ ಪ್ರತಿಭಟನಾಕಾರರ ಅಹವಾಲು ಸ್ವೀಕರಿಸಿ, ಶಾಂತಿ ಕಾಪಾಡಬೇಕು ಎಂದು ಒತ್ತಾಯ ಮಾಡಿದ್ದಾರೆ.

ಅನಂತರ ತರಬೇತಿ ಕೇಂದ್ರದಿಂದ ಹೊರಟ ಪಂಚಾಯತ್ ಸದಸ್ಯರು ಅರ್ಧಗಂಟೆಯ ದಾರಿಯನ್ನು ಕ್ರಮಿಸಲು 2 ಗಂಟೆ ತೆಗೆದುಕೊಂಡು ಸಂಜೆ 5.30ಕ್ಕೆ ಪಂಚಾಯತ್ ಕಚೇರಿಗೆ ಸುಮಾರು 30ರಷ್ಟು ಗೂಂಡಾಗಳನ್ನು ಅಮಲು ಕುಡಿಸಿ, ಅವರ ಬೆಂಗಾವಲಿನೊಂದಿಗೆ ಹಾಜರಾದರು. ಮಾತ್ರವಲ್ಲದೆ ಅನಗತ್ಯವಾಗಿ ಪ್ರತಿಭಟನಾಕಾರರೊಂದಿಗೆ ಕಾಲುಕೆರೆದು ಜಗಳಕ್ಕೆ ನಿಂತರು. ಪ್ರತಿಭಟನಾಕಾರರ ಯಾವುದೇ ಬೇಡಿಕೆಗಳ ಬಗ್ಗೆ ಮಾತನಾಡದೆ ಅವಾಚ್ಯವಾಗಿ ಪಂಚಾಯತ್ ಸದಸ್ಯರು ನಿಂದಿಸಿದರು. ಪ್ರತಿಭಟನಾಕಾರರ ಯಾವುದೇ ಪ್ರಶ್ನೆಗಳಿಗೆ ಉತ್ತರಿಸಲು ಅಸಾಧ್ಯವಾದ ಪಂಚಾಯತ್ ಸದಸ್ಯರು ಗೂಂಡಾಗಳಿಂದ ಪ್ರತಿಭಟನೆಯನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸಿದರು. ಸಿಪಿಐ(ಎಂ) ಪಕ್ಷದವರು ನಮ್ಮ ಪಂಚಾಯತ್‌ನಲ್ಲಿ ಪ್ರತಿಭಟನೆ ಮಾಡಬಾರದು, ಕೆಂಬಾವುಟ ಹಿಡಿಯಬಾರದು, ಪಕ್ಷದ ಮುಖಂಡರು ಈ ಕಡೆ ಬರಬಾರದು, ಎಂದೆಲ್ಲ ಸಂವಿಧಾನ ಬಾಹಿರವಾಗಿ ಹೇಳುತ್ತಾ ಗೂಂಡಾಗಳೊಂದಿಗೆ ಕೈ ಜೋಡಿಸಿ ಕೊನೆಗೆ ತಾವೇ ಅಪಹಾಸ್ಯಕ್ಕೀಡಾದರು.

ಜನರ ಸಮಸ್ಯೆಗಳಿಗೆ ಸ್ಪಂದಿಸುವ ಹಿತವಚನದೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಗಳಿಸಿ ಇದೀಗ ಜನ ವಿರೋಧಿಯಾಗಿ ಮಾತ್ರವಲ್ಲದೆ ಗೂಂಡಾ ಸಂಸತಿಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಇಂದಬೆಟ್ಟು ಗ್ರಾಮ ಪಂಚಾಯತ್ ಆಡಳಿತದ ವಿರುದ್ಧ ಬೆಳ್ತಂಗಡಿ ತಾಲೂಕು ಪಂಚಾಯತ್ ಕಚೇರಿ ಎದುರು ಪ್ರತಿಭಟನೆ ಮಾಡುವ ತೀರ್ಮಾನದೊಂದಿಗೆ ಸಂಜೆ 6.30ಕ್ಕೆ ಹೋರಾಟವನ್ನು ತಾತ್ಕಾಲಿಕವಾಗಿ ಹಿಂತೆಗೆಯಲಾಯಿತು. ಸಿಪಿಐ(ಎಂ) ನೇತೃತ್ವದ ಈ ಚಳುವಳಿಯಿಂದಾಗಿ ಈಗ ಗ್ರಾಮಗಳ ಸಾರ್ವಜನಿಕ ನಲ್ಲಿ ಬಂದ್ ಮಾಡುವ ಗ್ರಾಮ ಪಂಚಾಯತ್‌ನ ಕನಸು ಕೈಗೂಡಿಲ್ಲ. ಇದು ಹೋರಾಟದ ಭಾಗಶಃ ಯಶಸ್ಸು. ಇದೇ ರೀತಿ ಭೂಮಿ-ಆಹಾರದ ಪ್ರಶ್ನೆಯ ಮೇಲೆ ಸಹ ಚಳುವಳಿ ಮುಂದುವರಿಸಲು ಪಕ್ಷ ತೀರ್ಮಾನಿಸಿದೆ.

ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಕಾ|| ಬಿ.ಯಂ.ಭಟ್, ತಾಲ್ಲೂಕು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ||ಹಮೀದ್ ನಾವೂರು, ಕಾ||ಜಯರಾಂ, ಸಿಐಟಿಯು ರಾಜ್ಯಸಮಿತಿ ಸದಸ್ಯೆ ಕಾ||ಗೀತಾ ಪದ್ಮುಂಜ, ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ವಸಂತ ನಡ, ನಾರಾಯಣ ಕೈಕಂಬ, ಉಸ್ಮಾನ್ ಹಾಗೂ ಇತರರು ವಹಿಸಿದ್ದರು.

ಗೂಂಡಾ ಸಂಸತಿಯಿಂದ ಹಿಂದೆ ಸರಿಯದ ರಾಜಕೀಯ ಪಕ್ಷಗಳು

ಬೆಳ್ತಂಗಡಿ ತಾಲೂಕಿನಾದ್ಯಂತ ಸಿಪಿಐಎಂ ಪಕ್ಷ ಬಲಗೊಳ್ಳುತ್ತಿದೆ. ಹೀಗಾಗಿ ಸಿಪಿಐ(ಎಂ) ವಿರುದ್ಧ ಸಮರ ಸಾರಲು ಎಲ್ಲಾ ಪಕ್ಷಗಳು ಒಂದಾಗಿವೆ, ಆಗುತ್ತಿವೆ. ಇಂದಬೆಟ್ಟುವಿನಲ್ಲಿಯೂ ಸಿಪಿಐ(ಎಂ)ನ ಹೋರಾಟ ತಡೆಯಲು ಕಾಂಗ್ರೆಸ್, ಬಿಜೆಪಿ, ಜೆ.ಡಿ(ಎಸ್) ಪಕ್ಷಗಳು ಒಂದಾಗಿವೆ. ಈ 3 ಪಕ್ಷಗಳು ಗೂಂಡಾ ಸಂಸತಿಯಿಂದ ಹಿಂದೆ ಸರಿದಿಲ್ಲ ಎನ್ನುವುದಕ್ಕೆ ಮೇಲಿನ ಘಟನೆಯು ಸಾಕ್ಷಿಯಾಗಿದೆ. ಆದರೆ ಜನತೆಯ ಹಕ್ಕಿಗಾಗಿ ಹೋರಾಟ ಮಾಡುವವರನ್ನು ಬೆದರಿಸುವ, ಧ್ವನಿಯಡಗಿಸುವ ಪ್ರಯತ್ನ ಇದಾಗಿದ್ದು ಗೂಂಡಾ ಸಂಸತಿಗೆ ಬೆದರಿ ಜನಪರ ಹೋರಾಟ ಕೈಬಿಡುವ ಪ್ರಶ್ನೆಯೇ ಇಲ್ಲ ಎಂಬ ದೃಢವಾದ ನಿಲುವನ್ನು ಸಿಪಿಐ(ಎಂ) ತೋರುತ್ತಿದೆ.

ಪತ್ರಿಕಾಗೋಷ್ಠಿ ಕರೆದರು, ತಾವೇ ಬೆತ್ತಲಾದರು

ಘಟನೆಯ ವಾಸ್ತವಾಂಶವನ್ನು ಮರೆಮಾಚಿ ಪತ್ರಿಕೆಗಳ ಮೂಲಕ ಸುಳ್ಳು ವಿಚಾರಗಳ ವರದಿ ಮಾಡಿಸಿ, ತಮ್ಮ ಮುಖ ಉಳಿಸಿಕೊಳ್ಳಲು ಇತ್ತೀಚಿಗೆ ಬೆಳ್ತಂಗಡಿಯಲ್ಲಿ ಇಂದಬೆಟ್ಟು ಪಂಚಾಯತ್ ಸದಸ್ಯರು ಪತ್ರಿಕಾಗೋಷ್ಠಿ ಕರೆದರು. ಈ ಸಂದರ್ಭದಲ್ಲಿ ವಾಸ್ತವ ಸಂಗತಿಯ ಅರಿವಿದ್ದ ಪತ್ರಕರ್ತರು ಪ್ರಶ್ನಿಸಲಾರಂಭಿಸಿದಂತೆ ಸ್ಥಿಮಿತ ಕಳೆದುಕೊಂಡಂತೆ ವರ್ತಿಸಿ, ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಲು ಅಸಾಧ್ಯವಾದಾಗ "ನಾವು ಹೊಸಬರು, ನಮಗೇನು ಗೊತ್ತಿಲ್ಲ, ಆದದ್ದು ಆಯ್ತು, ಇನ್ನು ಈ ರೀತಿ ಮಾಡುವುದಿಲ್ಲ" ಎಂದು ಗೋಗರೆದು ತಾವೇ ಬೆತ್ತಲಾದುದು ಗುಟ್ಟಾಗಿ ಉಳಿದಿಲ್ಲ.

○

ಸಾಮಾನ್ಯ ಸಭೆಯಲ್ಲಿ ಚವೇಝ್ ಗುಡುಗು

'ಹೊಸ ಜಾಗದಲ್ಲಿ ಹೊಸ ವಿಶ್ವಸಂಸ್ಥೆ ಬೇಕು !'


ವೆನೆಜುವೆಲಾದ ಅಧ್ಯಕ್ಷ ಹ್ಯೂಗೋ ಚವೇಝ್ ವಿಶ್ವಸಂಸ್ಥೆ ಸಾಮಾನ್ಯಸಭೆಯಲ್ಲಿ ಸೆಪ್ಟೆಂಬರ್ 15, 2005 ರಂದು ಮಹತ್ವದ ಭಾಷಣ ಮಾಡಿದ್ದಾರೆ. ವಿಶ್ವಸಂಸ್ಥೆಯಲ್ಲಿ ಸುಧಾರಣೆಗಳ ಬಗ್ಗೆ ವಿಶೇಷ ಗಮನ ಹರಿಸಿದ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ, ಈಗ ಪ್ರಸ್ತಾಪಿಸಲಾಗಿರುವ ಕೇವಲ ಸುಧಾರಣೆಗಳಿಂದ ವಿಶ್ವಸಂಸ್ಥೆ 21ನೇ ಶತಮಾನದ ಸವಾಲುಗಳನ್ನು ಎದುರಿಸಲು ಸಾಧ್ಯವಿಲ್ಲ. ಸಂಪೂರ್ಣವಾಗಿ ಹೊಸ ಸ್ವರೂಪದ ವಿಶ್ವಸಂಸ್ಥೆ ಬೇಕು. ಈ ಹೊಸ ವಿಶ್ವಸಂಸ್ಥೆ ನ್ಯೂಯಾರ್ಕ್‌ನಿಂದ ಹೊರಬಂದು, ಮೂರನೇ ಜಗತ್ತಿನ ದೇಶವೊಂದರಲ್ಲಿ ಹೊಸ ಅಂತರ್ರಾಷ್ಟ್ರೀಯ ನಗರದಲ್ಲಿ ಇರಬೇಕು ಎಂಬ ಕ್ರಾಂತಿಕಾರಕ ಹೊಸ ಪ್ರಸ್ತಾವ ಇಟ್ಟಿದ್ದಾರೆ. ಚವೇಝರ ಮಹತ್ವದ ಭಾಷಣದ ಸಾರಾಂಶ ಮತ್ತು ಆಯ್ದ ಭಾಗಗಳು.

ವಿಶ್ವಸಂಸ್ಥೆಯ ಉದ್ದೇಶಗಳ ಈಡೇರುವಿಕೆಯ ವಿಮರ್ಶೆಯ ಬದಲು, 'ಸುಧಾರಣೆ'ಗಳ ಬಗೆಗಿನ ಪ್ರಸ್ತಾವಗಳ ಬಗ್ಗೆ ಚರ್ಚೆಗೆ ದಾರಿ ತಪ್ಪಿದೆ ಎಂದು ಚವೇಝ್ ಭಾಷಣ ಆರಂಭಿಸಿದರು. 5 ವರ್ಷಗಳ ಹಿಂದೆ ಎರಡನೇ ಸಹಸ್ರಮಾನದ ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಿದ ಉದ್ದೇಶಗಳಲ್ಲಿ ಕೇವಲ ಎರಡನ್ನು (ಹಸಿವು ನಿವಾರಣೆ ಮತ್ತು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ) ಪ್ರಸ್ತಾಪಿಸಿ, ಇಂದಿನ ಅದರ ಜಾರಿಯ ಪರಿಸ್ಥಿತಿಯ ಬಗ್ಗೆ ಅವರು ಗಮನ ಸೆಳೆದರು. ಇಡೀ ಜಗತ್ತಿನ ಜನತೆಯ ಆದ್ಯತೆಯಾದ ಈ ಗುರಿಗಳ ಸಾಧನೆಯ ವಿಧಿ-ವಿಧಾನಗಳ ಬಗ್ಗೆ ಚರ್ಚೆ ನಡೆಸಬೇಕು ಎಂದರು. ಈ ಗುರಿಗಳ ಸಾಧನೆಯ ಪ್ರಗತಿ ನೋಡಿದರೆ, ವಿಶ್ವಸಂಸ್ಥೆಯ ಈಗಿನ ಸಂಘಟನಾ ಸ್ವರೂಪದಿಂದ ಇದು ಸಾಧ್ಯವಿಲ್ಲ. 21ನೇ ಶತಮಾನದ ಅಗತ್ಯಗಳಿಗೆ ಬೇಕಾದ ಹೊಸ ಸಂಘಟನಾ ಸ್ವರೂಪದ ಹೊಸ ವಿಶ್ವಸಂಸ್ಥೆ ಇಂದಿನ ಅಗತ್ಯ. ಇದನ್ನು ಎರಡು ಹಂತಗಳಲ್ಲಿ ಸಾಧಿಸಬೇಕಾಗಿದೆ.

ಮೊದಲನೆಯದೇ ಈಗಿನ ಸ್ವರೂಪದಲ್ಲಿ ಪ್ರಮುಖ ಸುಧಾರಣೆಗಳನ್ನು ತರುವುದರ ಮೂಲಕ, ಎರಡನೆಯದು ದೂರಗಾಮಿ ಯೋಜನೆ, ವಿಶ್ವ ಸಾಮಾಜಿಕ ವೇದಿಕೆಯಲ್ಲಿ ಬಂದ ಹೊಸ ಪ್ರಸ್ತಾವಗಳ ಆಧಾರದ ಮೇಲೆ ಹೊಸ ವಿಶ್ವಸಂಸ್ಥೆಯನ್ನು ರೂಪಿಸುವುದು. ಮೊದಲನೆಯ ಹಂತದ ಸುಧಾರಣೆಗಳ ಭಾಗವಾಗಿ ನಾಲ್ಕು ಪ್ರಸ್ತಾವಗಳನ್ನು ಚವೇಝ್ ಮುಂದಿಟ್ಟರು.

ಅಂತರ್ರಾಷ್ಟ್ರೀಯ ನಗರದಲ್ಲಿ ವಿಶ್ವಸಂಸ್ಥೆ

ಹೊಸ ವಿಶ್ವಸಂಸ್ಥೆಯ ದೂರಗಾಮಿ ಯೋಜನೆಗಳ ಬಗ್ಗೆ ಮಾತನಾಡುತ್ತಾ, ವಿಶ್ವಸಂಸ್ಥೆ ನ್ಯೂಯಾರ್ಕ್‌ನಿಂದ ಹೊರಬರಬೇಕು. ಹೆಚ್ಚಿನ ಅಂತರ್ರಾಷ್ಟ್ರೀಯ ಒಪ್ಪಂದಗಳು, ವಿಶ್ವಸಂಸ್ಥೆಯ ನಿರ್ಣಯಗಳನ್ನು ಮಾನ್ಯ ಮಾಡದ ದೇಶದಲ್ಲಿ ವಿಶ್ವಸಂಸ್ಥೆ ಇರಬಾರದು. 1815 ರಲ್ಲಿ ದಕ್ಷಿಣ ಅಮೆರಿಕದ ಕ್ರಾಂತಿಕಾರಿ ಜನನಾಯಕ ಸೈಮನ್ ಬೊಲಿವರ್ ಹೇಳಿದಂತೆ ಜಾಗತಿಕ ಐಕ್ಯತೆಗೆ ಮಾದರಿಯಾಗಬಹುದಾದ ಅಂತರ್ರಾಷ್ಟ್ರೀಯ ನಗರವೊಂದನ್ನು ನಿರ್ಮಿಸಬೇಕು. ಹೊಸ ವಿಶ್ವಸಂಸ್ಥೆ ಇಂತಹ ಒಂದು ಅಂತರ್ರಾಷ್ಟ್ರೀಯ



ನಗರದಿಂದ ಕೆಲಸ ಮಾಡಬೇಕು ಎಂಬ ಎಲ್ಲರನ್ನು ಅವಾಕ್ಕುಗೊಳಿಸಿದ ಹೊಸ ಪ್ರಸ್ತಾವ ಚವೇಝ್ ಮುಂದಿಟ್ಟರು.

ಜಗತ್ತು ಇಂದು ಎದುರಿಸುತ್ತಿರುವ (ತೈಲ ಸೇರಿದಂತೆ) ಇಂಧನ ಅಭದ್ರತೆ ಬಿಕ್ಕಟ್ಟು, ಸಾಗರಗಳ ಬಿಸಿಯುವಿಕೆ ಮುಂತಾದ ಕಾರಣಗಳು, ಆಗುತ್ತಿರುವ ಕತ್ರಿನಾ ಮುಂತಾದ ಪ್ರಾಕೃತಿಕ ಪ್ರಕೋಪಗಳ ಬಗ್ಗೆ ಚವೇಝ್ ಪ್ರಸ್ತಾಪಿಸಿದರು. ಇಂತಹ ಜಾಗತಿಕ ಸಮಸ್ಯೆಗಳನ್ನು ಎದುರಿಸಲು ವಿಶ್ವಸಂಸ್ಥೆ ಸಜ್ಜಾಗಬೇಕು. ಇದರ ಬದಲು ಅಮೆರಿಕದ ಯಜಮಾನಿಕೆಯಲ್ಲಿ ಅದರ ಸಾಮಾಜಿಕ ಅರ್ಥವ್ಯವಸ್ಥೆಯನ್ನು ಇಡೀ ಜಗತ್ತಿನ ಮೇಲೆ ವಿಶ್ವಸಂಸ್ಥೆ ಸೇರಿದಂತೆ ಇತರ ಅಂತರ್ರಾಷ್ಟ್ರೀಯ ಸಂಘಟನೆಗಳ ಮೂಲಕ ಹೇರಲಾಗುತ್ತಿದೆ. ಇದು ನಿಲ್ಲಬೇಕು ಎಂದು ಚವೇಝ್ ಹೇಳಿದರು.

ಹೊಸ ಆರ್ಥಿಕ ವ್ಯವಸ್ಥೆ

1974ರಲ್ಲಿ ವಿಶ್ವಸಂಸ್ಥೆ ಕರೆಕೊಟ್ಟ ಹೊಸ ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಕಾರ್ಯಯೋಜನೆ ಅಂಗೀಕರಿಸಲಾಗಿತ್ತು. ಅದನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವಿಶೇಷ ಮಹಾಧಿವೇಶನ ಭಾರಿ ಬಹುಮತ(120 ಪರ, ಕೇವಲ 6 ವಿರುದ್ಧ, 10 ತಟಸ್ಥ ಮತಗಳು ಇದ್ದವು)ದಿಂದ ಅಂಗೀಕರಿಸಲಾಗಿತ್ತು. ಇಂದು ಆ ಯೋಜನೆಯನ್ನು ಜಾರಿ ಮಾಡಬೇಕಾಗಿದೆ. ಅಮೆರಿಕ ಮತ್ತಿತರ ಶ್ರೀಮಂತದೇಶಗಳು ಬಡದೇಶಗಳ ಮೇಲೆ ಐಎಂಎಫ್, ವಿಶ್ವಬ್ಯಾಂಕ್‌ಗಳ ಮೂಲಕ ಹೊರಿಸಿದ ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸುವುದು ಅದರ ಉದ್ದೇಶವಾಗಿತ್ತು. ಇದು ಹಿಂದೆಂದಿಗಿಂತಲೂ ಜರೂರಿನ ಕೆಲಸ ಎಂದು ಚವೇಝ್ ವಿಶ್ವನಾಯಕರಿಗೆ ಕರೆ ಕೊಟ್ಟರು.

ಹೊಸ ರಾಜಕೀಯ

ಹೊಸ ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಮಾತ್ರವಲ್ಲ, ರಾಜಕೀಯ ವ್ಯವಸ್ಥೆ ರೂಪಿಸುವ ಜರೂರುಸಹ ಇದೆ. ಧಾಳಿ ತಡೆಯುವ ಮೊದಲೆ ಧಾಳಿ, ರಕ್ಷಣೆಯ ಜವಾಬ್ದಾರಿ ಹೆಸರಲ್ಲಿ ಮಿಲಿಟರಿ ಮಧ್ಯ ಪ್ರವೇಶ ಮುಂತಾದ ಅನರ್ಥಕಾರಿ ನೀತಿಗಳನ್ನು ಜಗತ್ತಿನ ಮೇಲೆ ಹೊರಿಸಲಾಗುತ್ತಿರುವ ಕಾಲದಲ್ಲಿ ಅಂತರ್ರಾಷ್ಟ್ರೀಯ ಕಾನೂನುಗಳ ಬಗ್ಗೆ ಗೌರವ, ಮಿಲಿಟರಿ ಹಸ್ತಕ್ಷೇಪ-ಯುದ್ಧ ತಡೆಯುವದರ ಬಗ್ಗೆ - ಇವುಗಳ ಬಗ್ಗೆ ತೀವ್ರ ಪ್ರಯತ್ನ ನಡೆಸಬೇಕಾಗಿದೆ. ಅದೇ ರೀತಿ ಶ್ರೀಮಂತ ದೇಶಗಳ 'ಎರಡೆಳೆ ನಾಲಿಗೆ' ನೀತಿ ಕೊನೆಗೊಳಿಸಿ, ನಿಜವಾದ ಸಹಕಾರದಿಂದ ಮಾತ್ರ - ಅಂತರ್ರಾಷ್ಟ್ರೀಯ ಭಯೋತ್ಪಾದನೆ ವಿರುದ್ಧ ಹೋರಾಟ ಸಫಲವಾಗಲಿದೆ. ಇನ್ನೊಂದು ದೇಶದ ಅಧ್ಯಕ್ಷನ ಕೊಲೆಗೆ ಸಾರ್ವಜನಿಕವಾಗಿ ಕರೆ ಕೊಡುವ ಅವಕಾಶವಿರುವ ಏಕಮಾತ್ರ ದೇಶ ಅಮೆರಿಕ. ತನ್ನ ಹತ್ಯೆಗೆ ಕರೆಕೊಟ್ಟ ಶ್ವೇತಭವನದ ಹತ್ತಿರ ಇರುವವ ಎನ್ನಲಾದ ರೆವರೆಂಡ್ ಪ್ಯಾಟ್ ರೋಬ್‌ಸನ್ ಮೇಲೆ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ. ಇದು ಅಂತರ್ರಾಷ್ಟ್ರೀಯ ಭಯೋತ್ಪಾದಕತೆ ಅಲ್ಲವೇ? ಎಂದು ಚವೇಝ್ ಪ್ರಶ್ನಿಸಿದರು.

ಕಳೆದ ಏಳು ವರ್ಷದಲ್ಲಿ ಸಾಮ್ರಾಜ್ಯಶಾಹಿ ಹಸ್ತಕ್ಷೇಪ, ಹತ್ಯೆ ಬೆದರಿಕೆ, ಆರ್ಥಿಕ ದಿಗ್ಬಂಧನ, ಮಾಲಕರ ಲಾಕೌಟ್ - ಇತ್ಯಾದಿ ಇದ್ದಾಗ್ಯೂ ವೆನೆಜುವೆಲಾ ದೊಡ್ಡ ಸಾಧನೆಗಳನ್ನು ಮಾಡಿದೆ. ಅನಕ್ಷರತೆ ನಿರ್ಮೂಲನ, ಸಾರ್ವತ್ರಿಕ ಆರೋಗ್ಯ ಸೇವೆ, ಸುಲಭ ಬೆಲೆಯಲ್ಲಿ ಆಹಾರ ಪೂರೈಕೆಗಳಲ್ಲಿ ವೆನೆಜುವೆಲಾದ ಅದ್ಭುತ ಸಾಧನೆಗಳನ್ನು ಚವೇಝ್ ವಿವರಿಸಿದರು. ಲ್ಯಾಟಿನ್ ಅಮೆರಿಕ ಮತ್ತು ಇಡೀ ಜಗತ್ತಿನ ಎದುರೂ ಇರುವ ಈ ಪ್ರಶ್ನೆಗಳನ್ನು ಪರಿಹರಿಸಿ, ಶಾಂತಿ ಮತ್ತು ನ್ಯಾಯಯುತ ವ್ಯವಸ್ಥೆ ಕಾಪಾಡುವ ಮೂಲಕ ಮನುಕುಲವನ್ನು ಕಾಪಾಡುವವರೆಗೆ ತಾವು ವಿರಮಿಸುವುದಿಲ್ಲ ಎಂದು ಚವೇಝ್ ಘೋಷಿಸಿದರು.

ಚವೇಝರ ಭಾಷಣದ ಸಾರಾಂಶ
ವಿಶ್ವಸಂಸ್ಥೆ ಸುಧಾರಣೆಗೆ ನಾಲ್ಕು ಅಂಶದ ಸೂತ್ರ

1. ಭದ್ರತಾ ಸಮಿತಿಯ ವಿಸ್ತಾರ-ಶಾಶ್ವತ ಮತ್ತು ಶಾಶ್ವತವಲ್ಲದ ಸದಸ್ಯರ ಸಂಖ್ಯೆ ಹೆಚ್ಚಳ
2. ಕಾರ್ಯಾಚರಣೆಯಲ್ಲಿ ಪಾರದರ್ಶಕತೆಯ ಹೆಚ್ಚಳ
3. ವಿಟೊ ಅಧಿಕಾರವನ್ನು ಕಿತ್ತುಹಾಕಬೇಕು.
4. ಮಹಾ ಕಾರ್ಯದರ್ಶಿಯ ಪಾತ್ರ ಗಟ್ಟಿಗೊಳಿಸಬೇಕು - ಮುಖ್ಯವಾಗಿ ಬಿಕ್ಕಟ್ಟು/ ಯುದ್ಧ ತಡೆಗಟ್ಟುವ ರಾಜತಾಂತ್ರಿಕ ಕ್ರಮಗಳಲ್ಲಿ

- ಕೆಲವೇ ದಿನಗಳಲ್ಲಿ ವೆನೆಜುವೆಲಾ ಸಂಪೂರ್ಣ - ಸಾಕ್ಷರ ದೇಶವಾಗಲಿದೆ.
- ಶಿಕ್ಷಣದಿಂದ ವಂಚಿತರಾದ 30 ಲಕ್ಷ ವೆನೆಜುವೆಲಾನ್ನರು ಪ್ರಾಥಮಿಕ, ಮಾಧ್ಯಮಿಕ, ಉಚ್ಚ ಶಿಕ್ಷಣದಲ್ಲಿ ಪಾಲ್ಗೊಂಡಿದ್ದಾರೆ.
- ಆರೋಗ್ಯ ಸೇವೆ (ಉಚಿತ - ಔಷಧಿ ಸೇರಿದಂತೆ) ಪಡೆಯುತ್ತಿದ್ದಾರೆ.
- ಕೆಲವೇ ವರ್ಷಗಳಲ್ಲಿ ವೆನೆಜುವೆಲಾ ಎಲ್ಲಾ ನಾಗರಿಕರು ಉಚಿತ ಪ್ರಾಥಮಿಕ ಆರೋಗ್ಯ ಸೇವೆ ಪಡೆಯಲಿದ್ದಾರೆ.
- ದೇಶದ ಅರ್ಧ ಜನ ಕಡಿಮೆ ಬೆಲೆಯ (ಸಬ್ಸಿಡಿ ನೀಡಿಕೆ) ಆಹಾರ-ಧಾನ್ಯಗಳನ್ನು ಪಡೆಯುತ್ತಿದ್ದಾರೆ.
- ದೇಶದ ಶೇಕಡಾ 4 ಜನ (ದಟ್ಟದರಿದ್ರರು) ಉಚಿತ ಆಹಾರ-ಧಾನ್ಯ ಪಡೆಯುತ್ತಿದ್ದಾರೆ.
- ದೇಶದ ನಿರುದ್ಯೋಗ ದರ ಶೇಕಡ 9 ರಷ್ಟು ಕಡಿಮೆ ಮಾಡಲಾಗಿದೆ.

ಚವೇಝ್ ಭಾಷಣದಿಂದ ಆಯ್ದ ಭಾಗಗಳು

ವಿಶ್ವಸಂಸ್ಥೆ ಸಹಸ್ರಮಾನ ಉದ್ದೇಶಗಳ ಬಗ್ಗೆ

......2015 ರ ಹೊತ್ತಿಗೆ 84.2 ಕೋಟಿ ಹಸಿದವರ ಸಂಖ್ಯೆಯನ್ನು ಅರ್ಧಕ್ಕೆ ಇಳಿಸುವುದು ಒಂದು ಉದ್ದೇಶವಾಗಿತ್ತು. ಇಂದಿನ ಜಾರಿಯ ದರದಲ್ಲಿ ಈ ಉದ್ದೇಶ ಪೂರೈಕೆಯಾಗುವುದಕ್ಕೆ 2215 ಆದೀತು......

2015 ರ ಹೊತ್ತಿಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಸಾಧಿಸುವುದು ಇನ್ನೊಂದು ಉದ್ದೇಶವಾಗಿತ್ತು, ಇಂದಿನ ಜಾರಿಯ ದರದಲ್ಲಿ ಈ ಉದ್ದೇಶ ಪೂರೈಕೆ 2100 ರ ಹೊತ್ತಿಗೆ ಆಗಬಹುದು.....

* * *

ಹೊಸ ವಿಶ್ವಸಂಸ್ಥೆ

ಜಗತ್ತಿನ ಸ್ನೇಹಿತರೇ, ಇವೆಲ್ಲ ನಮ್ಮನ್ನು ಈಗ ಬೇಗರದ ತೀರ್ಮಾನಕ್ಕೆ ಒಯ್ಯುತ್ತದೆ. ವಿಶ್ವಸಂಸ್ಥೆಯ ಈಗಿನ ಮಾದರಿಯ ಸಾಧ್ಯತೆಗಳು ಮುಗಿದಿವೆ. ಸುಧಾರಣೆಗಳನ್ನು ತಂದರೂ ಇದು ನಿಜ. 21ನೇ ಶತಮಾನದ ಆಳವಾದ ಬದಲಾವಣೆಗಳನ್ನು ಎದುರಿಸಲು ಹೊಸ (ವಿಶ್ವ) ಸಂಘಟನೆ ಮಾಡಿದರೆ ಸಾಧ್ಯ. ಇಂದಿನ ವಿಶ್ವಸಂಸ್ಥೆ ಕೆಲಸ ಮಾಡುತ್ತಿಲ್ಲ. ಇದನ್ನು ನಾವು ಹೇಳಲೇಬೇಕಾಗಿದೆ. ಇದು ಸತ್ಯ.

* * *

ಹೊಸ ಅಂತರ್ರಾಷ್ಟ್ರೀಯ ನಗರ

ಸಾರ್ವಭೌಮತೆ, ಶಕ್ತಿ ಮತ್ತು ನೈತಿಕತೆ ಇದ್ದು ಎಲ್ಲಾ ದೇಶಗಳನ್ನು ಪ್ರತಿನಿಧಿಸುವ ಅಂತರ್ರಾಷ್ಟ್ರೀಯ ನಗರದ ನಿರ್ಮಾಣದ ಬಗ್ಗೆ ಯೋಚಿಸುವ ಸಮಯ ಬಂದಿದೆ ಎಂದು ನಮ್ಮ ಅನಿಸಿಕೆ. ಕಳೆದ ಐದು ಶತಕಗಳ ಅಸಮಾನತೆ, ಅಸಮತೋಲನಗಳನ್ನು ಈ ನಗರ ಸರಿಪಡಿಸಬೇಕಾಗಿದೆ. ಇತಹ ನಗರ ಹೊಸ ವಿಶ್ವಸಂಸ್ಥೆಯ ರಾಜಧಾನಿಯಾಗಿರಬೇಕು. ಅದು ಮೂರನೇ ಜಗತ್ತಿನಲ್ಲಿರಬೇಕು.

* * *

ಹೊಸ ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ

ಮೇ 1974 ರ ಪ್ರಸ್ತಾವ 3021 ರಲ್ಲಿ (ವಿಶ್ವಸಂಸ್ಥೆಯ ಸಾಮಾನ್ಯ)ಸಭೆ ಹೊಸ ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ನಿರ್ಮಿಸಲು ತುರ್ತಾಗಿ ಗಮನ ಕೊಡಲು ನಿರ್ಧರಿಸಿತ್ತು. ಆ ವ್ಯವಸ್ಥೆ...... ಗಮನವಿಟ್ಟುಕೇಳಿ.... ಎಲ್ಲಾ ದೇಶಗಳ ನಡುವೆ ಸಮಾನತೆ, ಸಾರ್ವಭೌಮ ಸಮಾನತೆ, ಪರಸ್ಪರ ಸಂಬಂಧ, ಸಾಮಾನ್ಯ ಆಸಕ್ತಿ ಮತ್ತು ಸಹಕಾರ; ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಭಿನ್ನತೆಯನ್ನು ಮೀರಿ ನಿಂತದ್ದು; ವಿಕಸಿತ ಮತ್ತು ವಿಕಾಸ ಹೊಂದುತ್ತಿರುವ ದೇಶಗಳಲ್ಲಿ ಅಸಮಾನತೆಯನ್ನು, ಅನ್ಯಾಯಗಳನ್ನು ಸರಿಪಡಿಸುವುದು ತಾಳಿಕೊಳ್ಳಬಲ್ಲದರಲ್ಲಿ ಸಾಮಾಜಿಕ-ಆರ್ಥಿಕ ಬೆಳವಣಿಗೆ....

* * *

ಅಂತರ್ರಾಷ್ಟ್ರೀಯ ಭಯೋತ್ಪಾದಕತನ

ಅಂತರ್ರಾಷ್ಟ್ರೀಯ ಭಯೋತ್ಪಾದನೆಯನ್ನು ಸೂಕ್ತರೀತಿಯಲ್ಲಿ ತುರ್ತಾಗಿ ಹೋಗಲಾಡಿಸುವುದು ಅಗತ್ಯ. ಆದರೆ ಅದನ್ನು ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮುರಿಯಲು ಮತ್ತು ಅನ್ಯಾಯಯುತ ಮಿಲಿಟರಿ ಆಕ್ರಮಣಕ್ಕೆ ನೆಪವಾಗಿ ಬಳಸದಿರುವುದು ಇದಕ್ಕೆ ಅಗತ್ಯ.



ಜನಮುಖಿ-ಜಾತ್ಯತೀತ ದಸರಕ್ಕಾಗಿ ಬರಗೂರು ದನಿ

ಇತ್ತೀಚೆಗೆ ಮುಕ್ತಾಯಗೊಂಡ ದಸರಾ ಉತ್ಸವದ ಉದ್ಘಾಟಕರಾಗಿ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪನವರು ಮಾಡಿದ ಭಾಷಣ ದಸರಾ ಉತ್ಸವದ ಕುರಿತು ಹೊಸ ಚರ್ಚೆಗಳನ್ನು ಹುಟ್ಟುಹಾಕಿದೆ. ಹೊಸ ಚಿಂತನೆಗಳ ಕುರಿತು ಎಂದೂ ಮುಕ್ತ ಮನಸ್ಸು ಹೊಂದಿರದ - ಪ್ರತಿಗಾಮಿ ವಿಚಾರದ ಸಂಘಪರಿವಾರ ಎಂದಿನಂತೆ ಈ ಚಿಂತನೆಗಳನ್ನು ಟೀಕಿಸಿದೆ. ಬರಗೂರರ ಭಾಷಣದ ಸಾರಾಂಶ ಇಲ್ಲಿದೆ.

ಅಕ್ಟೋಬರ್ 3ರಂದು ನಡೆದ ಈ ಬಾರಿಯ ದಸರಾ ಉತ್ಸವದ ಉದ್ಘಾಟನೆ ಎಂದಿನಂತಿರಲಿಲ್ಲ. ಚಾಮುಂಡಿ ಬೆಟ್ಟದಲ್ಲಿ ಚಾಮುಂಡಿ ದೇವಿಗೆ ಹಾಗೂ ರಥಕ್ಕೆ ನಡೆದ ಪೂಜಾ ಕಾರ್ಯಕ್ರಮದಲ್ಲಿ ಉದ್ಘಾಟಕರಾದ ಬರಗೂರು ರಾಮಚಂದ್ರಪ್ಪ ಅವರು ಭಾಗವಹಿಸಲಿಲ್ಲ. ಉದ್ಘಾಟನೆಗಾಗಿ ಸಮಾರಂಭವೊಂದನ್ನು ಯೋಜಿಸಲಾಗಿತ್ತು. ಅಲ್ಲಿ ದೀಪ ಬೆಳಗಿಸುವ ಸಾಂಕೇತಿಕ ಕ್ರಿಯೆಯ ಮೂಲಕ ಬರಗೂರು ಅವರು ಉತ್ಸವವನ್ನು ಉದ್ಘಾಟಿಸಿದರು.

"ಪಾಳೇಗಾರಿ(ಫ್ಯೂಡಲ್) ಸಂಸತಿ ಪೂರ್ಣವಾಗಿ ನಾಶವಾಗದೇ ಅದಕ್ಕೆ ಪೂರಕವಾದ ಸಾಮಾಜಿಕ, ಆರ್ಥಿಕ ಪಳೆಯುಳಿಕೆಗಳು ಇನ್ನೂ ಜೀವಂತವಾಗಿರುವ ಈ ಸನ್ನಿವೇಶದಲ್ಲಿ 'ಸಾಂಸತಿಕ ಜನೋತ್ಸವ'ದ ಸ್ವರೂಪಕ್ಕೆ ಸಮೀಪಕ್ಕೆ ಬರುತ್ತಿರುವ ದಸರಾ ಉತ್ಸವವು ಇನ್ನಷ್ಟು ಸಾಂಸತಿಕ ಖಚಿತತೆಯನ್ನು ಪಡೆದುಕೊಂಡು ಧರ್ಮನಿರಪೇಕ್ಷ ನೆಲೆಯನ್ನು ಪಡೆಯಬೇಕಾಗಿದೆ ಎಂಬ ಆಶಯವನ್ನು ಬರಗೂರು ಅವರು ವ್ಯಕ್ತಪಡಿಸಿದ್ದು, ಅದಕ್ಕೆ ಪೂರಕವಾಗಿ ಪೂಜೆಯಿಂದ ಹೊರತಾದ ಪತ್ಯೇಕ ಉದ್ಘಾಟನಾ ಸಮಾರಂಭದ ಉದ್ಘಾಟನೆಯ ಮೂಲಕ ಹೊಸ ಪರಂಪರೆಗೆ ನಾಂದಿ ಹಾಡಿದ್ದಾರೆ.

'ದಸರಾ ಆಚರಣೆಯ ಹುಟ್ಟಿಗೆ ಕಾರಣವೆಂದು ಹೇಳಲಾದ ಆರಂಭದ ಆಶಯಗಳು ಇಂದಿಗೂ ಆದರ್ಶವಾಗಬೇಕೆ?' ಎಂಬ ಪ್ರಶ್ನೆಯನ್ನೆತ್ತಿರುವ ಬರಗೂರು ರಾಮಚಂದ್ರಪ್ಪ, 'ದೈವಿಕ ಶಕ್ತಿ-ದಾನವ ಶಕ್ತಿಗಳ ನಡುವೆ ಹೋರಾಟ ಇತ್ಯಾದಿ ಪುರಾಣಗಳ ಪ್ರಶ್ನೆಗಳ ನಿರ್ವಚನವನ್ನೂ ಏಕಮುಖವಾಗಿ ನೋಡುವುದು ಸಾಧ್ಯವಿಲ್ಲ ಎಂದಿದ್ದಾರೆ. ಇದರ ಜೊತೆಗೆ "ಸಂಹಾರವು ಇವತ್ತಿನ ಆದರ್ಶವೇ?", "ಆಯುಧಗಳು ನಮ್ಮ ಆದರ್ಶವೇ?" ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ.

ಇದೇ ಹಿನ್ನೆಲೆಯಲ್ಲಿ 'ಹಿಂಸೆ', 'ಸಂಹಾರ ಸಂಸತಿ'ಯ ಪ್ರಶ್ನೆಗಳನ್ನು ಚರ್ಚಿಸಿರುವ ಬರಗೂರು ಅಮೇರಿಕಾ- ಬ್ರಿಟನ್ ಮುಂತಾದ ಸಾಮ್ರಾಜ್ಯಶಾಹಿ ದೇಶಗಳ ಆಕ್ರಮಣಗಳು 'ಯುದ್ಧೋತ್ಪಾದನೆ'ಯ ಹಿಂಸೆಯನ್ನು ಈ 'ಯುದ್ಧೋತ್ಪಾದನೆಯ ವಿರುದ್ಧ ಹೋರಾಟ' ಎನ್ನಲಾಗುವ 'ಭಯೋತ್ಪಾದನೆಯ ಹಿಂಸೆ'ಯನ್ನು ಪ್ರಸ್ತಾಪಿಸಿದ್ದಾರೆ. ಧಾರ್ಮಿಕ ಮೂಲಭೂತವಾದಿಗಳ ಭಯೋತ್ಪಾದನೆಯ ಬಂದೂಕು, ಪಿಸ್ತೂಲುಗಳ ಹಿಂಸೆಯಂತೆಯೇ 'ತ್ರಿಶಲಾದಿ' ಸಂಕೇತ ಶಕ್ತಿಗಳನ್ನು ಬಳಸುವ ರಾಜಕೀಯ ಉಗ್ರಗಾಮಿತ್ವದ ಬಗೆಗೂ ಪ್ರಸ್ತಾಪಿಸಿದ್ದಾರೆ.

'ರಾಜ್ಯಾಧಿಕಾರ'ದ ಹೆಚ್ಚಿರುವ 'ಸಂಹಾರ ಸಂಸತಿ'ಯ ಅಪಾಯದ ಬಗೆಗೆ ಗಮನ ಸೆಳೆದಿರುವ ಬರಗೂರು ವಿಶ್ವದಲ್ಲಿ ಒಂದು ನಿಮಿಷಕ್ಕೆ ಸರಾಸರಿ ಸುಮಾರು ಏಳುಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಸೈನಿಕ ವ್ಯವಸ್ಥೆಗಾಗಿ ಖರ್ಚು ಮಾಡಲಾಗುತ್ತದೆಂಬ ಅಂದಾಜಿನ ಬಗ್ಗೆ ಹಾಗೂ ದೇಶದ ಬಜೆಟ್‌ನಲ್ಲಿ 66,000 ಕೋಟಿ ರೂಗಳನ್ನು ರಕ್ಷಣೆಗೆ ನೀಡಿ, ಉದ್ಯೋಗಾವಕಾಶ ಸೃಷ್ಟಿಗೆ ಕೇವಲ 6,100 ಕೋಟಿ ರೂಗಳನ್ನು ತೆಗೆದಿಟ್ಟಿರುವ ಬಗೆಗೂ ಪ್ರಸ್ತಾಪಿಸಿದ್ದಾರೆ.

'ರಾಜ್ಯಾಧಿಕಾರವನ್ನೊಳಗೊಂಡಂತೆ ಯಾರಿಗೂ ಆಯುಧ ಆದ್ಯತೆಯಾಗಬಾರದು, ಆದರ್ಶವಾಗಬಾರದು' ಎಂದಿರುವ ಬರಗೂರು ಇಂದಿನ ದುಷ್ಟ ಶಕ್ತಿಗಳಾದ ಜಾತಿಭೇದ, ವರ್ಗಭೇದ, ಲಿಂಗಭೇದ ಮುಂತಾದ ಅನಿಷ್ಟ ನೀತಿಗಳನ್ನು ಅಳಿಸಿಹಾಕಲು ಸಂಕಲ್ಪ ಕೈಗೊಳ್ಳಬೇಕು ಮತ್ತು ಸಮಾನತೆಯಲ್ಲಿ ಶಾಂತಿಯನ್ನು ಕಾಣಬೇಕೆಂಬ ಆಶಯ ವ್ಯಕ್ತಪಡಿಸಿದ್ದಾರೆ. ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಹಲವು ಪ್ರಗತಿಪರ ನಿಲುವು-ಕ್ರಮ ಗಳನ್ನು ಸ್ಮರಿಸಿ ಪ್ರಶಂಸಿರುವ ಬರಗೂರು ರಾಮಚಂದ್ರಪ್ಪ ಇದೇ ನಾಲ್ವಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲಿ ರಾಷ್ಟ್ರ ಪ್ರಶಸ್ತಿಯೊಂದನ್ನು ಸ್ಥಾಪಿಸಬೇಕೆಂದೂ ಸೂಚಿಸಿದ್ದಾರೆ.

ಸಂಘ ಪರಿವಾರದ ಪ್ರಲಾಪ

ಸಂಘ ಪರಿವಾರದ ಅಂಗ 'ಪಕ್ಷ' ಬಿಜೆಪಿ ಮುಖಂಡ ಯಡಿಯೂರಪ್ಪ ಮತ್ತಿತರರಿಗೆ ದಸರಾ ಉದ್ಘಾಟನಾ ಭಾಷಣ ಕೇಳಿ ಕರುಳಿನಲ್ಲಿ ಖಾರ ಕಲೆಸಿದಂತಾಗಿದೆ.

ಪದ್ಧತಿಯಂತೆ ಚಾಮುಂಡಿ ದೇವಿಗೆ ಪೂಜೆ ಸಲ್ಲಿಸದೇ ದಸರಾ ಉತ್ಸವ ಉದ್ಘಾಟನೆಯಾಗಿ ಹೋಗಿದೆ. ಅದೂ ನಮ್ಮ ಪರಂಪರೆಯ ಬಗೆಗೆ ಗೌರವವಿಲ್ಲದವರಿಂದ ಉದ್ಘಾಟನೆಯಾಗಿದೆ ಎಂದೆಲ್ಲಾ ಅವರು ಊಳಿಟ್ಟಿದ್ದಾರೆ.

ಆಯುಧಗಳನ್ನು ಆರಾಧಿಸುವವರು - ಸಂಹಾರ ಸಂಸತಿಯ ವಕ್ತಾರರು ಪಾಪ ಇನ್ನೇನು ತಾನೇ ಹೇಳಿಯಾರು? ಆರೆಸ್ಸೆಸ್ ಅತ್ಯಂತ ಸಂಭ್ರಮ-ಉತ್ಸಾಹಗಳಿಂದ (ವಿದ್ವೇಷದಿಂದ) ಆಚರಿಸುವ ಹಬ್ಬಗಳಲ್ಲಿ ವಿಜಯದಶಮಿಯೇ ಅಗ್ರಗಣ್ಯವಾದದ್ದು. ಅದು 'ಶತ್ರುಗಳ' ವಿರುದ್ಧದ ಗೆಲುವು ಎಂಬ ರಣೋತ್ಸಾಹವೇ ಈ ಸಂಭ್ರಮದ ಮೂಲ. ಇಂದಿಗೂ ಆರೆಸ್ಸೆಸ್‌ನ ಶಿಬಿರಗಳಲ್ಲಿ ಸ್ವಯಂಸೇವಕರನ್ನು ಎರಡೂ ತಂಡವಾಗಿ ವಿಭಾಗಿಸಿ 'ಯುದ್ಧದ ಆಟ'ವನ್ನಾಡಿಸಲಾಗುತ್ತದೆ. 'ಶತ್ರು'ಗಳ ವಿರುದ್ಧ ವಿಷಕಾರುವ 'ಸಂಘಮಿತ್ರ'ರಿಗೆ ದಸರಾ ಉದ್ಘಾಟನೆಯ ಗೌರವ ಸಿಗದೆ, ಜಾತಿಯತೆ- ಕೋಮುವಾದ, ಲಿಂಗ ತಾರತಮ್ಯಗಳ ವಿರುದ್ಧ, ಸಮಾನತೆಯ ಪರವಾಗಿ ಮಾತನಾಡುವವರಿಗೆ ಆ ಗೌರವ ಸಿಕ್ಕಿದರೆ ಪಾಪ ಸಂಕಟವಾಗದೇ ಇರುತ್ತದೆಯೇ?





ರಾಜಪ್ರಭುತ್ವದ ಸಂದರ್ಭದಲ್ಲಿದ್ದ ಆಚರಣೆಗಳಿಗಷ್ಟೇ ದಸರಾ ಉತ್ಸವ ಸೀಮಿತಗೊಳ್ಳಬೇಕೆ?

ಸೆ 29 ರ ಮುಷ್ಕರದ ಯಶಸ್ಸಿನ ಮಾರ್ದನಿ

ಪಕ್ಷವನ್ನು ಗುರುತಿಸಿದ ಮಂಡ್ಯದ ಜನತೆ: ಯಶಸ್ವಿ ಮುಷ್ಕರ

ಅಚ್ಚ ಹಸಿರಿನಲ್ಲಿ ಲೀನವಾಗಿರುವ ಮಂಡ್ಯ ಜಿಲ್ಲೆಯಲ್ಲಿ ಅನ್ಯಾಯ ಕಂಡಲ್ಲಿ ಹೋರಾಟಕ್ಕೆ ಬೀದಿಗಿಳಿಯುವ ಸಮುದಾಯಕ್ಕೆ ಕೊರತೆ ಇಲ್ಲ. ಇಂತಹದೊಂದು ಸೆಪ್ಟೆಂಬರ್ 29ರ ಯಶಸ್ವಿ ಬಂದ್. ಈ ಹೋರಾಟಕ್ಕೆ ಪುಟ್ಟಣ್ಣಯ್ಯ ಬಣದ ರೈತ ಸಂಘ, ದಲಿತ ಸಂಘರ್ಷ ಸಮಿತಿಗಳು ಸಹ ನಮ್ಮೊಡನೆ ಕೈ ಜೋಡಿಸಿದ್ದು, ಅದರ ಫಲವಾಗಿ 20 ಸಾವಿರ ಕರಪತ್ರದ ಹಂಚಿಕೆ ಮೂರು ದಿನದ ಆಟೋ ಪ್ರಚಾರ ಮಳವಳ್ಳಿ, ಕೆ.ಎಂ. ದೊಡ್ಡಿ, ಮದ್ದೂರು ಪಟ್ಟಣಗಳಲ್ಲಿ 28ರ ರಾತ್ರಿ ನೂರಾರು ಸಂಖ್ಯೆಯಲ್ಲಿ ಪಂಜಿನ ಮೆರವಣಿಗೆ, ಮಂಡ್ಯ ನಗರದಲ್ಲಿ ನೂರಾರು ಕೂಲಿ ಕಾರ್ಮಿಕರ ಮತ್ತು ಮಹಿಳೆಯರ ಮೆರವಣಿಗೆ. ಸಾಲದೆಂಬಂತೆ ಮಂಡ್ಯ ಸಿಟಿ ಚಾನಲ್ ದೂರದರ್ಶನದಲ್ಲಿ ಬಂದ್ ಮಾಡಲು ಗಂಟೆಗೊಮ್ಮೆ ದಿನವಿಡಿ ಪ್ರಚಾರ, ಪರಿಣಾಮ 29ರಂದು ಮಳವಳ್ಳಿ, ಕೆ.ಎಂ.ದೊಡ್ಡಿ, ಸರ್ಕಾರಿ ಕಛೇರಿಗಳನ್ನೊಳಗೊಂಡು ಸಂಪೂರ್ಣ ಬಂದ್, ಮಳವಳ್ಳಿ ಪಟ್ಟಣದಲ್ಲಿ ಆರು ಕಡೆ ಯೋಜಿತ ರಸ್ತೆ ತಡೆ. ಬೆಳಿಗ್ಗೆ 6 ರಿಂದ ಮಧ್ಯಾಹ್ನ 2ರವರೆಗೆ ಜಿಲ್ಲಾ ಎಸ್.ಪಿ. ವಾಹನವನ್ನು ತಡೆಹಿಡಿದು ಯಶಸ್ವಿಯಾದ ಮಹಿಳಾ ಚಳುವಳಿಗಾರರು, ಬೆಂಗಳೂರಿನಿಂದ ಕನಕಪುರ ಮೂಲಕ ಬರುವ ಕೆಎಸ್‌ಆರ್‌ಟಿಸಿ ಸಾರಿಗೆ ಕೊಳ್ಳೆಗಾಲ ಮತ್ತು ಮೈಸೂರು ರಸ್ತೆಯಲ್ಲಿ ಚಲಿಸದಂತಾಗಿ ಇಂಥದೊಂದು ಚಳುವಳಿಯನ್ನು ನೊಡ್ಲೆ ಇಲ್ಲ ಕಂಡ್ಲೊ" ಎಂದು ವೃದ್ಧರಿರ್ವರು ಮಾತನಾಡಿಕೊಳ್ಳುವುದು. "ಮಹಿಳೆಯರು ಬೀದಿಗೆ ಬಂದವರೆ ಅಂದ್ರೆ ಏನಂತಿ ಕಂಡ್ಲ" ಎಂಬ ಮಾತು ಯಶಸ್ವಿ ಬಂದ್‌ಗೆ ಹಿಡಿದ ಕನ್ನಡಿಯಾಗಿದೆ.





ಕಾಗೆಪುರ, ಕೆ.ಎಂ.ದೊಡ್ಡಿ, ಮದ್ದೂರು, ಮಂಡ್ಯ, ಮೈಸೂರು, ಬೆಂಗಳೂರು ಮುಖ್ಯ ರಸ್ತೆಗಳು ಹೀಗೆ ಎಲ್ಲಾಕಡೆ ರಾಸ್ತಾ ರೋಕೋ. ತೃಪ್ತರಾಗದೇ ಪಾಂಡವಪುರ ಮತ್ತು ಮಂಡ್ಯದ ಎರಡು ಕಡೆ ರೈಲು ನಿಲ್ಲಿಸಿ ಆಳುವ ಜನರಿಗೆ ಕೇಳಿದ ಪ್ರಶ್ನೆಗಳು, ಮೊಳಗಿದ ಘೋಷಣೆಗಳು ನೂರಾರು. ಚಳುವಳಿಗೆ ಬೆಂಬಲ ನೀಡಿದ ಸಾವಿರಾರು ಪಯಣಿಗರು. ಯಶಸ್ವಿ ಬಂದ್.

ಮಂಡ್ಯ ನಗರದ ವರ್ತಕರು ತಾವು ನಾಶವಾಗುತ್ತಿರುವುದನ್ನು ಮರೆತ ವರ್ತಕ ಸಂಘದ ಗೆಳೆಯರಿಂದ ಬಂದ್‌ನಿಂದ ವಿನಾಯ್ತಿಗೆ ಪೋಲೀಸರಿಗೆ ಮೊರೆ, ಆಳುವ ವರ್ಗವನ್ನು ರಕ್ಷಿಸುವವರಂತೆ ಪೋಲಿಸ್ ಬಂದೋಬಸ್ತ್. ನಾವು ಬಂದ್ ಮಾಡಲು ಹೊರಟ ರಸ್ತೆಯಲ್ಲೆಲ್ಲಾ ಪೊಲೀಸರ ಗೋಡೆ, ಆದರೂ ಹೊಳಲು, ಆರ್.ಪಿ. ನೂರಡಿ, ವಿ.ವಿ., ರಸ್ತೆಯನ್ನೊಳಗೊಂಡ ಶೇ.40 ಭಾಗದಷ್ಟು ಬಂದ್ ಯಶಸ್ವಿ, ಶ್ರೀರಂಗಪಟ್ಟಣ, ನಾಗಮಂಗಲ, ಕೆ.ಆರ್.ಪೇಟೆಗಳಲ್ಲಿ 27ರಿಂದ ಕುಳಿತಿದ್ದ ಧರಣಿ ಸ್ಥಳದಿಂದ ಸಿಡಿದೆದ್ದ ಗ್ರಾಮ ಪಂಚಾಯ್ತಿ ನೌಕರರರಿಂದ ಆಳುವವರ ವಿರುದ್ಧ ಮೆರವಣಿಗೆ. ಈ ಅಬ್ಬರಕ್ಕೆ ನಾವು ನಿಮ್ಮೊಡನೆ ಇದ್ದೇವೆಂದು ಮಂಡ್ಯ, ಮದ್ದೂರು, ಕೆ.ಎಂ.ದೊಡ್ಡಿ, ಮಳವಳ್ಳಿ ತಾಲೂಕಿನ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಾಲೇಜು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಬೀದಿಗಳಲ್ಲಿ ಸಾಗುತ್ತಿದ್ದ ದೃಶ್ಯ ಅಮೋಘ. ಹೀಗೆ ಗ್ರಾಮ ಪಂಚಾಯ್ತಿ ನೌಕರರು, ಬಿಸಿಯೂಟದ ನೌಕರರು, ಅಂಗನವಾಡಿ ಕಾರ್ಯ ಕರ್ತರು, ಕಾರ್ಖಾನೆಯ ಕಾರ್ಮಿಕರು, ಸರ್ಕಾರಿ ನೌಕರರ ಒಕ್ಕೂಟ, ಬಿಎಸ್‌ಎನ್‌ಎಲ್, ಬಿಇಎಫ್‌ಐ, ಎಲ್‌ಐಸಿ, ಅಂಚೆ ಕಛೇರಿಯ ಗೆಳೆಯರು, ಗುಡಿಸಲು ನಿವಾಸಿಗಳು, ಜನವಾದಿ ಮಹಿಳಾ ಸಂಘಟನೆ, ಕೃಷಿ ಕೂಲಿಗಾರರ ಸಂಘ, ಎಸ್‌ಎಫ್‌ಐ, ಡಿವೈಎಫ್‌ಐ., ಕೆಪಿಆರ್‌ಎಸ್, ಕೆಆರ್‌ಆರ್‌ಎಸ್, ಡಿಎಸ್‌ಎಸ್‌ನ ಒಟ್ಟಾರೆ ಮೂರು ಸಾವಿರ ಮೀರಿದ ಜನರು ಪ್ರತಿಭಟಿಸಿದ್ದು ಮಂಡ್ಯದ ಇತಿಹಾಸದಲ್ಲಿ ದಾಖಲಾಗುತ್ತದೆ. ಈ ಚಳುವಳಿಯ ಕುರಿತು ಮಾಧ್ಯಮದಲ್ಲಿಯೂ ವ್ಯಾಪಕ ಪ್ರಚಾರ ದೊರೆತಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಂಸ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor S.Y.GURUSHANTH